₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಸೋಮವಾರ 14.04.2025** **ಸಂಪುಟ:** 10 **ಸಂಚಿಕೆ:**90 **ಪುಟಗಳು:** 12 **ಪ್ರಧಾನ ಸಂಪಾದಕ:** ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಕಿಂಗ್ ಕೊಹ್ಲಿ 100ನೇ ಅರ್ಧ ಶತಕ

ಜೈಪುರದಲ್ಲಿ ಭಾನುವಾರ ರಾಜಸ್ಥಾನ ರಾಯಲ್ಸ್ ತಂಡದ ವಿರುದ್ಧ ವಿರಾಟ್ ಕೊಹ್ಲಿ ಅಜೇಯ 62 ರನ್ ಬಾರಿಸುವ ಮೂಲಕ ಟಿ20 ಕ್ರಿಕೆಟ್ ನಲ್ಲಿ 100ನೇ ಅರ್ಧ ಶತಕ ಸಿಡಿಸಿದ್ದಾರೆ. ವಿರಾಟ್ ಕೊಹ್ಲಿ ಮತ್ತು ಫಿಲ್ ಸಾಲ್ಟ್ (65) ಅವರ ಜತೆಯಾಟದ ಮೂಲಕ ಈ ಪಂದ್ಯವನ್ನು ಆರ್‌ಸಿಬಿ ಸುಲಭವಾಗಿ ಗೆದ್ದು ಅಂಕಪಟ್ಟಿಯಲ್ಲಿ ಮತ್ತೆ 3ನೇ ಸ್ಥಾನಕ್ಕೇರಿದೆ.

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ವಿದ್ಯಾವಂತರಾಗಿ, ಸಂಘಟಿತರಾಗಿ ಮತ್ತು ಉತ್ತೇಜಿತರಾಗಿರಿ..!
-ಡಾ. ಬಿ.ಆರ್. ಅಂಬೇಡ್ಕರ್

134ನೇ ಜನ್ಮದಿನಾಚರಣೆ

ಸಂವಿಧಾನ ಶಿಲ್ಪಿ, ಮಹಾ ಮಾನವತಾವಾದಿ, ಭಾರತ ರತ್ನ
ಡಾ. ಬಿ.ಆರ್. ಅಂಬೇಡ್ಕರ್ ರವರ
ಪ್ರತಿಮೆಗೆ ಮಾಲಾರ್ಪಣೆ
ಏಪ್ರಿಲ್ 14, 2025 ಸೋಮವಾರ, ಬೆಳಿಗ್ಗೆ 10.30 ಗಂಟೆಗೆ
ವಿಧಾನಸೌಧದ ಪೂರ್ವ ದ್ವಾರ, ಬೆಂಗಳೂರು

ವೇದಿಕೆ ಕಾರ್ಯಕ್ರಮ
ವಿಧಾನಸೌಧದ ಮುಂಭಾಗ, ಪೂರ್ವದ್ವಾರ ಭವ್ಯ ಮೆಟ್ಟಿಲುಗಳು, ಬೆಂಗಳೂರು
ಸಮಯ - ಬೆಳಿಗ್ಗೆ 10.45 ಗಂಟೆಗೆ

ಡಾ. ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು, ಇಲಾಖೆಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸುತ್ತಿರುವುದು.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

@SWDGok

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕರುಣ್ ನಾಯರ್ ಮಿಂಚು

ದಿಲ್ಲಿಯಲ್ಲಿ ನಡೆದ ಮುಂಬೈ ಎದುರಿನ ಐಪಿಎಲ್ ಪಂದ್ಯದಲ್ಲಿ ಈ ಆವೃತ್ತಿಯಲ್ಲಿ ಮೊದಲ ಬಾರಿಗೆ ಆಡುವ ಅವಕಾಶ ಪಡೆದ ಕನ್ನಡಿಗ ಕರುಣ್ ನಾಯರ್ ಐದು ಸಿಕ್ಸ್, 12 ಬೌಂಡರಿ ಸಹಿತ 40 ಎಸೆತಗಳಲ್ಲಿ 89 ರನ್ ಬಾರಿಸಿ ತನ್ನ ಬ್ಯಾಟಿಂಗ್ ಪರಾಕ್ರಮ ಪ್ರದರ್ಶಿಸಿದರು. ಆದರೆ ದಿಲ್ಲಿ ತಂಡ ಈ ಪಂದ್ಯವನ್ನು 12 ರನ್‌ಗಳಿಂದ ಸೋತು ಮೊದಲ ಬಾರಿಗೆ ಸೋಲಿನ ಕಹಿ ಉಂಡಿದೆ.

ಜಾತಿಗಣತಿ: ಲಿಂಗಾಯತರ ಆಕ್ರೋಶ

ವೀರಶೈವ-ಲಿಂಗಾಯತ ವಿಂಗಡಣೆಗೆ ಆಕ್ಷೇಪ, ನಮ್ಮ ಜನಸಂಖ್ಯೆ 1 ಕೋಟಿ ಮೇಲಿದೆ: ಸಚಿವ ಎಂ ಬಿ ಪಾಟೀಲ್

ವರದಿ ಒಪ್ಪುವುದಿಲ್ಲ: ಶಂಕರ್ ಬಿದರಿ | ಸರಕಾರ ಯಾವುದೇ ಆತುರದ ನಿರ್ಧಾರ ತೆಗೆದುಕೊಳ್ಳುವುದಿಲ್ಲ: ಡಿಸಿಎಂ

ಬೆಂಗಳೂರು: ರಾಜ್ಯದಲ್ಲಿ ಬಹುವರ್ಷದ ಬೇಡಿಕೆ ಯಾಗಿದ್ದ ಜಾತಿ ಗಣತಿ ಮಂಡನೆ ಯಾದಾಗಿನಿಂದ ರಾಜಕೀಯ ಹಾಗೂ ಸಾಮಾಜಿಕವಾಗಿ ಪರ-ವಿರೋಧ ಚರ್ಚೆಗಳು ಜೋರಾಗಿದ್ದು, ಸಮೀಕ್ಷೆಯ ಬಹಿರಂಗದ ಬಳಿಕ ಒಕ್ಕಲಿಗರಿಂದ ಈವರೆಗೆ ಬಹಿರಂಗ ಹೇಳಿಕೆ ಬಹುದೊಡ್ಡ ಪ್ರಮಾಣದಲ್ಲಿ ಬಂದಿಲ್ಲ. ಆದರೆ ಲಿಂಗಾಯತ ಸಮುದಾಯದಿಂದ ವಿರೋಧ ವ್ಯಕ್ತವಾಗಿದ್ದು, ಲಿಂಗಾಯತ ಹಾಗೂ ಪಂಚಮಸಾಲಿ ಲಿಂಗಾಯತರನ್ನು ಪ್ರತ್ಯೇಕ ವಾಗಿಸಿರುವುದರಿಂದ ಇದೀಗ 'ಅಂಕಿ' ಯಲ್ಲಿ ಈ ಸಮುದಾಯಕ್ಕೆ ಹಿನ್ನಡೆಯಾಗಿದೆ ಎನ್ನುವುದು ಬಹುದೊಡ್ಡ ಆರೋಪವಾಗಿದೆ.

ಜಾತಿ ಗಣತಿಯಲ್ಲಿ ಲಿಂಗಾಯತ ಸಮುದಾಯದ ಉಪಜಾತಿಗಳನ್ನು ಪ್ರತ್ಯೇಕವಾಗಿ ತೋರಿಸಿರುವುದರಿಂದ ಸಂಖ್ಯೆಯಲ್ಲಿ ಕಡಿಮೆ ಯಾಗಿದೆ ಎನ್ನುವ ವಾದವನ್ನು ಬಹುತೇಕರು ಮಾಡುತ್ತಿದ್ದು, ಸ್ವತಃ ಸಚಿವ ಎಂ.ಬಿ. ಪಾಟೀಲ್ ಅವರೂ ಸಹ, ಲಿಂಗಾಯತರ ಸಂಖ್ಯೆ ಒಂದು ಕೋಟಿ ಮೇಲಿದೆ ಎಂದು ಹೇಳಿದ್ದಾರೆ. ಜಾತಿಗಣತಿ ಮತ್ತೊಮ್ಮೆ ಆಗಬೇಕಿದೆ. ಅಧಿಕಾರಿಗಳು ಮನೆಮನೆಗೆ ಭೇಟಿ ಕೊಡಬೇಕು ಎಂದು ರಂಭಾಪುರ ಶ್ರೀಗಳು ಮರು ಜಾತಿಗಣತಿಗೆ ಆಗ್ರಹಿಸಿದ್ದಾರೆ.

→ 4

ಸಚಿವರಿಗೆ ತಲುಪಿದ ವರದಿ

ಮುಂದಿನ ಗುರುವಾರ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯನ್ನು ಜಾತಿ ಗಣತಿಗೆ ಮೀಸಲಿರಿಸಿರುವುದರಿಂದ, ಹಿಂದುಳಿದ ವರ್ಗಗಳ ಇಲಾಖೆಯಿಂದ ಎಲ್ಲ ಸಚಿವರಿಗೂ ಒಂದೊಂದು ಸಂಪುಟವನ್ನು ರವಾನಿಸಲಾಗಿದೆ. ಪ್ರಮುಖವಾಗಿ ಲಿಂಗಾಯತ ಹಾಗೂ ಒಕ್ಕಲಿಗ ಸಚಿವರು ಈ ಗಣತಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವುದರಿಂದ, ವಿಶೇಷ ಸಚಿವ ಸಂಪುಟದಲ್ಲಿ ಈ ಬಗ್ಗೆ ತೀವ್ರ ಚರ್ಚೆ ನಡೆಯುವುದು ನಿಶ್ಚಿತ.

ಲಿಂಗಾಯತರ ಕೆಂಗಣ್ಣು

ಜಾತಿ ಗಣತಿಯಲ್ಲಿ ಲಿಂಗಾಯತ ಸಮುದಾಯದ ಸಂಖ್ಯೆ 66 ಲಕ್ಷಕ್ಕೆ ಇಳಿಯಲು ಪ್ರಮುಖವಾಗಿ ಸಮುದಾಯದ ಉಪಜಾತಿಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಲಾಗಿದೆ. ಪ್ರಮುಖವಾಗಿ 2 ಎ ಮೀಸಲಿಗಾಗಿ ಹಿಂದೂ ಸಾದರ, ಹಿಂದೂ ಗಾಣಿಗ, ಹಿಂದೂ ಬಣಜಿಗ ಎಂದು ನಮೂದು ಮಾಡಲಾಗಿದೆ. ಲಿಂಗಾಯತ ಸಮಾಜದಲ್ಲಿ ಇವೆಲ್ಲ ಸಮುದಾಯ ಬಂದಿಲ್ಲ. ಇವೆಲ್ಲ ಸಮುದಾಯಗಳು ಒಳಗೊಂಡರೆ ಲಿಂಗಾಯತ ಸಮಾಜದ ಸಂಖ್ಯೆ ಒಂದು ಕೋಟಿಗೂ ಅಧಿಕ ಸಂಖ್ಯೆಯಾಗುತ್ತದೆ ಎನ್ನುವುದು ಸಚಿವ ಎಂ.ಬಿ. ಪಾಟೀಲ್ ಅವರ ವಾದವಾಗಿದೆ.

ಜಾತಿ ಲೆಕ್ಕಾಚಾರವೇನಿದೆ?

ಜಾತಿ	ಜನಸಂಖ್ಯೆ
ಮುಸ್ಲಿಂ	75ಲಕ್ಷ
ಲಿಂಗಾಯತ	66 ಲಕ್ಷ
ಒಕ್ಕಲಿಗ	61 ಲಕ್ಷ
ಪರಿಶಿಷ್ಟ ಜಾತಿ	ಒಂದು ಕೋಟಿ
ಪರಿಶಿಷ್ಟ ಪಂಗಡ	42 ಲಕ್ಷ
ಕುರುಬ	44 ಲಕ್ಷ

ಅಂಕಿಅಂಶ

(ಪ್ರವರ್ಗದ ಪೈಕಿ ಒಟ್ಟು ಜನ ಸಂಖ್ಯೆಗೆ ಶೇ.ವಾರು)

ಪ್ರವರ್ಗ-1ಎ	34,96,638	(ಶೇ.8.40)
ಪ್ರವರ್ಗ-1ಬಿ	73,92,313	(ಶೇ.17.74)
ಒಟ್ಟು-	1,08,88,951	(ಶೇ.26.14)
ಪ್ರವರ್ಗ- 2ಎ	77,78,209	(ಶೇ.18.70)
ಪ್ರವರ್ಗ 2ಬಿ	75,25,880	(ಶೇ.18.08)
ಒಟ್ಟು-	1,53,04,089	(ಶೇ.36.77)
ಪ್ರವರ್ಗ 3ಎ-	72,99,577	(ಶೇ.17.53)
ಪ್ರವರ್ಗ 3ಬಿ-	81,37,536	(ಶೇ.19.55)
ಒಟ್ಟು-	1,54,37,113	(ಶೇ.37.08)
ಪರಿಶಿಷ್ಟ ಜಾತಿ-	1,09,29,347	
ಪರಿಶಿಷ್ಟ ಪಂಗಡ-	42,81,289	
ಸಾಮಾನ್ಯ ವರ್ಗ-	29,75,153	

ವೀರಶೈವ ಮಹಾಸಭಾದವರು ಅವರ ಸಮಾಜ ರಕ್ಷಣೆ ಮಾಡಿಕೊಳ್ಳಲು ಹೊರಟಿದ್ದು, ಅವರನ್ನು ನಾವು ಏಕೆ ಟೀಕೆ ಮಾಡಬೇಕು. ಅವರು ತಮ್ಮ ನಿಲುವುಗಳನ್ನು ಪ್ರತಿಪಾದನೆ ಮಾಡಲಿ. ಸಿಎಂ ಜಾತಿಗಣತಿ ವರದಿಯ ಬಗ್ಗೆ ಚರ್ಚೆ ನಡೆಸಲು ಜನಪ್ರತಿನಿಧಿಗಳಿಗೂ ವಿಧಾನಸಭೆಯಲ್ಲಿ ಚರ್ಚೆ ನಡೆಸಲು ಅವಕಾಶ ನೀಡಲಾಗುವುದು ಎಂದು ತಿಳಿಸಿದ್ದಾರೆ. ಇದಕ್ಕಿಂತ ಮುಕ್ತವಾಗಿ ಇನ್ನೇನು ಮಾಡಲು ಸಾಧ್ಯ? ಏನೇ ಆದರೂ ಈ ವಿಷಯದಲ್ಲಿ ಅವಸರದ ತೀರ್ಮಾನ ತೆಗೆದುಕೊಳ್ಳುವುದಿಲ್ಲ.

– **ಡಿ.ಕೆ.ಶಿವಕುಮಾರ್**, ಡಿಸಿಎಂ

ಲಿಂಗಾಯತ ರೆಡ್ಡಿಗಳು ಹಿಂದು ರೆಡ್ಡಿ ಎಂದು ಬರೆಸಿರುತ್ತಾರೆ. ಇವೆಲ್ಲವನ್ನೂ ಪರಿಗಣಿಸಿದಾಗ ಲಿಂಗಾಯತ ಜನಸಂಖ್ಯೆ ಒಂದು ಕೋಟಿಗೂ ಅಧಿಕವಾಗುತ್ತದೆ. '2ಎ' ದಲ್ಲಿರೋ ಇವರನ್ನು 3 ಬಿಗೆ ತರಬೇಕಾ, ಅದಕ್ಕೆ ಅವರು ಒಪ್ಪುತ್ತಾರಾ ನೋಡಬೇಕು. '2ಎ' ದಲ್ಲಿಯೇ ಇದ್ದು ಇವರನ್ನು ಲಿಂಗಾಯತದಲ್ಲಿ ಕೌಂಟ್ ಮಾಡಬೇಕಾ ಎಂಬುದೂ ಅಷ್ಟು ಸರಳವಿಲ್ಲ. ಈ ಬಗ್ಗೆ ಸಂಪುಟದಲ್ಲಿ ಚರ್ಚಿಸುವೆ.

– **ಎಂ.ಬಿ.ಪಾಟೀಲ್**, ಸಚಿವ

ಸುಪ್ರೀಂ ಆದೇಶ ಮರುಪರಿಶೀಲನಾ ಅರ್ಜಿ ಸಲ್ಲಿಸಲು ಕೇಂದ್ರ ಗೃಹ ಸಚಿವಾಲಯ ಸಿದ್ಧತೆ

ರಾಷ್ಟ್ರಪತಿ ಅನುಮೋದನೆಗೆ ಗಡುವು: ಸುಪ್ರೀಂ ತೀರ್ಪಿನ ವಿರುದ್ಧ ಕೇಂದ್ರ ಅಪೀಲು

ದೆಹಲಿ: ರಾಜ್ಯ ಸರಕಾರವು ಅಂಗೀಕರಿಸಿದ ವಿಧೇಯಕಗಳಿಗೆ ಅಂಕಿತ ಹಾಕುವಲ್ಲಿ ರಾಜ್ಯಪಾಲರು ಮತ್ತು ರಾಷ್ಟ್ರಪತಿಗೆ ಸಮಯ ಮಿತಿ ನಿಗದಿಪಡಿಸಿ ಸುಪ್ರೀಂಕೋರ್ಟ್ ವಿಭಾಗೀಯ ಪೀಠ ನೀಡಿದ ತೀರ್ಪಿನ ಮರುಪರಿಶೀಲನೆ ಅರ್ಜಿ ಸಲ್ಲಿಸಲು ಕೇಂದ್ರ ಗೃಹ ಸಚಿವಾಲಯ ನಿರ್ಧರಿಸಿದೆ.

ತಮಿಳುನಾಡು ಸರಕಾರ ರಾಜ್ಯಪಾಲ ಆರ್. ಎನ್.ರವಿ ಅವರ ವಿರುದ್ಧ ಎಂ.ಕೆ. ಸ್ಟಾಲಿನ್ ಸರಕಾರ ಸಲ್ಲಿಸಿದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಏ.8ರಂದು ನೀಡಿದ ತೀರ್ಪಿನ 'ಕೆಲವು ದೋಷಗಳನ್ನು' ಉಲ್ಲೇಖಿಸಿ ಆದೇಶ ವನ್ನು ಮತ್ತೊಮ್ಮೆ ಪರಿಶೀಲಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗುವುದು ಎಂದು ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಪರಿಶೀಲನಾ ಅರ್ಜಿ ಏಕೆ: ರಾಜ್ಯಪಾಲರಿಂದ ಪರಿಶೀಲನೆಗೆ ಕಳುಹಿಸಿಕೊಡಲಾದ ವಿಧೇಯಕಗಳ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳಲು ಸುಪ್ರೀಂಕೋರ್ಟ್ ರಾಷ್ಟ್ರಪತಿಗೆ 3 ತಿಂಗಳ ಗಡುವು ನಿಗದಿಪಡಿಸಿದೆ. ಇದಕ್ಕಿಂತ ಹೆಚ್ಚು ಅವಧಿಗೆ ವಿಧೇಯಕಗಳಿಗೆ ಒಪ್ಪಿಗೆ ನೀಡುವುದನ್ನು ತಡೆಹಿಡಿದರೆ ಪ್ರಸ್ತಾವಿತ ವಿಧೇಯಕ ಅಂಗೀಕಾರಗೊಂಡಿದೆ ಎಂದು ಪರಿಗಣಿಸಬಹುದು ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ತಿಳಿಸಿದೆ. ಈ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ವಾದ ಮಂಡನೆ ಸಂದರ್ಭ ಕೇಂದ್ರ ಸರಕಾರದ ಅಭಿಪ್ರಾಯವನ್ನು ಸಮರ್ಪಕವಾಗಿ ಮಂಡಿಸಲಾಗಿಲ್ಲ. ಆದ ಕಾರಣ ಪರಿಶೀಲನಾ ಅರ್ಜಿಯನ್ನು ಈಗ ಸಲ್ಲಿಸುವುದು ಅತ್ಯಗತ್ಯವಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಸುಪ್ರೀಂಕೋರ್ಟ್ ತೀರ್ಪಿನ ಬೆನ್ನಿಗೇ ತಮಿಳುನಾಡು ಸರಕಾರ ಶನಿವಾರ ಅಧಿಸೂಚನೆ ಮೂಲಕ 10 ಕಾನೂನುಗಳನ್ನು ಜಾರಿಗೊಳಿಸಿದೆ. ಸುಪ್ರೀಂ ಕೋರ್ಟ್‌ನ ಸದ್ಯದ ಆದೇಶ

ದೋಷವಿರುವ ವಿಧೇಯಕಗಳನ್ನು ಮರು ಪರಿಶೀಲಿಸಲು ಅವಕಾಶ ಮಾಡಿಕೊಡುತ್ತದೆ. ಅಂತಹ ವಿಧೇಯಕಗಳನ್ನು ಮೂಲರೂಪ ಅಥವಾ ರಾಷ್ಟ್ರಪತಿ ಸೂಚಿಸಿದ ತಿದ್ದುಪಡಿಗಳನ್ನು ಮಾಡುವ ಮೂಲಕ ಮಾತ್ರ ವಿಧಾನಸಭೆಗಳಲ್ಲಿ ಮರುಸ್ಥಾಪಿಸಬಹುದು ಎಂದು ಅಧಿಕಾರಿ ಸ್ಪಷ್ಟಪಡಿಸಿದರು.

ಗೃಹ ಸಚಿವಾಲಯ ಮಧ್ಯಪ್ರವೇಶ

ರಾಜ್ಯ ರೂಪಿಸುವ ಶಾಸನಗಳಿಗೆ ಸಂಬಂಧಿಸಿ ರಾಷ್ಟ್ರಪತಿಗಳ ಅಂತಿಮ ನಿರ್ಧಾರವನ್ನು ಅನುಷ್ಠಾನಕ್ಕೆ ತರುವಲ್ಲಿ ಗೃಹ ಸಚಿವಾಲಯ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸಬೇಕು ಎಂದು ಸಂವಿಧಾನದ ವಿಧಿ 201 ಆದೇಶಿಸುತ್ತದೆ. ಹಾಗಾಗಿಯೇ ರಾಷ್ಟ್ರಪತಿಗಳ ನಿರ್ಧಾರಗಳನ್ನು ರಾಜ್ಯಗಳಿಗೆ ತಿಳಿಸುವ ನೋಡಲ್ ಏಜೆನ್ಸಿಯಾಗಿ ಗೃಹ ಸಚಿವಾಲಯ ಕಾರ್ಯನಿರ್ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್‌ನ ಆದೇಶದ ವಿಚಾರ ನೇರವಾಗಿ ಸಚಿವಾಲಯದ ವ್ಯಾಪ್ತಿಗೆ ಒಳಪಡುತ್ತದೆ. ಹಾಗಾಗಿ ಸಚಿವಾಲಯವೇ ಪರಿಶೀಲನಾ ಅರ್ಜಿ ಸಲ್ಲಿಸಲಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ಸೊಂಪಾದ ಪುಟಗಳು

ವಿಜಯಯಾತ್ರೆ, ಇವರಿಗೆಲ್ಲ ಮಾತ್ರೆ!
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಮೂರು ಅನಾರ್ಕಲಿಯಲ್ಲಿ ನಟಿಸಿದ ವಿದೇಶಿ ಮಹಿಳೆ

ವಿದೇಶವಾಸಿ
ಕಿರಣ್ ಉಪಾಧ್ಯಾಯ, ಬಹ್ರೈನ್ 7

ದಾರಿದೀಪೋಕ್ತಿ

ಏನೇ ಬಂದರೂ ಬದುಕಿನಲ್ಲಿ ಸಂತಸ ಮತ್ತು ಸಮಾಧಾನದಿಂದ ಇರಲೇಬೇಕು ಎಂದು ನಿರ್ಧರಿಸಿ, ಆ ಕ್ಷಣದಿಂದಲೇ ನಿಮ್ಮ ಚಿಂತೆ ನಿವಾರಣೆಯಾಗುತ್ತದೆ, ಆರೋಗ್ಯ ಸುಧಾರಿಸುತ್ತದೆ, ನಿಮ್ಮ ಸಂಬಂಧಗಳು ಸುಧಾರಿಸುತ್ತದೆ, ನಿಮಗೆ ನೀವೇ ಅದ್ಭುತ ಎಂದು ಅನಿಸಲಾರಂಭಿಸುತ್ತದೆ. ಪ್ರಯತ್ನಿಸಿ ನೋಡಿ.

ವಕ್ರತುಂಡೋಕ್ತಿ

ಚಿರ ಯೌವನದ ಗುಟ್ಟೇನೆಂದರೆ, ಸದಾ ಒಳ್ಳೆಯ ಆಹಾರಗಳನ್ನು ಸೇವಿಸಬೇಕು, ಚಿಂತೆಗಳನ್ನು ಬಿಡಬೇಕು ಮತ್ತು ನಮ್ಮ ನಿಜವಾದ ವಯಸ್ಸನ್ನು ಹೇಳಬಾರದು.

ಇಂದಿನಿಂದ ಲಾರಿ ಮುಷ್ಕರ

ಬೆಂಗಳೂರು: ರಾಜ್ಯದಲ್ಲಿ ಡೀಸೆಲ್ ಬೆಲೆ ಏರಿಕೆ ಹಾಗೂ ಟೋಲ್ ಶುಲ್ಕದ ಹೆಚ್ಚಳದ ವಿರುದ್ಧ ರಾಜ್ಯ ಲಾರಿ ಮಾಲೀಕರ ಸಂಘ ಇಂದು (ಸೋಮವಾರ) ಮಧ್ಯರಾತ್ರಿಯಿಂದ ಅನಿರ್ದಿಷ್ಟಾವಧಿ ಲಾರಿ ಮುಷ್ಕರಕ್ಕೆ ಕರೆ ನೀಡಿದೆ. ಆದರೆ ಈ ಮುಷ್ಕರಕ್ಕೆ ಲಾರಿ ಮಾಲೀಕರ ಸಂಘದಲ್ಲಿಯೇ ಭಿನ್ನರಾಗವಿರುವುದರಿಂದ ಮುಷ್ಕರ ಯಶಸ್ವಿಯಾಗುವುದೋ ಇಲ್ಲವೋ ಎನ್ನುವ ಅನುಮಾನಗಳಿವೆ.

ಈ ಕುರಿತು ಮಾಹಿತಿ ನೀಡಿರುವ ರಾಜ್ಯ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಜಿ. ಆರ್. ಷಣ್ಮುಗಪ್ಪ, ಸೋಮವಾರ ಮಧ್ಯರಾತ್ರಿಯಿಂದ ಲಾರಿ ಮುಷ್ಕರ ನಡೆಯಲಿದೆ.

ಯಾವುದೇ ಕಾರಣಕ್ಕೂ ಮುಷ್ಕರ ಹಿಂಪಡೆಯುವುದಿಲ್ಲ, ಹೊರ ರಾಜ್ಯಗಳ ಲಾರಿ ಮಾಲೀಕರು ಸೇರಿದಂತೆ ರಾಜ್ಯವ್ಯಾಪಿ ಮುಷ್ಕರಕ್ಕೆ ಬೆಂಬಲ ವ್ಯಕ್ತವಾಗಿದೆ ಎಂದು ತಿಳಿಸಿದ್ದಾರೆ. ರಾಜ್ಯದಲ್ಲಿ 6 ಲಕ್ಷಕ್ಕೂ ಹೆಚ್ಚು ಲಾರಿಗಳಿದ್ದು, ಮುಷ್ಕರ ಬೆಂಬಲಿಸುವ ಮೂಲಕ ಸಂಚಾರವನ್ನು ಸ್ಥಗಿತಗೊಳಿಸಲಿವೆ.

ಡಿಸಿಎಂ ಡಿಕೆಶಿ ವಿರುದ್ಧ ದೂರು

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುತ್ತಿರುವ ಎರಡು ಸಾವಿರ ಕೋಟಿ ರು. ವೆಚ್ಚದ ವಿವಿಧ ಕಾಮಗಾರಿಗಳಲ್ಲಿ ಶೇ.15ರಷ್ಟು ಕಮಿಷನ್ ಪಡೆದಿದ್ದಾರೆ ಎಂದು ಶಾಸಕ ಮುನಿರತ್ನ ಗಂಭೀರ ಆರೋಪ ಮಾಡಿದ್ದಾರೆ. ಈ ಸಂಬಂಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್‌ಗೆ ಮನವಿ ಸಲ್ಲಿಸಿದ್ದಾರೆ.

ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ವಿರುದ್ಧವೂ ದೂರು ನೀಡಿದ್ದಾರೆ. ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರ ಸಂಬಂಧಿಗಳಿಗೆ ಗುತ್ತಿಗೆ ನೀಡಲು ಮುಂದಾಗಿದ್ದು, ಶಿವಕುಮಾರ್ ಅವರ ಪರವಾಗಿ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ಗುತ್ತಿಗೆದಾರರಿಂದ ಶೇ.15ರಷ್ಟು ಕಮಿಷನ್ ಈಗಾಗಲೇ ಪಡೆದಿದ್ದಾರೆ ಮುನಿರತ್ನ ಎಂದು ದೂರಿದ್ದಾರೆ.

5ರ ಬಾಲಕಿ ಹತ್ಯಾಚಾರ: ಆರೋಪಿ ಎನ್‌ಕೌಂಟರ್

ಹುಬ್ಬಳ್ಳಿ: ಐದು ವರ್ಷದ ಬಾಲಕಿಯನ್ನು ಅಪಹರಿಸಿ, ಕೊಲೆ ಮಾಡಿದ ಆರೋಪದಡಿ ಬಂಧಿತನಾಗಿದ್ದ ವ್ಯಕ್ತಿ ತಪ್ಪಿಸಿಕೊಳ್ಳುವ ಯತ್ನದಲ್ಲಿ ಭಾನುವಾರ ಪೊಲೀಸ್ ಎನ್‌ಕೌಂಟರ್‌ಗೆ ಬಲಿಯಾಗಿದ್ದಾನೆ. ಬಿಹಾರ ಮೂಲದ ರಿತೇಶ ಕುಮಾರ (35) ಆರೋಪಿ. ಭಾನುವಾರ ಸಂಜೆ ಇಲ್ಲಿನ ತಾರಿಹಾಳ ಕೆಳ ಸೇತುವೆ ಬಳಿ ಎನ್‌ಕೌಂಟರ್ ನಡೆದಿದೆ ಎಂದು ಪೊಲೀಸ್ ಕಮಿಷನರ್ ಶಶಿಕುಮಾರ್ ತಿಳಿಸಿದರು.

ಫನ್‌ತರಂಗ

– ರಘುಪತಿ ಶೃಂಗೇರಿ –

ರಷ್ಯಾ ದಾಳಿಗೆ ಭಾರತ ಮೂಲದ ಔಷಧ ಕಾರ್ಖಾನೆಯೂ ಧ್ವಂಸ

ಉಕ್ರೇನ್ ಮೇಲೆ ಮತ್ತೆ ಕ್ಷಿಪಣಿ ದಾಳಿ: 31 ಜನ ಬಲಿ

ಕೀವ್: ಉಕ್ರೇನ್‌ನ ಸುಮಿ ನಗರದ ಹೃದಯಭಾಗದ ಮೇಲೆ ಶನಿವಾರ ರಾತ್ರಿ ರಷ್ಯಾ ಕ್ಷಿಪಣಿ ದಾಳಿ ನಡೆಸಿದ್ದು ಕನಿಷ್ಠ 31 ಜನರು ಸಾವನ್ನಪ್ಪಿದ್ದಾರೆ. 83ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಅಮೆರಿಕದ ರಾಯಭಾರಿ ಸ್ಟೀವ್ ವಿಟ್ಕಾಫ್ ಮಾಸ್ಕೋಗೆ ಭೇಟಿ ನೀಡಿದ ಬೆನ್ನಿಗೇ ಈ ದಾಳಿ ನಡೆದಿದೆ. ಈ ವರ್ಷದಲ್ಲಿ ಉಕ್ರೇನ್ ಮೇಲೆ ನಡೆದ ಅತ್ಯಂತ ಭೀಕರ ದಾಳಿ ಇದಾಗಿದೆ.

ಈ ಖಂಡಾಂತರ ಕ್ಷಿಪಣಿ ದಾಳಿಯಿಂದ ಸುಮಿ ನಗರದಲ್ಲಿ ವ್ಯಾಪಕ ಹಾನಿಯಾಗಿದೆ. ಸಾಮಾನ್ಯ ಜನರ ಜೀವ ಹರಣವಾಗಿದೆ. ದುಷ್ಟರು ಮಾತ್ರ ಈ ರೀತಿ ಮಾಡಲು ಸಾಧ್ಯ ಎಂದು ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ಘಟನೆಯನ್ನು ಖಂಡಿಸಿದ್ದಾರೆ.

"ಇಂದು ಪಾಮ್ ಸಂಡೆ, ಜೆರುಸಲೇಂಗೆ ಏಸುಕ್ರಿಸ್ತ ಆಗಮಿಸಿದ ದಿನ. ಹಾಗಾಗಿ ಜನರು ಚರ್ಚ್‌ಗೆ ಪ್ರಾರ್ಥನೆ ಸಲ್ಲಿಸಲು ಹೋಗುತ್ತಿದ್ದರು. ಕ್ರೈಸ್ತರ ಪ್ರಮುಖ ಹಬ್ಬದ ದಿನದಂದೇ 31 ನಾಗರಿಕರನ್ನು ಉದ್ದೇಶಪೂರ್ವಕವಾಗಿ ಹತ್ಯೆ ಮಾಡಲಾಗಿದೆ. ರಷ್ಯಾವೊಂದು ಭಯೋತ್ಪಾದಕ ರಾಷ್ಟ್ರ" ಎಂದು ಝೆಲೆನ್‌ಸ್ಕಿ ಕಿಡಿಕಾರಿದ್ದಾರೆ.

ಉಕ್ರೇನ್ ಮತ್ತು ರಷ್ಯಾ ಕಳೆದ ತಿಂಗಳು ಪರಸ್ಪರ ಇಂಧನ ಸೌಲಭ್ಯಗಳ ಮೇಲೆ ದಾಳಿ ಮಾಡುವುದನ್ನು ನಿಲ್ಲಿಸಲು ಒಪ್ಪಿಕೊಂಡಿದ್ದವು. ಆದರೆ ರಷ್ಯಾದ ಇಂಧನ ಘಟಕಗಳು, ಮೂಲಸೌಕರ್ಯ ಕೇಂದ್ರಗಳ ಮೇಲೆ ಉಕ್ರೇನ್ 5 ಬಾರಿ ದಾಳಿ ನಡೆಸಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಶನಿವಾರ ಆರೋಪಿಸಿತ್ತು. ಅಮೆರಿಕ ಮಧ್ಯಸ್ಥಿಕೆ ವಹಿಸಿ ಶಾಂತಿ ಒಪ್ಪಂದಕ್ಕೆ ಪ್ರಯತ್ನಿಸುತ್ತಿರುವಾಗಲೂ ಉಕ್ರೇನ್ ದಾಳಿ ನಡೆಸಿರುವುದು ಸರಿಯಲ್ಲ ಎಂದು ರಷ್ಯಾ ಖಂಡಿಸಿತ್ತು.

→ 4

- ಉಕ್ರೇನ್‌ನ ಸುಮಿ ನಗರದಲ್ಲಿ ರಷ್ಯಾದ ಕ್ಷಿಪಣಿ ದಾಳಿ
- 3 ವರ್ಷಗಳ ಯುದ್ಧದ ಅಂತಿಮ ಮಾತುಕತೆ ವಿಫಲ
- ಪಾಮ್ ಸಂಡೆ ಆಚರಣೆಯಲ್ಲಿದ್ದಾಗಲೇ ಕ್ಷಿಪಣಿ ದಾಳಿ

ಸ್ಟಾರ್‌ಲಿಂಕ್‌ನ 21 ಉಪಗ್ರಹಗಳು ಕಕ್ಷೆಗೆ, ವೈರ್‌ಲೆಸ್ ಇಂಟರ್‌ನೆಟ್ ಸಂಪರ್ಕದಲ್ಲಿ ಕ್ರಾಂತಿ ಸಂಭವ

ಇನ್ನು ಇಂಟರ್‌ನೆಟ್ ಇಲ್ಲದ ಜಾಗವೇ ಸಿಗದು!

ವಾಷಿಂಗ್ಟನ್: ಇನ್ನು ಮುಂದೆ ಯಾವುದೇ ಕಗ್ಗಾಡು ಪ್ರವೇಶಿಸಿದರೂ, ಮರುಭೂಮಿಯಲ್ಲಿದ್ದರೂ ಸಂಪರ್ಕ ಕಳೆದುಕೊಳ್ಳುವ ಭೀತಿ ಇಲ್ಲ. ವಿಶ್ವದ ಎಲ್ಲೆಡೆಗೂ ಇಂಟರ್ ನೆಟ್ ಕಲ್ಪಿಸುವ

ಸ್ಪೇಸ್ ಎಕ್ಸ್ ಮಾಲೀಕ ಎಲಾನ್ ಮಸ್ಕ್ ಯೋಜನೆ ಸದ್ಯವೇ ಸಾಕಾರಗೊಳ್ಳುವ ನಿರೀಕ್ಷೆ ಇದೆ. ಉಪಗ್ರಹಗಳನ್ನು ಬಳಸಿ ನೇರವಾಗಿ ವೈರ್‌ಲೆಸ್ ಇಂಟರ್‌ನೆಟ್ ಪೂರೈಕೆ ಮಾಡುವ ಸ್ಟಾರ್‌ಲಿಂಕ್‌ನ 21 ಉಪಗ್ರಹಗಳನ್ನು ಸ್ಪೇಸ್‌ಎಕ್ಸ್‌ನ ರಾಕೆಟ್ ಶನಿವಾರ ರಾತ್ರಿ ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ.

ಇದರಲ್ಲಿ ನೇರವಾಗಿ ಮೊಬೈಲ್ ಫೋನ್‌ಗಳು ಅಥವಾ ಇತರೆ ಸಾಧನಗಳಿಗೆ ಇಂಟರ್‌ನೆಟ್ ಸಂಪರ್ಕ ಕಲ್ಪಿಸುವ 13 ಉಪಗ್ರಹಗಳೂ ಉಡಾವಣೆಯಾಗಿವೆ. ಇದರಿಂದಾಗಿ ಜಗತ್ತಿನ ಯಾವುದೇ ಭಾಗದಲ್ಲಿದ್ದರೂ, ಎಂಥದ್ದೇ ಜಾಗದಲ್ಲಿದ್ದರೂ ನೇರವಾಗಿ ಇಂಟರ್‌ನೆಟ್ ಸಂಪರ್ಕ ಪಡೆಯೋಕೆ ಅನುಕೂಲ ಆಗಲಿದೆ. ಸ್ಪೇಸ್ ಎಕ್ಸ್ ಟಿ-ಮೊಬೈಲ್ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದು, ಜಗತ್ತಿನಾದ್ಯಂತ ಎಂಥದ್ದೇ ಭಾಗಕ್ಕೂ ಇಂಟರ್‌ನೆಟ್ ಸಂಪರ್ಕವನ್ನು ತಲುಪಿಸಲು ಸಜ್ಜಾಗಿದೆ.

ನಾಸಾದ ಕೆನಡಿ ಸ್ಪೇಸ್ ಸೆಂಟರ್‌ನಿಂದ 21 ಉಪಗ್ರಹಗಳನ್ನು ಹೊತ್ತು ಅಮೆರಿಕದ ಕಾಲಮಾನದ ಪ್ರಕಾರ ಶನಿವಾರ ರಾತ್ರಿ 8:53ಕ್ಕೆ ಸ್ಪೇಸ್‌ಎಕ್ಸ್ ಫಾಲ್ಕನ್ 9 ರಾಕೆಟ್ ನಭಕ್ಕೆ ಚಿಮ್ಮಿತು. ಹುಣ್ಣಿಮೆಯ ಕಾರಣದಿಂದ ಪೂರ್ಣ ಚಂದ್ರನ ಬೆಳಕಿನಲ್ಲಿ ಫ್ಲೋರಿಡಾದ ಕರಾವಳಿ ಭಾಗದಲ್ಲಿ ನಡೆದ ರಾಕೆಟ್ ಉಡಾವಣೆಯು ಜನರನ್ನು ಆಕಾಶದತ್ತ ನೋಡುವಂತೆ ಮಾಡಿತು.

ಫಾಲ್ಕನ್ 9 ರಾಕೆಟ್‌ನ ಹತ್ತನೇ ಕಾರ್ಯಾಚರಣೆ ಇದಾಗಿದೆ. ಇದೇ ರಾಕೆಟ್ ಅನ್ನು ಈಗಾಗಲೇ ನಾಲ್ಕು ಬಾರಿ ಸ್ಟಾರ್‌ಲಿಂಕ್‌ನ ಮಿಷನ್‌ಗಳು, ನಾಸಾ ಕ್ರ್ಯೂ 8 ಸೇರಿದಂತೆ ಹಲವು ಮಿಷನ್‌ಗಳಲ್ಲಿ ಬಳಸಿಕೊಳ್ಳಲಾಗಿದೆ. ಉಡಾವಣೆಯಾಗಿ ಎರಡೂವರೆ ನಿಮಿಷಗಳಲ್ಲಿ ರಾಕೆಟ್‌ನ ಸ್ಟೇಜ್ 1 ಪ್ರತ್ಯೇಕಗೊಂಡು ಭೂಮಿಯತ್ತ ವಾಪಸ್ ಆಗಿದೆ.

ಸುಮಾರು ಆರನೇ ನಿಮಿಷದಲ್ಲಿ ಫಾಲ್ಕನ್ 9 ರಾಕೆಟ್‌ನ ಬೂಸ್ಟರ್ ಯಶಸ್ವಿಯಾಗಿ ಅಟ್ಲಾಂಟಿಕ್ ಸಾಗರದಲ್ಲಿನ ಸ್ಪೇಸ್ ಎಕ್ಸ್‌ನ ಡ್ರೋನ್‌ಶಿಪ್‌ಗೆ ಬಂದು ಇಳಿದಿದೆ. ಒಂದು ತಾಸಿನ ಬಳಿಕ ನಿಗದಿತ ಕಕ್ಷೆಯಲ್ಲಿ ಸ್ಟಾರ್‌ಲಿಂಕ್ ಉಪಗ್ರಹಗಳು ಸ್ಪೇಸ್‌ಎಕ್ಸ್‌ನ ಉಪಗ್ರಹ ಪುಂಜಗಳ ಜೊತೆಗೆ ಸೇರಿಕೊಂಡವು. ಪ್ರಸ್ತುತ ಸ್ಟಾರ್‌ಲಿಂಕ್‌ನ 7,000 ಉಪಗ್ರಹಗಳು ಭೂಮಿಯ ಸುತ್ತಲೂ ಕಾರ್ಯಾಚರಿಸುತ್ತಿವೆ. ಈ ಉಪಗ್ರಹ ಸಂಪರ್ಕದ ಮೂಲಕ ಅತ್ಯಂತ ವೇಗದ ಮತ್ತು ತಡೆರಹಿತವಾದ ಇಂಟರ್‌ನೆಟ್ ಸೇವೆಯನ್ನು ಎಲ್ಲ ಭಾಗದಲ್ಲೂ ಕೊಡುವುದಾಗಿ ಸ್ಟಾರ್‌ಲಿಂಕ್ ಹೇಳಿಕೊಂಡಿದೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಂಬೇಡ್ಕರ್ ಎಂಬ ಮಹಾಚೇತನ
ಸಮಾನತೆಯ ಹರಿಕಾರ, ಆಧುನಿಕ ಬಸವಣ್ಣ: ಡಾ.ಬಾಬಾ ಸಾಹೇಬ್ ಅಂಬೇಡ್ಕರ್

ತನ್ನಿಮಿತ್ತ → 10

ಸಮಾಚಾರ ಸಣ್ಣದಲ್ಲ

ಹಾವು ಕಡಿದು ಬಾಲಕಿ ಸಾವು

ಬಳ್ಳಾರಿ: ಮಲಗಿದ್ದಾಗ ನಾಗರ ಹಾವು ಕಡಿದು 10ನೇ ತರಗತಿ ಬಾಲಕಿ ಸಾವನ್ನಪ್ಪಿದ ದಾರುಣ ಘಟನೆ ಬಳ್ಳಾರಿ ತಾಲೂಕಿನ ಹೊಸ ಮೋಕಾ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ. 15 ವರ್ಷದ ಬಾಲಕಿ ಶ್ರಾವಣಿ ಹಾವು ಕಡಿತದಿಂದ ಮೃತಪಟ್ಟವಳು. ಬಾಲಕಿಯು ಹೊಸ ಮೋಕಾ ಗ್ರಾಮದ ಲಕ್ಷ್ಮಣ ಹಾಗೂ ಶೇಕಮ್ಮ ದಂಪತಿಯ ಮಗಳಾಗಿದ್ದಳು. ಶ್ರಾವಣಿ ಮೋಕಾ ಸರಕಾರಿ ಶಾಲೆಯಲ್ಲಿ 10ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಳು. ರಾತ್ರಿ ಮಲಗಿರುವಾಗ ಬಾಲಕಿಗೆ ಮೂರು ಸಲ ನಾಗರ ಹಾವು ಕಚ್ಚಿದೆ. ಕೈ ಮತ್ತು ಕಾಲಿಗೆ ನಾಗರ ಹಾವು ಕಡಿದರೂ ಬಾಲಕಿಗೆ ಎಚ್ಚರವಾಗಿರಲಿಲ್ಲ. ಬಳಿಕ ನಿದ್ರೆಯಲ್ಲಿಯೇ ವಿಷವೇರಿ ಬಾಲಕಿ ಮೃತಪಟ್ಟಿದ್ದಾಳೆ. ಭಾನುವಾರ ಬೆಳಗ್ಗೆ ಪೋಷಕರು ಎದ್ದು, ಮಗಳನ್ನು ಎಬ್ಬಿಸಲು ಮುಂದಾದಾಗ ಆಕೆ ಸಾವನ್ನಪ್ಪಿರುವುದು ಗೊತ್ತಾಗಿದೆ. ಈ ವೇಳೆ, ಪೋಷಕರು ಹುಡುಕಾಡಿದಾಗ ನಾಗರ ಹಾವು ಕೂಡ ಮನೆಯಲ್ಲಿ ಇರುವುದು ಕಂಡುಬಂದಿದೆ. ಬಳಿಕ ಅದನ್ನು ಹೊಡೆದು ಕೊಲ್ಲಲಾಗಿದೆ.

ನದಿಯಲ್ಲಿ ಮುಳುಗಿ ಇಬ್ಬರ ಸಾವು

ಬಾಗಲಕೋಟೆ: ಯೋಧ ಸೇರಿ ಇಬ್ಬರು ಮುಳುಗಿ ಸಾವನ್ನಪ್ಪಿದ ಘಟನೆ ಜಿಲ್ಲೆಯ ಮಲಪ್ರಭಾ ನದಿಯಲ್ಲಿ ಜರುಗಿದೆ.

ಬಾದಾಮಿ ತಾಲೂಕಿನ ಹಂಸನೂರು ಗ್ರಾಮದ ಶೇಖಪ್ಪ ಮೂಲಿಮನಿ (15) ಹಾಗೂ ಗದಗ ಜಿಲ್ಲೆಯ ಬೇನಾಳ ಗ್ರಾಮದ ಯೋಧ ಮಹಾಂತೇಶ ಹೊಸಮನಿ (25) ಮೃತ ದುರ್ದೈವಿಗಳು. ಬಾದಾಮಿ ತಾಲೂಕಿನ ಮಣ್ಣೇರಿ ಗ್ರಾಮದ ಮಲಪ್ರಭಾ ನದಿಯಲ್ಲಿ ಶೇಖಪ್ಪ ಸ್ನಾನಕ್ಕೆಂದು ತೆರಳಿದ್ದ ವೇಳೆ ಮುಳುಗುತ್ತಿರುವಾಗ ಆತನನ್ನು ರಕ್ಷಿಸಲು ಮುಂದಾದ ಯೋಧ ಮಹಾಂತೇಶ ಅವರ ಕೊರಳು ಹಿಡಿದಿದ್ದರಿಂದ ಅವರಿಗೂ ದಡ ಸೇರಲಾಗದೆ ಮುಳುಗಿ ಸಾವನ್ನಪ್ಪಿದ್ದಾರೆ. ಅಗ್ನಿಶಾಮಕ ದಳ ಮತ್ತು ಪೊಲೀಸರಿಂದ ಶವಗಳಿಗಾಗಿ ಶೋಧ ನಡೆಸಿದ್ದರು. ಶನಿವಾರ ರಾತ್ರಿ ಇಬ್ಬರ ಶವಗಳು ಪತ್ತೆಯಾಗಿವೆ. ಈ ಕುರಿತು ಬಾದಾಮಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆಗೆ ಥಳಿತ: 6 ಆರೋಪಿಗಳು ಸೆರೆ

ದಾವಣಗೆರೆ: ಸಾರ್ವಜನಿಕವಾಗಿ ಮಹಿಳೆಯನ್ನ ಅಮಾನುಷವಾಗಿ ಥಳಿಸಿ ಕೊಲೆಗೆ ಪ್ರಯತ್ನಿಸಿದ್ದ ಆರು ಮಂದಿ ಆರೋಪಿಗಳನ್ನು ಪ್ರಕರಣ ದಾಖಲಾದ ಕೆಲವೇ ಗಂಟೆಗಳಲ್ಲಿ ಚನ್ನಗಿರಿ ಪೊಲೀಸರು ಬಂಧಿಸಿದ್ದಾರೆ. ಚನ್ನಗಿರಿ ತಾಲೂಕಿನ ತಾವರಕೆರೆ ಗ್ರಾಮದ ಮೊಹಮ್ಮದ್ ನಯಾಜ್(32), ಮೊಹಮ್ಮದ್ ಗೌಸ್ಪೀರ್ (45), ಚಾಂದ್ ಬಾಷಾ(35), ಇನಾಯತ್ ಉಲ್ಲಾ (51), ದಸ್ತಗೀರ್(24), ಬುಕ್ಕಾಂಬೂದಿಯ ಟಿ.ಆರ್. ರಸೂಲ್ ಬಂಧಿತರು. ತಾವರಕೆರೆ ಗ್ರಾಮದ ಶಬೀನಾಬಾನು ಎಂಬುವವರನ್ನು ಮೇಲೆ ಆರು ಜನ ಆರೋಪಿಗಳು ಸಾರ್ವಜನಿಕವಾಗಿ ಅತ್ಯಂತ ಅಮಾನವೀಯ, ಅಮಾನುಷವಾಗಿ ಥಳಿಸಿದ್ದ ವಿಡಿಯೋ ಏ.11 ರಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಚನ್ನಗಿರಿ ಪೊಲೀಸರು ಎಲ್ಲ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಜಾತಿಗಣತಿ: ಬಿಜೆಪಿಗೆ ತೊಂದರೆ ಏನಿದೆ?

ಬಳ್ಳಾರಿ: ಶಾಸಕ ಶಾಮನೂರು ಶಿವಶಂಕರಪ್ಪ ನಮ್ಮ ಪಕ್ಷದಲ್ಲಿ ಹಿರಿಯರು. ಏನಾದರೂ ಸಲಹೆಗಳಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಲಿ. ವೈಯಕ್ತಿಕ ಅಭಿಪ್ರಾಯ ಇದ್ದರೂ ಹೇಳಿಕೊಳ್ಳಲಿ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು. ಕುರುಗೋಡು ತಾಲೂಕು ಕಲ್ಲುಕಂಬ ಗ್ರಾಮದಲ್ಲಿ ಸುದ್ದಿಗಾರರ ಜತೆ ಮಾತನಾಡಿ, ಜಾತಿಗಣತಿ ಮಾಡಿದರೆ ಬಿಜೆಪಿಯವರಿಗೆ ತೊಂದರೆ ಏನಿದೆ? ವರದಿ ನೂರಾರು ಪುಟಗಳು ಇರುವುದರಿಂದ ಓದಲು ಸಮಯ ಸಿಗಲಿಲ್ಲ. ಓದಿದ ಮೇಲೆ 17ರಂದು ನಡೆಯುವ ಸಂಪುಟ ಸಭೆಯ ಮುಂದೆ ನಮ್ಮ ಅಭಿಪ್ರಾಯ ಮಂಡಿಸುತ್ತೇವೆ ಎಂದರು. ಸದ್ಯದಲ್ಲಿ ಬಿ.ನಾಗೇಂದ್ರರಿಗೆ ಸಚಿವ ಸ್ಥಾನ ಸಿಗಲಿದೆ. ಮುಂದಿನ ದಿನದಲ್ಲಿ ಜೆ.ಎನ್. ಗಣೇಶ ಕೂಡ ಸಚಿವರಾಗುವ ಅರ್ಹತೆ ಹೊಂದಿದ್ದಾರೆ ಎಂದು ಸಚಿವ ಬೈರತಿ ಸುರೇಶ್ ಭವಿಷ್ಯ ನುಡಿದರು. ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಪಾರ್ವತಮ್ಮ ಪಾತ್ರ ಇಲ್ಲದಿದ್ದರೂ ಬಿಜೆಪಿಯ ಕುತಂತ್ರದಿಂದ ಅಪಪ್ರಚಾರ ಮಾಡಲಾಯಿತು. ಆದರೆ ನ್ಯಾಯಾಲಯದಲ್ಲಿ ಮುಖ್ಯಮಂತ್ರಿಯವರಿಗೆ ಕ್ಲೀನ್ ಚೀಟ್ ನೀಡಲಾಗಿದೆ. ಸಿಎಂ ಯಾವುದೇ ಸಮುದಾಯಕ್ಕೆ ಸಿಮೀತರಾದವರಲ್ಲ, ಅನೇಕ ಶಾಸಕರೊಂದಿಗೆ ಉತ್ತಮ ಒಡನಾಟವಿದೆ ಎಂದರು.

{ಪಿ.ಸಿ.ಮೋಹನ್} ಸಂಸದ

ಪಶ್ಚಿಮ ಬಂಗಾಳ ಸರಕಾರದ ಮುಸ್ಲಿಂ ತುಷ್ಟೀಕರಣ ನೀತಿಯಿಂದ, ಹಿಂಸಾಚಾರ ಪೀಡಿತ ಮುರ್ಷಿದಾಬಾದ್ ಜಿಲ್ಲೆಯಲ್ಲಿನ ಹಿಂದೂಗಳು ಊರು ಬಿಟ್ಟು ಹೋಗುವ ಅನಿವಾರ್ಯತೆ ಸೃಷ್ಟಿಯಾಗಿದೆ.ರಾಜ್ಯ ಸರಕಾರದ ತುಷ್ಟೀಕರಣ ನೀತಿಯಿಂದ ಕರ್ನಾಟಕದಲ್ಲಿಯೂ ಅಂಥದೇ ಪರಿಸ್ಥಿತಿ ಎದುರಾಗುವ ಸಾಧ್ಯತೆಯಿದೆ.

ಆರೋಪ ರುಜುವಾತು ಹೊತ್ತಲ್ಲಿ ತನಿಖಾಧಿಕಾರಿ ಬದಲಾವಣೆ | ಆರೋಪಿ ಬಚಾವ್‌ಗೆ ಯತ್ನ

ಚಿನ್ನ ಎಗರಿಸಿದ ಇನ್ಸ್‌ಪೆಕ್ಟರ್ ವಿರುದ್ಧ ತನಿಖೆಗೆ ಗ್ರಹಣ!

ಜಿತೇಂದ್ರ ಕುಂದೇಶ್ವರ ಮಂಗಳೂರು

ಮುಖ್ಯಮಂತ್ರಿ ಚಿನ್ನದ ಪದಕ ಗೆದ್ದ ಪೊಲೀಸ್ ಇನ್ಸ್‌ಪೆಕ್ಟರ್ ವಿರುದ್ಧ ಆರೋಪಿಯ ಮೈ ಮೇಲಿದ್ದ 50 ಗ್ರಾಂ ಚಿನ್ನ ಎಗರಿಸಿದ ಆರೋಪದ ಪ್ರಾಥಮಿಕ ತನಿಖೆ ನಡೆಸುತ್ತಿದ್ದ, ಎಸಿಪಿ ಧನ್ಯಾ ನಾಯಕ್ ತನಿಖಾ ವರದಿ ಸಲ್ಲಿಸುವ ಹೊತ್ತಿನಲ್ಲಿಯೇ ಅವರಿಂದ ತನಿಖೆ ಅಧಿಕಾರವನ್ನು ಹಿಂದೆಗೆದುಕೊಳ್ಳಲಾಗಿದೆ.

ವಿಚಾರಣೆ ವೇಳೆ ದೂರುದಾರರ ಹೇಳಿಕೆ ಮತ್ತು ಪೊಲೀಸರ ಹೇಳಿಕೆ ಪಡೆದುಕೊಳ್ಳಲಾಗಿದ್ದು, ಇನ್ನೇನು ಪ್ರಕರಣದಲ್ಲಿ ಆರೋಪ ರುಜುವಾತು ಆಗುವ ಹೊತ್ತಿನಲ್ಲಿಯೇ ಪ್ರಕರಣದ ತನಿಖೆ ನಡೆಸುತ್ತಿರುವ ಎಸಿಪಿ ಧನ್ಯಾ ನಾಯಕ್ ಅವರನ್ನು ಪ್ರಕರಣದ ತನಿಖೆಯಿಂದ ಹಿಂದೆಗೆದುಕೊಳ್ಳಬೇಕು ಎಂದು ಆರೋಪಿ ಇನ್ಸ್‌ಪೆಕ್ಟರ್ ಅವರು ಪೊಲೀಸ್ ಕಮಿಷನರ್‌ಗೆ ಪತ್ರ ಬರೆದಿದ್ದರು. ಪ್ರಾಥಮಿಕ ತನಿಖೆಯನ್ನು ಇನ್ನೊಬ್ಬ ಎಸಿಪಿಗೆ ವಹಿಸಲು ಸಿದ್ಧತೆ ನಡೆಸಲಾಗಿದ್ದು, ಗೌಪ್ಯತೆ ಪಾಲಿಸಿಲ್ಲ ಎಂಬ ಕಾರಣ ತೋರಿಸಲಾಗಿದೆ. ಹೀಗಾಗಿ ಚಿನ್ನ ಎಗರಿಸಿದ ಪ್ರಕರಣದಲ್ಲಿ ಇನ್ಸ್‌ಪೆಕ್ಟರ್ ಬಚಾವ್ ಆಗುವ ಎಲ್ಲ ಲಕ್ಷಣ ಕಂಡುಬಂದಿದೆ.

ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದ ವೇಳೆ ಮಾಡಿದ ಸಾಧನೆಗೆ ಬಾಲಕೃಷ್ಣ ನಾಯಕ್‌ಗೆ ಮುಖ್ಯಮಂತ್ರಿ ಪದಕ ಲಭಿಸಿತ್ತು. ಆದರೆ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿ ಅನೇಕ ದೂರುಗಳು ಬಂದಿದ್ದವು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮುಖಂಡರೇ ಅವರನ್ನು ವರ್ಗಾಯಿಸುವಂತೆ ಅಲ್ಲಿನ ಶಾಸಕರೂ ಆಗಿರುವ ಸ್ಪೀಕರ್ ಯು.ಟಿ.ಖಾದರ್‌ಗೆ ದೂರು ನೀಡಿದ್ದರು. ಬಳಿಕ ಅವರನ್ನು ಪೊಲೀಸ್ ಕಮಿಷನರ್ ಅನುಪಮ್ ಅಗರವಾಲ್ ಅವರು ಬಾಲಕೃಷ್ಣ ಅವರನ್ನು ಮಂಗಳೂರು ಮಹಿಳಾ ಪೊಲೀಸ್ ಠಾಣೆಗೆ ವರ್ಗಾಯಿಸಿದ್ದರು.

ಚಿನ್ನದ ಪದಕಕ್ಕೆ ಶಿಫಾರಸು ಮಾಡುವ ಮುಂಚಿತವಾಗಿಯೇ ಇನ್ಸ್‌ಪೆಕ್ಟರ್ ವಿರುದ್ಧ ಆರೋಪಗಳು ಬಂದಿದ್ದವು. ಕಳ್ಳತನ ಆರೋಪಿಯ ಮೈಮೇಲೆ ಇದ್ದ ಚಿನ್ನಾಭರಣಗಳನ್ನು ವಶಪಡಿಸಿಕೊಂಡು ಬಳಿಕ ಕೋರ್ಟ್‌ಗೆ ಹಾಜರುಪಡಿಸದೆ ಎಗರಿಸಿದ ಆರೋಪದ ಕುರಿತು ಎಸಿಪಿ ಧನ್ಯಾ ನಾಯಕ್ ಅವರಿಗೆ ಯುವಕನ ತಾಯಿ ದೂರು ನೀಡಿದ್ದರು. ಎಸಿಪಿ ಧನ್ಯಾ ನಾಯಕ್ ಇನ್ಸ್‌ಪೆಕ್ಟರ್ ಬಾಲಕೃಷ್ಣ ಮೇಲಿನ ದೂರಿನ ವಿಚಾರಣೆ ನಡೆಸಿದ್ದರು. ಈ ಪ್ರಕರಣದಲ್ಲಿ ಇನ್ಸ್‌ಪೆಕ್ಟರ್ ಬಾಲಕೃಷ್ಣ ತಪ್ಪಿತಸ್ಥರು ಎನ್ನುವುದು ಸಾಬೀತಾಗುವ ಎಲ್ಲ ಸಾಧ್ಯತೆಗಳಿದ್ದವು. ಈ ಹಂತದಲ್ಲಿ ತನಿಖಾಧಿಕಾರಿಯನ್ನು ಬದಲಾಯಿಸುವಂತೆ ಇನ್ಸ್‌ಪೆಕ್ಟರ್ ಪತ್ರ ಬರೆದಿದ್ದರು. ಪತ್ರ ಬರೆದ ತಕ್ಷಣ ತನಿಖಾಧಿಕಾರಿಯನ್ನು ಬದಲಾಯಿಸಿರುವುದು ಅಚ್ಚರಿಗೆ ಕಾರಣವಾಗಿದೆ.

ಪ್ರಕರಣದ ತನಿಖೆ ನಾನು ನಡೆಸುತ್ತಿಲ್ಲ. ಈ ಕುರಿತು ಮಾಹಿತಿಗೆ ಪೊಲೀಸ್ ಕಮಿಷನರ್ ಅವರನ್ನು ಸಂಪರ್ಕಿಸಿ ಎಂದು ಎಸಿಪಿ ಧನ್ಯಾ ನಾಯಕ್ ಪ್ರತಿಕ್ರಿಯಿಸಿದ್ದಾರೆ. ಈ ಪ್ರಕರಣದ ಪ್ರಾಥಮಿಕ ತನಿಖೆಯನ್ನು ಧನ್ಯಾ ನಾಯಕ್ ಅವರಿಗೆ ವಹಿಸಿರುವುದಾಗಿ ಈ ಹಿಂದೆ ಪೊಲೀಸ್ ಕಮಿಷನರ್ ಅನುಪಮ್ ಅಗರವಾಲ್ ಮಾಹಿತಿ ನೀಡಿದ್ದರು. ಪ್ರಕರಣದ ತನಿಖಾಧಿಕಾರಿಯನ್ನು ಬದಲಾಯಿಸಿರುವ ಕುರಿತು ಪೊಲೀಸ್ ಕಮಿಷನರ್ ಅವರನ್ನು ಸಂಪರ್ಕಿಸಿದಾಗ ಅವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಅನುಪಮ್

ಧನ್ಯಾ ನಾಯಕ್

ಬಾಲಕೃಷ್ಣ

ಆರೋಪ ಏನು?

2024ರ ಜೂ. 28ರಂದು ಉಳ್ಳಾಲದಲ್ಲಿ ವೃದ್ಧರೊಬ್ಬರು ತನ್ನ ಮನೆಯಿಂದ 15 ಲಕ್ಷ ರು. ಬೆಲೆಯ 32 ಪವನ್ ಚಿನ್ನಾಭರಣ ಕಳವಾದ ಬಗ್ಗೆ ಉಳ್ಳಾಲ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡಿದ್ದ ಇನ್ಸ್‌ಪೆಕ್ಟರ್ ಬಾಲಕೃಷ್ಣ ದೂರು ನೀಡಿದ ವ್ಯಕ್ತಿಯ ಮಗ ಪಿಯುಸಿ ವಿದ್ಯಾರ್ಥಿ ಸಹಿತ ಇಬ್ಬರು ಅಪ್ರಾಪ್ತರು ಮತ್ತು ಆತನ ಮೂವರು ವಯಸ್ಕ ಗೆಳೆಯರು ಸೇರಿ ಕಳವು ಕೃತ್ಯ ನಡೆಸಿರುವುದಾಗಿ ಆರೋಪ ಪಟ್ಟಿ ಸಲ್ಲಿಸಿದ್ದರು. ಮಾರ್ಚ್ 13ರಂದು ಈ ಪ್ರಕರಣದಲ್ಲಿ ಆರೋಪಿಯಾಗಿದ್ದ ಬೆಳ್ತಂಗಡಿ ಮೂಲದ ಯುವಕನೊಬ್ಬನ ತಾಯಿ ಇನ್ಸ್‌ಪೆಕ್ಟರ್ ಬಾಲಕೃಷ್ಣ ವಿರುದ್ಧ ಮಂಗಳೂರು ದಕ್ಷಿಣ ಉಪ ವಿಭಾಗದ ಎಸಿಪಿ ಧನ್ಯಾ ನಾಯಕ್ ಅವರಿಗೆ ದೂರು ನೀಡಿದಾಗ ಕಳವು ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿತ್ತು. ಪ್ರಕರಣ ಮುಚ್ಚಿ ಹಾಕಲು 3 ಲಕ್ಷ ರು. ಬೇಡಿಕೆ ಇಟ್ಟಿದ್ದರು. ಜು. 1ರಂದು ಉಳ್ಳಾಲ ಠಾಣೆಯಲ್ಲೇ ಅವರಿಗೆ ಹಣ ನೀಡಿದ್ದರೂ ಮಗನನ್ನು ಆರೋಪಿಯಾಗಿಸಿ ಚಾರ್ಜ್ ಶೀಟ್ ಹಾಕಿದ್ದು, ಈ ವೇಳೆ ಮೈಯಲ್ಲಿದ್ದ ಬಂಗಾರದ ಸರ, ಒಂದು ಬ್ರಾಸ್ಲೆಟ್, ಒಂದು ಕಡಗ, ಮೂರು ಉಂಗುರ, ಒಂದು ಕಿವಿಯ ಓಲೆ ಸೇರಿ ಒಟ್ಟು 50 ಗ್ರಾಂ ಚಿನ್ನಾಭರಣವನ್ನು ಮುಟ್ಟುಗೋಲು ಹಾಕಿಕೊಂಡಿದ್ದರು. ಇದರ ಲೆಕ್ಕವನ್ನು ಚಾರ್ಜ್ ಶೀಟ್‌ನಲ್ಲಿ ಹಾಕುತ್ತೇನೆ, ಆಮೇಲೆ ರಿಕವರಿ ಮಾಡಿಕೊಳ್ಳಬಹುದು ಎಂದರಿದ್ದ ಇನ್ಸ್‌ಪೆಕ್ಟರ್ ಚಾರ್ಜ್ ಶೀಟ್‌ನಲ್ಲಿ ಮಗನ ಮೈಮೇಲಿದ್ದ ಚಿನ್ನಾಭರಣದ ಬಗ್ಗೆ ಉಲ್ಲೇಖಿಸಿಲ್ಲ ಎಂದು ತಾಯಿ ಲಿಖಿತವಾಗಿ ದೂರಿದ್ದರು. ಈ ದೂರಿನ ತನಿಖೆಯನ್ನು ಪೊಲೀಸ್ ಕಮಿಷನರ್ ಅನುಪಮ್ ಅಗರವಾಲ್ ಮಂಗಳೂರು ದಕ್ಷಿಣ ವಿಭಾಗ ಎಸಿಪಿ ಧನ್ಯಾ ನಾಯಕ್‌ಗೆ ವಹಿಸಿದ್ದರು.

ಜಾತಿಗಣತಿ: ಲಿಂಗಾಯತರ ಆಕ್ರೋಶ

← ಮೊದಲಪುಟದಿಂದ

ಸಾಮಾಜಿಕ ಆರ್ಥಿಕ ಗಣತಿಯನ್ನು ರಾಜ್ಯದ ಜನರ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯನ್ನು ಅರಿಯುವ ನಿಟ್ಟಿನಲ್ಲಿ ಮಾಡ ಲಾಗಿದ್ದರೂ, ಈಗಿರುವ ಅಂಕಿ-ಅಂಶವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಈ ಗಣತಿಯಿಂದ ರಾಜಕೀಯ ಲೆಕ್ಕಾಚಾರಗಳಲ್ಲಿ ತೀವ್ರ ಬದಲಾವಣೆಯಾಗುವ ಸಾಧ್ಯತೆಯಿದೆ. ಇದರೊಂದಿಗೆ ಮೀಸಲು ಪ್ರಮಾಣ ಹೆಚ್ಚಿಸಬೇಕು ಎನ್ನುವ ಶಿಫಾರಸನ್ನು ಜಯಪ್ರಕಾಶ್ ಹೆಗ್ಡೆ ಅವರು ಮಾಡಿದ್ದಾರೆ. ರಾಜ್ಯದಲ್ಲಿ ಒಬಿಸಿ ಪರಿಧಿಯಲ್ಲಿ ಬರುವವರ ಸಂಖ್ಯೆ ಶೇ.70ರಷ್ಟಿದೆ ಎಂಬುದು ವರದಿಯಿಂದ ಬಹಿರಂಗವಾಗಿದೆ. ಆದರೆ ಶೇ.50 ಮೀರಬಾರದು ಎನ್ನುವ ಸುಪ್ರೀಂ ಕೋರ್ಟ್ ಆದೇಶವನ್ನು ಯಾವ ರೀತಿಯಲ್ಲಿ ನಿಭಾಯಿಸಬೇಕು ಎನ್ನುವುದು ಈಗಿರುವ ಪ್ರಶ್ನೆಯಾಗಿದೆ.

ಕಾಂತರಾಜು ನೇತೃತ್ವದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ವರದಿ ಬಗ್ಗೆ ವಾಸ್ತವ ಸತ್ಯ ತಿಳಿಯದೆ ಮಾತನಾಡುವುದು ಸರಿಯಲ್ಲ. ಎಲ್ಲಾ ಸಚಿವರಿಗೂ ವರದಿ ಪ್ರತಿ ಕಳುಹಿಸಲಾಗುತ್ತಿದೆ. ಗಣತಿ ವಾಸ್ತವ ಸತ್ಯ ಯಾರಿಗೂ ಗೊತ್ತಿಲ್ಲ. ಎಲ್ಲಾ ಮಂತ್ರಿಗಳಿಗೂ ಪ್ರತಿ ಕಳುಹಿಸಲಾಗುವುದು. ಜಾತಿ ಲೆಕ್ಕ ಹಾಕಲು ಗಣತಿ ಮಾಡಿಲ್ಲ. ಎಲ್ಲ ಸಮುದಾಯಗಳಲ್ಲಿ ವಿದ್ಯಾವಂತರು, ಅವಿದ್ಯಾವಂತರು ಎಷ್ಟಿದ್ದಾರೆ? ಆಸ್ತಿ ಎಷ್ಟಿದೆ? ಬಡವರು ಎಷ್ಟಿದ್ದಾರೆ? ಉದ್ಯೋಗದಲ್ಲಿ ಎಷ್ಟು ಮಂದಿ ಇದ್ದಾರೆ ಇತ್ಯಾದಿ ಮಾಹಿತಿ ಸಂಗ್ರಹಿಸಲು ಈ ಜಾತಿ ಗಣತಿ ಮಾಡಿಸಲಾಗಿದೆ.

-ಶಿವರಾಜ್ ತಂಗಡಗಿ, ಹಿಂದುಳಿದ ವರ್ಗಗಳ ಸಚಿವ

ಮೀಸಲಾತಿ ಪರಿಷ್ಕರಣೆ ಮಾಡಬೇಕು ಎಂದು ವರದಿಯಲ್ಲಿ ಶಿಫಾರಸು ನೀಡಿದರೆ ಅದನ್ನು ಅಧ್ಯಯನ ನಡೆಸಲಾಗುವುದು, ಸದ್ಯದ ಪರಿಸ್ಥಿತಿಯಲ್ಲಿ ಜನಸಂಖ್ಯೆ ಸ್ಫೋಟವಾಗುತ್ತಿದೆ. ಹೀಗಾಗಿ ಎಲ್ಲರಿಗೂ ಅವಕಾಶಗಳು ಸಿಗಬೇಕು. ಆ ನಿಟ್ಟಿನಲ್ಲಿ ವೈಜ್ಞಾನಿಕ ಕ್ರಮದಲ್ಲಿ ಪ್ರಯತ್ನ ನಡೆಸಲಾಗುತ್ತಿದೆ. ಇದರ ಮೂಲಕ ಯಾರ ಹಕ್ಕನ್ನು ಕಸಿಯುವ ಪ್ರಯತ್ನ ಮಾಡುವುದಿಲ್ಲ. ಸಮಾಜದ ಬದಲಾವಣೆ ಕುರಿತು ಈ ಸಮೀಕ್ಷೆ ನಡೆಸಿದ್ದು, ಅದನ್ನು ಅನುಷ್ಠಾನಕ್ಕೆ ತರಲು ಸರಕಾರ ಬದ್ಧವಾಗಿದೆ.

-ಎಚ್.ಸಿ. ಮಹದೇವಪ್ಪ, ಸಮಾಜಕಲ್ಯಾಣ ಸಚಿವ

ಉಕ್ರೇನ್ ಮೇಲೆ ಕ್ಷಿಪಣಿ ದಾಳಿ: 31ಜನ ಬಲಿ

← ಮೊದಲಪುಟದಿಂದ

ಭಾರತದ ಔಷಧ ಕಂಪನಿ ಗೋದಾಮು ಧ್ವಂಸ ಉಕ್ರೇನ್‌ನ ಕೀವ್‌ನಲ್ಲಿರುವ ಭಾರತೀಯ ಔಷಧ ಕಂಪನಿಯ ಗೋದಾಮು ರಷ್ಯಾದ ಡ್ರೋನ್ ದಾಳಿಯಲ್ಲಿ ಧ್ವಂಸವಾಗಿದೆ. ಉಕ್ರೇನ್‌ನ ಅತಿದೊಡ್ಡ ಔಷಧ ಸಂಸ್ಥೆಗಳಲ್ಲಿ ಒಂದಾಗಿರುವ 'ಕುಸುಮ್', ಭಾರತದ ಉದ್ಯಮಿ ರಾಜೀವ್ ಗುಪ್ತಾ ಒಡೆತನದ್ದಾಗಿದೆ.

ಈ ಸುದ್ದಿಯನ್ನು ಭಾರತದಲ್ಲಿನ ಉಕ್ರೇನ್ ರಾಯಭಾರ ಕಚೇರಿ ಫೋಟೋ ಸಮೇತ 'ಎಕ್ಸ್'ನಲ್ಲಿ ಹಂಚಿಕೊಂಡಿದೆ. ಭಾರತವನ್ನು 'ಆಪ್ತಮಿತ್ರ' ಎಂದು ಹೇಳಿಕೊಳ್ಳುತ್ತಲೇ, ರಷ್ಯಾ ನಮ್ಮ ದೇಶದಲ್ಲಿರುವ ಭಾರತದ ಕಂಪನಿಗಳನ್ನೇ ಗುರಿಯಾಗಿಸಿಕೊಂಡು ಡ್ರೋನ್ ದಾಳಿ ನಡೆಸಿದೆ. ಮಕ್ಕಳು ಮತ್ತು ವೃದ್ಧರಿಗೆ ಅಗತ್ಯವಾದ ಔಷಧ ತಯಾರಿಸುವ ಭಾರತೀಯ ಔಷಧ ಕಂಪನಿ ಮೇಲಿನ ದಾಳಿ ಖಂಡನೀಯ ಎಂದು ಉಕ್ರೇನ್ ರಾಯಭಾರ ಕಚೇರಿ ಸಂದೇಶದಲ್ಲಿ ಬರೆದಿದೆ.

ಮತಾಂತರ ಆಗಲು ಒತ್ತಾಯ

ಪತ್ನಿ, ಅತ್ತೆ ಮೇಲೆ ಹಲ್ಲೆ

ಶ್ರೀರಂಗಪಟ್ಟಣ: ಪತಿಯು ತಮ್ಮ ಪತ್ನಿಯನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಆಗುವಂತೆ ಒತ್ತಾಯಿಸಿದ್ದಾರೆ ಎಂಬ ಹಿನ್ನೆಲೆಯಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿರುವ ಘಟನೆ ಪಟ್ಟಣದಲ್ಲಿ ಶನಿವಾರ ಸಂಜೆ ನಡೆದಿದೆ.

ಇಲ್ಲಿನ ಮುಖ್ಯ ರಸ್ತೆ ನಿಮಿಷಾಂಬ ಮೆಟಲ್ ಎದುರು ಘರ್ಷಣೆ ನಡೆದು ತಾಲೂಕಿನ ಪಾಲಹಳ್ಳಿ ಗ್ರಾಮದ ಶ್ರುತಿ ಮತ್ತು ಅವರ ಮಕ್ಕಳಾದ ಲಕ್ಷ್ಮಿ, ರವಿಕಿರಣ್ ಹಾಗೂ ಲಕ್ಷ್ಮಿ ಅವರ ಪತಿ ಶ್ರೀಕಾಂತ್ ಗಾಯಗೊಂಡಿದ್ದಾರೆ. ಶ್ರುತಿ ಮತ್ತು ಲಕ್ಷ್ಮಿ ಪಟ್ಟಣದ ಆಸ್ಪತ್ರೆಗೆ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಲಕ್ಷ್ಮಿ ಅವರ ಪತಿ ಶ್ರೀಕಾಂತ್ ಅವರಿಗೆ ಗಾಯವಾಗಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಾಲಹಳ್ಳಿ ಗ್ರಾಮದ ಶ್ರೀಕಾಂತ್ ಮತ್ತು ಲಕ್ಷ್ಮಿ 15 ವರ್ಷಗಳ ಹಿಂದೆ ವಿವಾಹವಾಗಿದ್ದು ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಶ್ರೀಕಾಂತ್ ಮತ್ತು ಲಕ್ಷ್ಮಿ ಅವರ ನಡುವೆ ಆಗಾಗ ಗಲಾಟೆ ನಡೆಯುತ್ತಿತ್ತು ಅವರ ಬಂಧುಗಳು ತಿಳಿಸಿದ್ದಾರೆ.

ಘಟನೆ ಸಂಬಂಧ ಲಕ್ಷ್ಮಿ ಅವರ ಸಹೋದರ ರವಿಕಿರಣ್ ಪೊಲೀಸರಿಗೆ ದೂರು ನೀಡಿದ್ದು, ಲಕ್ಷ್ಮಿ ಅವರ ಪತಿ ಶ್ರೀಕಾಂತ್, ಹರೀಶ್, ನಾಗಿಣಿ, ಕೃಷ್ಣವೇಣಿ, ರವಿಕುಮಾರ್, ಸುಬ್ರಹ್ಮಣ್ಯ, ಪ್ರಭಾ, ಪ್ರಶಾಂತ್ ಮತ್ತು ಸಾಗರ್ ಎಂಬವರ ವಿರುದ್ಧ ಪಟ್ಟಣ ಠಾಣೆಯಲ್ಲಿ ಹಲ್ಲೆ ಪ್ರಕರಣ ದಾಖಲಾಗಿದೆ. ರವಿಕಿರಣ್ ಇತರರ ವಿರುದ್ಧ ಶ್ರೀಕಾಂತ್ ಅವರ ಬಂಧುಗಳು ಪ್ರತಿ ದೂರು ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಕಸ್ಮಿಕ ಬೆಂಕಿ: ಅಪಾರ ಬೆಳೆ ಹಾನಿ

ಬೀದರ್: ಆಕಸ್ಮಿಕ ಬೆಂಕಿ ಹೊತ್ತಿಕೊಂಡಿರುವ ಪರಿಣಾಮ 14 ಎಕರೆ ಜೋಳ, 6 ಎಕರೆಯಲ್ಲಿ ಬೆಳೆದಿದ್ದ ಕಬ್ಬು, ಪರಂಗಿ ಹಣ್ಣು ಜೊತೆಗೆ 120 ಮಾವಿನ ಗಿಡಗಳು ಬೆಂಕಿಗಾಹುತಿಯಾಗಿರುವ ಘಟನೆ ಜಿಲ್ಲೆಯ ಭಾಲ್ಕಿ ಪಟ್ಟಣದ ಹೊರವಲಯದ ತೋಟದಲ್ಲಿ ನಡೆದಿದೆ. ಪ್ರಶಾಂತ್ ಪಾಟೀಲ್ ಎಂಬುವವರಿಗೆ ಸೇರಿದ 6 ಎಕರೆ ಹೊಲದಲ್ಲಿ ಬೆಳೆದಿದ್ದ ಕಬ್ಬು, ಪಪ್ಪಾಯಿ, ಮಾವು ಹಾಗೂ ಭರತ್ ನಾಟೀಕರ್ ಎಂಬುವವರ 14 ಎಕರೆಯ ಜೋಳ ಸುಟ್ಟು ಭಸ್ಮವಾಗಿದೆ. ಸುಮಾರು 120 ಮಾವಿನ ಗಿಡಗಳಿಗೆ ಬೆಂಕಿ ತಗುಲಿದೆ.

ಕೊಲೆ ಮಾಡಿದ ಬಿಹಾರ ಮೂಲದ ಆರೋಪಿ ಪೊಲೀಸರ ಗುಂಡೇಟಿಗೆ ಬಲಿ

ಅತ್ಯಾಚಾರಕ್ಕೆ ಯತ್ನ: ಬಾಲಕಿ ಕತ್ತು ಹಿಸುಕಿ ಕೊಲೆ

ಹುಬ್ಬಳ್ಳಿ: ನಗರದ ಸಂತೋಷನಗರದಲ್ಲಿ ಐದು ವರ್ಷದ ಬಾಲಕಿಯನ್ನು ಅಪಹರಣ ಮಾಡಿ, ಅತ್ಯಾಚಾರ ಮಾಡಿ ಕತ್ತು ಹಿಸುಕಿ ಕೊಲೆ ಮಾಡಿದ್ದ ಘಟನೆಯನ್ನು ಖಂಡಿಸಿ, ಸ್ಥಳೀಯರು ಅಶೋಕನಗರ ಪೊಲೀಸ್ ಠಾಣೆ ಮುಂದೆ ಜಮಾವಣೆ ಮಾಡಿ ಪ್ರತಿಭಟನೆ ಮಾಡಿ, ಆಕ್ರೋಶ ವ್ಯಕ್ತಪಡಿಸಿದ್ದರು.

10 ಲಕ್ಷ ಪರಿಹಾರ

ಅತ್ಯಾಚಾರಕ್ಕೊಳಗಾಗಿ ಕೊಲೆಯಾಗಿರುವ ಮೃತ ಬಾಲಕಿ ಕುಟುಂಬಕ್ಕೆ ರಾಜ್ಯ ಸರಕಾರದಿಂದ 10 ಲಕ್ಷ ರು. ಪರಿಹಾರ ಘೋಷಣೆ ಮಾಡಲಾಗಿದೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ನಿರ್ದೇಶನದ ಮೇರೆಗೆ ಹತ್ತು ಲಕ್ಷ ರು.ಪರಿಹಾರ ಘೋಷಣೆ ಮಾಡಲಾಗಿದೆ. ಇದರ ಜತೆಗೆ ನಿಗಮ ಮಂಡಳಿ ಅಧ್ಯಕ್ಷರು ಹಾಗೂ ಶಾಸಕರು ಆಗಿರುವ ಪ್ರಸಾದ ಅಬ್ಬಯ್ಯಾ ಮಾತನಾಡಿ, ಮೃತ ಬಾಲಕಿ ಕುಟುಂಬಸ್ಥರಿಗೆ ಸ್ಲಂ ಬೋರ್ಡ್‌ನಿಂದ ಒಂದು ಮನೆ ಹಸ್ತಾಂತರಕ್ಕೆ ನಿರ್ಧಾರ ಮಾಡಲಾಗಿದೆ ಎಂದರು.

ಶೌಚಾಲಯದಲ್ಲಿ ಶವವಾಗಿ ಪತ್ತೆ

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ದಂಪತಿಗಳು ಹುಬ್ಬಳ್ಳಿಯಲ್ಲಿ ವಾಸ ಮಾಡುತ್ತಿದ್ದರು. ತಂದೆ ಪೇಟಿಂಗ್ ಕೆಲಸ ಮಾಡುತ್ತಿದ್ದರೇ, ತಾಯಿ ಅವರಿವರ ಮನೆಯ ಕೆಲಸ ಮಾಡಿ, ಮಧ್ಯಾಹ್ನದ ನಂತರ ಬ್ಯೂಟಿ ಪಾರ್ಲರ್‌ನಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದರು. ಭಾನುವಾರ ಹೊರಗೆ ಹೋಗಿ ಮನೆಗೆ ಬಂದಾಗ ಐದು ವರ್ಷದ ಮಗಳು ಕಂಡಿಲ್ಲ. ಆಗ ತಾಯಿಯು ತನ್ನ ಪತಿಗೆ ಕರೆದು ಹುಡುಕಾಟ ಆರಂಭಿಸಿದ್ದಾರೆ. ನಂತರ ಮಗು ಮನೆಯ ಕೂಗಳತೆ ದೂರದಲ್ಲಿನ ಟಾಯ್ಲೆಟ್‌ನಲ್ಲಿ ಶವವಾಗಿ ಪತ್ತೆಯಾಗಿದ್ದಳು. ಘಟನೆಯ ಮಾಹಿತಿ ತಿಳಿಯುತ್ತಿದ್ದ ಹಾಗೇ ನೂರಾರು ಜನರು ಠಾಣೆಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದ್ದರು. ಅಷ್ಟೇ ಅಲ್ಲ, ಆರೋಪಿಯನ್ನು ನಮ್ಮ ಕೈಗೆ ಕೊಡಿ ಎಂದು ಆಕ್ರೋಶ ಹೊರ ಹಾಕಿದ್ದರು. ನತದೃಷ್ಟ ತಂದೆ-ತಾಯಿ ಕಿಮ್ಸ್ ಮುಂಭಾಗದಲ್ಲಿ ನಿಂತು ನಮ್ಮ ಮಗಳನ್ನು ಕೊಡಿ ಎಂದು ಕಣ್ಣೀರು ಹಾಕುತ್ತಿದ್ದರು. ಈ ನಡುವೆ ಆರೋಪಿಗೆ ಕಠಿಣ ಶಿಕ್ಷೆಯಾಗಬೇಕು ಎಂಬ ಒತ್ತಾಯ ಕೇಳಿ ಬಂದ ಕೆಲವೇ ಗಂಟೆಗಳಲ್ಲಿ ಆರೋಪಿ ಸಾವಿಗೀಡಾಗಿದ್ದಾನೆ. ಹುಬ್ಬಳ್ಳಿ ಧಾರವಾಡ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ಅವರ ಈ ಕಾರ್ಯ ಜನಮೆಚ್ಚುಗೆಗೆ ಕಾರಣವಾಗಿದೆ.

ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರಕ್ಕೆ ಯತ್ನ ಹಾಗೂ ಕೊಲೆ ಅತ್ಯಂತ ದೊಡ್ಡ ದುರಂತ. ಹುಬ್ಬಳ್ಳಿಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಇದೊಂದು ಮಾನವ ಸಮಾಜ ತಲೆ ತಗ್ಗಿಸುವಂತಾಗಿದೆ. ಹುಬ್ಬಳ್ಳಿಯಲ್ಲಿ ಹಾಡು ಹಗಲೇ ಕೊಲೆ,ದರೋಡೆ ಆಗುತ್ತಿವೆ. ಹುಬ್ಬಳ್ಳಿ ಮಿನಿ ಬಿಹಾರ ಆಗಿದೆ ಯಾವುದೇ ಕೊಲೆ ಆರೋಪಿಗೆ ತಕ್ಕ ಶಿಕ್ಷೆ ಆಗುತ್ತಿಲ್ಲ. ಹುಬ್ಬಳ್ಳಿ- ಧಾರವಾಡ ಕಮಿಷನರ್‌ಗೆ ಫ್ರೀ ಹ್ಯಾಂಡ್ ಕೊಡಿ. ಗೃಹ ಸಚಿವರು ಕೈ ಕಟ್ಟಿ ಕುಳಿತ್ತಿದ್ದಾರೆ.

-ನಿರಂಜನ ಹಿರೇಮಠ, ಮೃತ ನೇಹಾ ಹಿರೇಮಠ ತಂದೆ

ಪ್ರತಿಭಟನಾ ಸ್ಥಳಕ್ಕೆ ಪೊಲೀಸ್ ಕಮಿಷನರ್ ಆಗಮಿಸಿ, ಸ್ಥಳೀಯರ ಮನ ವೊಲಿಸುವ ಪ್ರಯತ್ನ ಮಾಡಿ ದ್ದರೂ, ಸ್ಥಳೀಯರು ಆರೋಪಿಯನ್ನು ಎನ್ ಕೌಂಟರ್ ಮಾಡಬೇಕು. ಇಲ್ಲದೇ ಹೋದರೆ ಗಲ್ಲಿಗೆ ಏರಿಸಬೇಕೆಂದು ಒತ್ತಾಯಿಸಿದ್ದರು. ತಕ್ಷಣ ಎಚ್ಚೆತ್ತುಕೊಂಡ ಪೊಲೀಸರು, ಬಿಹಾರ ಮೂಲದ ರಕ್ಷಿತ ಆರೋಪಿಯನ್ನು ಪೊಲೀಸರು ಬಂಧಿಸುವಾಗ ತಪ್ಪಿಸಿಕೊಳ್ಳಲು ಯತ್ನಿಸಿದ್ದ.

ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಆರೋಪಿ ಕಾಲಿಗೆ ಗುಂಡು ಹೊಡೆದು ಬಂಧಿಸುವಾಗ, ಈ ಸಮಯದಲ್ಲಿ ತೀವ್ರವಾದ ರಕ್ತಸ್ರಾವವಾಗಿ ಆರೋಪಿ ಸಾವನ್ನಪಿದ್ದಾನೆ.

ಮನೆ ನೀಡಿರುವುದು ಸಾಬೀತು ಮಾಡಿದ್ರೆ ರಾಜೀನಾಮೆ ನೀಡುತ್ತೇನೆ

ಬಿಜೆಪಿ ಅವಧಿಯಲ್ಲಿ ಮನೆಗಳು ಮಂಜೂರು ಮಾಡಿಲ್ಲ

ಹುಬ್ಬಳ್ಳಿ: ಬಿಜೆಪಿ ತಮ್ಮ ಅವಧಿಯಲ್ಲಿ ಒಂದೇ ಒಂದು ಮನೆ ನೀಡಿರುವುದು ಸಾಬೀತು ಮಾಡಿದ್ರೆ, ನಾನು ನಾಳೆಯೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ, ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಬಿಜೆಪಿಯವರಿಗೆ ಸವಾಲ್ ಹಾಕಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ನಮ್ಮ ಸರಕಾರ ಅಧಿಕಾರದಲ್ಲಿದ್ದಾಗ ಈ ಮನೆಗಳನ್ನು ಮಂಜೂರು ಮಾಡಲಾಗಿತ್ತು. ಬಳಿಕ ಅಧಿಕಾರಕ್ಕೆ ಬಂದ ಸಮ್ಮಿಶ್ರ ಸರಕಾರ ಮತ್ತು ಬಿಜೆಪಿ ಸರಕಾರದಲ್ಲಿ ಮನೆಗಳ ಯಾವುದೇ ಅಭಿವೃದ್ಧಿ ಆಗಿಲ್ಲ. ಬಿಜೆಪಿ ಸರಕಾರ ಅವಧಿಯಲ್ಲಿ ಒಂದೂ ಮನೆ ಮಂಜೂರು ಮಾಡಿಲ್ಲ. ಈ ಹಿಂದೆ ನಾವೇ ಮಂಜೂರು ಮಾಡಿರುವ ಮನೆ ನಿರ್ಮಾಣ ಮಾಡಲು 8 ವರ್ಷ ಬೇಕಾಯಿತು ಎಂದು ಕಿಡಿಕಾರಿದರು.

ಮುಂದಿನ ತಿಂಗಳು ರಾಜ್ಯ ವ್ಯಾಪ್ತಿಯಲ್ಲಿ ಒಟ್ಟು 42 ಸಾವಿರ ಮನೆಗಳನ್ನು ನೀಡುತ್ತಿದ್ದೇವೆ. ಹುಬ್ಬಳ್ಳಿ ಒಂದಕ್ಕೆ ಒಂದು ಸಾವಿರಕ್ಕೂ ಅಧಿಕ ಮನೆ ನೀಡುತ್ತಿದ್ದೇವೆ. ಸಿಎಂ ಸಿದ್ದರಾಮಯ್ಯ ಹಾಗೂ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಈ ತಿಂಗಳ ಅಂತ್ಯದಲ್ಲಿ ಹುಬ್ಬಳ್ಳಿಯಲ್ಲಿ ದೊಡ್ಡ ಕಾರ್ಯಕ್ರಮ ಮಾಡುತ್ತೇವೆ.

-ಜಮೀರ್ ಅಹ್ಮದ್, ಸಚಿವ

ಮಚ್ಚು ಹಿಡಿದು ಬಂದ ಆರೋಪಿ ಪೊಲೀಸರ ವಶಕ್ಕೆ

ಯತ್ನಾಳ್ ವೇದಿಕೆ ಮೇಲೆ ಶಸ್ತ್ರಧಾರಿ

ಲಿಂಗಸೂಗೂರು: ಪಟ್ಟಣದ ಜೂನಿಯರ್ ಕಾಲೇಜಿನಲ್ಲಿ ನಡೆದ ಹಿಂದೂ ಸಾಮ್ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಬಸವನಗೌಡ ಪಾಟೀಲ್ ಯತ್ನಾಳ ಭಾಷಣ ಮಾಡುವಾಗ ವ್ಯಕ್ತಿಯೊಬ್ಬ ಮಾರಕಾಸ್ತ್ರ ಹಿಡಿದು ವೇದಿಕೆ ಮೇಲೆ ಬಂದ ಘಟನೆ ನಡೆದಿದೆ. ಕೂಡಲೇ ಕಾರ್ಯಪ್ರವೃತ್ತರಾದ ಪೊಲೀಸರಿಂದ ವ್ಯಕ್ತಿಯನ್ನು ಬಂಧಿಸಿದ್ದಾರೆ. ಶಾಸಕ ಬಸನಗೌಡ ಯತ್ನಾಳರನ್ನ ಕೊಲೆ ಮಾಡುವುದಾಗಿ ಇತ್ತೀಚಿಗೆ ಆಡಿಯೊ ಮತ್ತು ವಿಡಿಯೊ ವೈರಲ್ ಆಗಿದ್ದರಿಂದ ಮಾರಕಾಸ್ತ್ರದೊಂದಿಗೆ ವೇದಿಕೆ ಮೇಲೆ ಬಂದಿರುವುದು ಆತಂಕಕ್ಕೆ ಕಾರಣವಾಗಿತ್ತು. ಶ್ರೀರಾಮಸೇನೆ ತಾಲೂಕು ಸಮಿತಿಯ ವತಿಯಿಂದ ಶ್ರೀರಾಮನವಮಿ ಅಂಗವಾಗಿ ಹಿಂದೂ ಸಾಮ್ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು, ಕಾರ್ಯಕ್ರಮಕ್ಕೆ ವಿಜಯಪುರ ಶಾಸಕ ಬಸವನಗೌಡ ಯತ್ನಾಳ, ಪ್ರಮೋದ್ ಮುತಾಲಿಕ್, ಸೇರಿದಂತೆ ಅನೇಕ ಹಿಂದೂ ಮುಖಂಡರು ವೇದಿಕೆ ಮೇಲೆ ಇದ್ದರು. ಕಾರ್ಯ ಕ್ರಮ ಕುರಿತು ಬಸವನಗೌಡ ಪಾಟೀಲ್ ಯತ್ನಾಳ ಭಾಷಣ ಮಾಡುತ್ತಿರುವ ಸಂದರ್ಭದಲ್ಲಿ ಶ್ರೀನಿವಾಸ ಪೂಜಾರಿ ಉಪ್ಪಾರ ಎಂಬ ವ್ಯಕ್ತಿಯೊಬ್ಬ ಕುಡಿದ ಹಮಲಿನಲ್ಲಿ ಮಚ್ಚು ಹಿಡಿದುಕೊಂಡು ವೇದಿಕೆ ಮೇಲೆ ಬಂದಿದ್ದು, ಸಾವಿರಾರು ಜನ ಕಾರ್ಯ ಕರ್ತರು, ಪೊಲೀಸ್ ಸಿಬ್ಬಂದಿಗಳ ಇದ್ದರು ಮಾರಕಸ್ತ್ರ ತೆಗೆದುಕೊಂಡು ಬಂದಿದ್ದು ಏಕೆ ಎಂಬದು ಚರ್ಚೆಗೆ ಗ್ರಾಸವಾಗಿದೆ. ಪೊಲೀಸ್ ಸಿಬ್ಬಂದಿಯವರ ಸಮಯ ಪ್ರಜ್ಞೆಯಿಂದ ವ್ಯಕ್ತಿಯನ್ನು ಪೊಲೀಸರು ಬಂಧಿಸಿವಿಚಾರಣೆಗೆ ಒಳಪಡಿಸಿದ್ದಾರೆ. ನಾನು ಶೇಕ್ ಹುಸೇನ್ ಎಂಬ ವ್ಯಕ್ತಿಗೆ ಹಣ ಕೊಟ್ಟಿದ್ದೆ, ಹಣ ಕೇಳಿದ್ದಕ್ಕೆ ಬೆದರಿಕೆ ಹಾಕಿದ್ದ, ಆ ಭಯಕ್ಕೆ ನಾನು ಮಚ್ಚು ಇಟ್ಟುಕೊಂಡಿದ್ದೆ, ನಾನು ಕಾರ್ಯಕ್ರಮಕ್ಕೆ ಬಂದಿದ್ದು, ವೇದಿಕೆ ಮೇಲಿರುವ ವ್ಯಕ್ತಿಗಳ ಆರ್ಶೀವಾದ ಪಡೆಯಲು ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದಾನೆ.

ಗೋಸಾಗಣೆ ಆರೋಪ

ವಿಜಯಪುರ: ಕಗ್ಗೋಡದಲ್ಲಿರುವ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಗೋ ಶಾಲೆಯಿಂದ ಕಸಾಯಿಖಾನೆಗೆ ಅಕ್ರಮವಾಗಿ ಗೋವುಗಳನ್ನು ಸಾಗಿಸಲಾಗುತ್ತಿದ್ದು, ದೊಡ್ಡ ಅವ್ಯವಹಾರ ನಡೆಯುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್ ಮುಶ್ರೀಫ್ ಗಂಭೀರ ಆರೋಪ ಮಾಡಿದ್ದಾರೆ.

ರಾಜ್ಯದಲ್ಲಿ ಡೀಸೆಲ್ ದರ ಏರಿಕೆಗೆ ಆಕ್ರೋಶ: ಇಂದಿನಿಂದ ಲಾರಿ ಮುಷ್ಕರ

ಬೆಂಗಳೂರು: ರಾಜ್ಯದಲ್ಲಿ ಡೀಸೆಲ್ ಬೆಲೆ ಏರಿಕೆ ಹಾಗೂ ಟೋಲ್ ಶುಲ್ಕದ ಹೆಚ್ಚಳದ ವಿರುದ್ಧ ರಾಜ್ಯ ಲಾರಿ ಮಾಲೀಕರ ಸಂಘ ಇಂದು (ಸೋಮವಾರ) ಮಧ್ಯರಾತ್ರಿಯಿಂದ ಅನಿರ್ದಿಷ್ಟಾವಧಿ ಲಾರಿ ಮುಷ್ಕರಕ್ಕೆ ಕರೆ ನೀಡಿದೆ. ಆದರೆ ಈ ಮುಷ್ಕರಕ್ಕೆ ಲಾರಿ ಮಾಲೀಕರ ಸಂಘದಲ್ಲಿಯೇ ಭಿನ್ನರಾಗವಿರುವುದರಿಂದ ಮುಷ್ಕರ ಯಶಸ್ವಿಯಾಗುವುದೋ ಇಲ್ಲವೋ ಎನ್ನುವ ಅನುಮಾನಗಳಿವೆ.

ಈ ಕುರಿತು ಮಾಹಿತಿ ನೀಡಿರುವ ರಾಜ್ಯ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಜಿ. ಆರ್. ಷಣ್ಮುಗಪ್ಪ, ಸೋಮವಾರ ಮಧ್ಯರಾತ್ರಿಯಿಂದ ಲಾರಿ ಮುಷ್ಕರ ನಡೆಯಲಿದೆ. ಯಾವುದೇ ಕಾರಣಕ್ಕೂ ಮುಷ್ಕರ ಹಿಂಪಡೆಯುವುದಿಲ್ಲ, ಹೊರ ರಾಜ್ಯಗಳ ಲಾರಿ ಮಾಲೀಕರು ಸೇರಿದಂತೆ ರಾಜ್ಯವ್ಯಾಪಿ ಮುಷ್ಕರಕ್ಕೆ ಬೆಂಬಲ ವ್ಯಕ್ತವಾಗಿದೆ ಎಂದು ತಿಳಿಸಿದ್ದಾರೆ. ರಾಜ್ಯದಲ್ಲಿ 6 ಲಕ್ಷಕ್ಕೂ ಹೆಚ್ಚು ಲಾರಿಗಳಿದ್ದು, ಮುಷ್ಕರ ಬೆಂಬಲಿಸುವ ಮೂಲಕ ಸಂಚಾರವನ್ನು ಸ್ಥಗಿತಗೊಳಿಸಲಿವೆ. ಜಲ್ಲಿಕಲ್ಲು, ಮರಳು ಲಾರಿ, ಗೂಡ್ಸ್ ವಾಹನಗಳು ಸೇರಿದಂತೆ ಎಲ್ಲಾ ಮಾದರಿಯ ಸರಕು ಸೇವೆಗಳು ಸ್ಥಗಿತಗೊಳ್ಳಲಿವೆ ಎಂದು ಅವರು ಹೇಳಿದ್ದಾರೆ.

ಲಾರಿ ಮುಷ್ಕರಕ್ಕೆ ವಿರೋಧ: ಮತ್ತೊಂದೆಡೆ ಈ ಮುಷ್ಕರಕ್ಕೆ ಫೆಡರೇಶನ್ ಆಫ್ ಲಾರಿ ಓನರ್ಸ್ ಅಸೋಸಿಯೇಷನ್ ಗೌರವಾಧ್ಯಕ್ಷ ಚನ್ನಾರೆಡ್ಡಿ ವಿರೋಧ ವ್ಯಕ್ತಪಡಿಸಿದ್ದಾರೆ. ನಾವು ಈ ಮುಷ್ಕರವನ್ನು ಬೆಂಬಲಿಸುವುದಿಲ್ಲ. ಲಾರಿಗಳು ಎಂದಿನಂತೆ ಸಂಚರಿಸಲಿವೆ. ಸಾರ್ವಜನಿಕರು ಯಾವುದೇ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಪುದುಚೇರಿ ಬಿಟ್ಟರೆ ಕರ್ನಾಟಕದಲ್ಲಿ ಡೀಸೆಲ್ ದರ ಕಡಿಮೆ ಇದೆ. ಸರಕಾರದೊಂದಿಗೆ ಘರ್ಷಣೆಗೆ ಇಳಿಯುವ ಬದಲು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು ಎಂದು ಚೆನ್ನಾರೆಡ್ಡಿ ಹೇಳಿದ್ದಾರೆ.

ಮುಷ್ಕರಕ್ಕೆ ಯಾರ್‍ಯಾರ ಬೆಂಬಲ

- 5 ಲಕ್ಷ ಲಾರಿ ಬಂದ್
- ಏರ್‌ಪೋರ್ಟ್ ಟ್ಯಾಕ್ಸಿ ಬಂದ್
- ಗೂಡ್ಸ್ ವಾಹನಗಳು, ಪೆಟ್ರೋಲ್ ಡೀಸೆಲ್ ಲಾರಿ ಬಂದ್
- ಜಲ್ಲಿಕಲ್ಲು, ಮರಳು ಲಾರಿ ಬಂದ್
- ಚಾಲಕರ ಸಂಘದಿಂದ ಬಂದ್

ಬೇಡಿಕೆಗಳೇನು?

ರಾಜ್ಯ ಸರಕಾರ ಪ್ರಮುಖ ಸಾರಿಗೆ ಸಮಸ್ಯೆಗಳ ಕುರಿತು ತಕ್ಷಣದ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ರಾಜ್ಯಾದ್ಯಂತ ಮುಷ್ಕರಕ್ಕೆ ಮುಂದಾಗಿದೆ. ಆರು ಲಕ್ಷಕ್ಕೂ ಹೆಚ್ಚು ಸರಕು ವಾಹನಗಳು ರಸ್ತೆಗೆ ಇಳಿಯದೇ ಇರಲು ನಿರ್ಧರಿಸಿದ್ದು, ಮುಷ್ಕರವು ಅಗತ್ಯ ವಸ್ತುಗಳ ಸಂಚಾರ, ಇಂಧನ ಲಭ್ಯತೆ ಮತ್ತು ವಿಮಾನ ನಿಲ್ದಾಣ ಸಂಪರ್ಕದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನೆ ನಡೆಸುವುದಾಗಿ ತಿಳಿಸಿದ್ದರೂ ಇನ್ನೂ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಲಾಗಿದೆ. ಡೀಸೆಲ್ ಮೇಲಿನ ತೆರಿಗೆಯನ್ನು ಕಡಿಮೆ ಮಾಡುವುದು. ರಾಜ್ಯ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹ ರದ್ದುಪಡಿಸಬೇಕು ಎಂದು ಒತ್ತಾಯಿಸಲಾಗಿದೆ.

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಸೇರಿದಂತೆ ಅವಶ್ಯಕ ವಸ್ತುಗಳ ಬೆಲೆ ಏರಲು ಕಾರಣ ಕೇಂದ್ರ BJP4India ಸರಕಾರ. ಕೇಂದ್ರದ ಬಿಜೆಪಿಯ ತಪ್ಪು ನೀತಿಗಳಿಂದಾಗಿ ಇಡೀ ದೇಶದಲ್ಲಿ ಬೆಲೆ ಏರಿಕೆಯಾಗಿದೆ. BJP4Karnataka ನಾಯಕರಿಗೆ ಜನಾಕ್ರೋಶ ಯಾತ್ರೆ ಮಾಡುವ ಯಾವ ನೈತಿಕತೆಯು ಇಲ್ಲ. ರಾಜ್ಯ ಸರಕಾರ ಹೆಚ್ಚಿಸಿರುವ ಹಾಲಿನ ದರದಿಂದ ರೈತರಿಗೆ ಲಾಭ ಹೋಗುತ್ತದೆ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಕಚ್ಚಾತೈಲದ ಬೆಲೆಯ ಮೇಲೆ ನಿಗದಿಯಾಗುತ್ತದೆ. ಸರಕಾರ ಆರ್ಥಿಕ ದಿವಾಳಿಯಾಗಿದೆ ಎಂಬ ಬಿಜೆಪಿಯವರ ಆರೋಪ ಅವರಿಗೇ ನಾಚಿಕೆಗೇಡಿನದು. ಬಿಜೆಪಿಯವರ ಕಾಲದಲ್ಲಿ ಅನುದಾನವಿಲ್ಲದಿದ್ದರೂ ಕಾಮಗಾರಿಗಳಿಗೆ ಮಂಜೂರಾತಿ ನೀಡಿ, ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದರು. ಈಗ ನಮಗೆ ಪಾಠ ಹೇಳುತ್ತಿದ್ದಾರೆ.

ಬಸವರಾಜ

ಬೆಲೆಯಿಲ್ಲದ ಹೋರಾಟಗಳು ಜನಸಾಮಾನ್ಯರ ಪರದಾಟಗಳು. ಎಲ್ಲವನ್ನೂ ಮರೆಮಾಚಲು ಬಡಿದಾಡುತ್ತಿರುವ ರಾಜಕೀಯ ನಾಟಕಕಾರರು.

ಮರು ಸಮೀಕ್ಷೆ ಒತ್ತಡ ಹೆಚ್ಚಿದ್ದು, ಸರಕಾರದಿಂದ ಪರಿಶೀಲನೆ| ಸುಮ್ಮನೆ ಅನೇಕರಿಂದ ಟೀಕೆ

ಯಾರ ಹಕ್ಕನ್ನು ಕಸಿಯುವ ಉದ್ದೇಶವಿಲ್ಲ: ಮಹದೇವಪ್ಪ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ವರದಿ ಆಧರಿಸಿ ಯಾರ ಹಕ್ಕುಗಳನ್ನೂ ಕಸಿಯುವ ಉದ್ದೇಶ ಸರಕಾರಕ್ಕಿಲ್ಲ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2015ರಲ್ಲಿ ಸುಮಾರು 200 ಕೋಟಿ ರು. ಖರ್ಚು ಮಾಡಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ಸಾಮಾಜಿಕ, ಆರ್ಥಿಕ ಸಮೀಕ್ಷೆ ನಡೆಸಲಾಗಿದೆ. ಅದರಲ್ಲಿ ಜಾತಿಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಮಾಜದ ಬದಲಾವಣೆ ಕುರಿತು ಈ ಸಮೀಕ್ಷೆ ನಡೆಸಿದ್ದು, ಅದನ್ನು ಅನುಷ್ಠಾನಕ್ಕೆ ತರಲು ಸರಕಾರ ಬದ್ಧವಾಗಿದೆ. ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯಲ್ಲಿ ದೇಶದಲ್ಲಿ ಜಾತಿ ಜನಗಣತಿ ಆಗಬೇಕೆಂದು ಹೇಳಿತ್ತು. ಭಾರತದ ಜನಗಣತಿಯಲ್ಲಿ ಜಾತಿ ಮಾಹಿತಿ ಸಂಗ್ರಹಿಸಲು ಪ್ರಯತ್ನಗಳಾಗಿತ್ತು. ಅದನ್ನು ಪಟ್ಟಭದ್ರ ಹಿತಾಸಕ್ತಿಗಳು ಎಂದು ಆರೋಪಿಸಿದ್ದರು.

ಜಯಪ್ರಕಾಶ್ ಹೆಗ್ಡೆ ಅವರ ನೇತೃತ್ವದ ಆಯೋಗದಿಂದ ನೀಡಿರುವ ವರದಿಯಲ್ಲಿ ಒಬಿಸಿ ಮೀಸಲನ್ನು ಹೆಚ್ಚಿಸುವ ಬಗ್ಗೆ ಶಿಫಾರಸು ಮಾಡಿದ್ದಾರೆ. ಮೀಸಲನ್ನು ಪರಿಷ್ಕರಣೆ ಮಾಡಬೇಕು ಎನ್ನುವುದು ವರದಿಯಲ್ಲಿದ್ದರೆ, ಆ ಶಿಫಾರಸನ್ನು ಯಾವ ರೀತಿ ಪರಿಗಣಿಸಬೇಕು ಎನ್ನುವ ಅಧ್ಯಯನ ನಡೆಸಲಾಗುವುದು. ಸದ್ಯದ ಪರಿಸ್ಥಿತಿಯಲ್ಲಿ ಜನಸಂಖ್ಯೆ ಸ್ಫೋಟವಾಗುತ್ತಿದೆ. ಹೀಗಾಗಿ ಎಲ್ಲರಿಗೂ ಅವಕಾಶಗಳು ಸಿಗಬೇಕು. ಆ ನಿಟ್ಟಿನಲ್ಲಿ ವೈಜ್ಞಾನಿಕ ಕ್ರಮದಲ್ಲಿ ಪ್ರಯತ್ನ ನಡೆಸಲಾಗುತ್ತಿದೆ ಎಂದರು.

ಇದೇ 17ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಈ ವರದಿಯ ಕುರಿತು ಸಮಗ್ರ ಚರ್ಚೆ ನಡೆಸಿ ನಿರ್ಧಾರ ತೆಗೆದುಕೊಳ್ಳಲಾಗುವುದು. ಕೆಲ ಸಮುದಾಯಗಳು ವಿರೋಧ ವ್ಯಕ್ತಪಡಿಸುತ್ತಿವೆ. ಮರು ಸಮೀಕ್ಷೆಯ ಆಗ್ರಹ ಮಾಡುತ್ತಿವೆ. ಇದೆಲ್ಲವನ್ನೂ ಸರಕಾರ ಪರಿಶೀಲಿಸಲಿದೆ. ಬಿಜೆಪಿ ಟೀಕೆ ಮಾಡುವುದು ಸಹಜ. ಆ ಪಕ್ಷ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿಲ್ಲ, ಈ ಹಿಂದೆ ಮಂಡಲ ವರದಿ ಜಾರಿಯಾದಾಗ ಕಮಂಡಲ ಹಿಡಿದು ಯಾತ್ರೆ ನಡೆಸಿದರು. ಹೀಗಾಗಿ ಬಿಜೆಪಿ ವರದಿ ಟೀಕೆ ರಾಜಕೀಯ ಪ್ರೇರಿತ.

-ಡಾ.ಎಚ್.ಸಿ. ಮಹದೇವಪ್ಪ, ಸಚಿವ

ಪರಿಶಿಷ್ಟ ಜಾತಿ, ಪಂಗಡಕ್ಕೆ ರಾಜ್ಯಾಂಗ ಬದ್ಧವಾಗಿ ಮೀಸಲು ನೀಡಲಾಗಿದೆ. ಆದರೆ ಪ್ರವರ್ಗಗಳಿಗೆ ಮೀಸಲಾತಿ ನೀಡುವ ಬಗ್ಗೆ ಚರ್ಚೆಯಾಗಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ಜಾತಿ ಜನಗಣತಿಯಾಗಿತ್ತು. ಸ್ವಾತಂತ್ರ್ಯ ಬಂದ ನಂತರ ದೇಶದ ಜನಸಂಖ್ಯೆ 35 ಕೋಟಿ ಇತ್ತು. ಈಗ 140 ಕೋಟಿಯಾಗಿದೆ. ಅದಕ್ಕೆ ಅನುಗುಣವಾಗಿ ಅಸಮಾನತೆಯನ್ನು ತೊಡೆದುಹಾಕಿ ಸಮಸಮಾಜ ನಿರ್ಮಾಣ ಮಾಡಲು ಈ ರೀತಿಯ ಅಧ್ಯಯನ ಅಗತ್ಯವಿತ್ತು ಎಂದರು.

ಒಬಿಸಿ ಸುಧಾರಣೆ ಯೋಜನೆ ಅಗತ್ಯ: ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಿಂದುಳಿದ ಸಮುದಾಯಗಳ ಸುಧಾರಣೆಗಾಗಿ ಅಗತ್ಯ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ. ಹಿಂದುಳಿದ ವರ್ಗಗಳ ವರದಿ ಯಾರ ಪರ ಅಥವಾ ವಿರುದ್ಧವೂ ಇಲ್ಲ. ವೈಜ್ಞಾನಿಕವಾಗಿ ದತ್ತಾಂಶ ಸಂಗ್ರಹಿಸಲಾಗಿದೆ. ಇದು ಅತ್ಯಂತ ಪ್ರಗತಿಪರವಾದ ವರದಿ ಆಯೋಗದ ವರದಿಯಲ್ಲಿ ಹಲವಾರು ಶಿಫಾರಸುಗಳನ್ನು ನೀಡಲಾಗಿದೆ. ಜನಸಂಖ್ಯೆ ಹೆಚ್ಚಳ, ಸ್ಥಿತಿಗತಿಗಳ ಕುರಿತು ಅಧ್ಯಯನ ನಡೆಯಲಿದೆ ಎಂದು ಹೇಳಿದರು.

ಸಂಪತ್ತು ಹಂಚಿಕೆಯಾಗಿದೆಯೇ?

ದೇಶದಲ್ಲಿ ಸಾವಿರಾರು ಜಾತಿಗಳಿವೆ. ಎಲ್ಲರಿಗೂ ಸಂಪತ್ತಿನ ಸಮಾನ ಹಂಚಿಕೆಯಾಗಿದೆಯೇ?, ಸಾರ್ವಜನಿಕ ಜೀವನದಲ್ಲಿರುವವರು ಸಮಸಮಾಜದ ಬಗ್ಗೆ ಯೋಚಿಸಬೇಕೇ ಹೊರತು ಟೀಕೆ ಮಾಡುವುದನ್ನೇ ವೃತ್ತಿ ಮಾಡಿಕೊಳ್ಳಬಾರದು. ಈ ವರದಿಗೂ, ರಾಜಕೀಯಕ್ಕೂ ಸಂಬಂಧ ಇಲ್ಲ. ವಿಜ್ಞಾನವನ್ನೇ ತಿಳಿಯದೆ ಕೆಲವರು ಅವೈಜ್ಞಾನಿಕ ಎಂದು ಟೀಕೆ ಮಾಡುತ್ತಿದ್ದಾರೆ. ಅವರು ಇನ್ನೂ ವರದಿ ನೋಡಿಲ್ಲ. ಹಾಗಿದ್ದರೂ ಹೇಗೆ ಟೀಕೆ ಮಾಡಲು ಸಾಧ್ಯ?, ಈ ವರದಿ ಆಧರಿಸಿ ಯಾರ ಹಕ್ಕುಗಳನ್ನೂ ಕಸಿಯುವುದಿಲ್ಲ, ಮತ್ತಿನ್ಯಾರಿಗೋ ಹಕ್ಕು ನೀಡುವ ಉದ್ದೇಶವೂ ಇಲ್ಲ. ಒಬ್ಬರನ್ನು ಹಿಂದಿಡುವುದು, ಮತ್ತೊಬ್ಬರನ್ನು ಮುಂದೆ ತರುವ ಆಲೋಚನೆಗಳೂ ಇಲ್ಲ, ತುಂಬಿ ತುಳುಕುತ್ತಿದ್ದರೆ ಮಾತ್ರ ಅವರಿಂದ ಕಿತ್ತು ಇಲ್ಲದವರಿಗೆ ಸೌಲಭ್ಯ ಕೊಡಬಹುದು. ಸದ್ಯಕ್ಕೆ ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರು.

ಜಾತಿ ಮೀಸಲಿನ ಬಗ್ಗೆ ಆತುರದ ತೀರ್ಮಾನವಿಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಜಾತಿಗಣತಿ ವಿಚಾರ ವಿವಾದದ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ರಾಜ್ಯ ಸರಕಾರ, ಈ ಬಗ್ಗೆ ಯಾವುದೇ ಆತುರದ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಜಯಪ್ರಕಾಶ್ ಹೆಗ್ಡೆ ಆಯೋಗ ನೀಡಿರುವ ಜಾತಿ ಗಣತಿ ವರದಿಯ ಅಂಶಗಳು ಸೋರಿಕೆ ಯಾಗಿದ್ದು, ಅದರಲ್ಲಿ ವೀರಶೈವ ಹಾಗೂ ಪಂಚಮಸಾಲಿಗಳ ಅಂಕಿ-ಅಂಶ ಏರಿಳಿತವಾಗಿದ್ದು, ಈ ಬಗ್ಗೆ ವೀರಶೈವ ಲಿಂಗಾಯತ ಮಹಾಸಭಾ ಈ ಜಾತಿ ಗಣತಿ ವರದಿಗೆ ವಿರೋಧ ವ್ಯಕ್ತಪಡಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಡಿಸಿಎಂ ಡಿ.ಕೆ ಶಿವಕುಮಾರ್, ಜಾತಿ ಗಣತಿ ವಿಚಾರದ ಬಗ್ಗೆ ಮುಖ್ಯಮಂತ್ರಿಗಳು ಹೇಳಿಕೆ ನೀಡಿದ್ದಾರೆ. ನಾನು ಆ ವರದಿ ನೋಡಿಲ್ಲ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಯಾಗಬೇಕು. ಹೀಗಾಗಿ ಯಾವುದೇ ಕಾರಣಕ್ಕೂ ಜಾತಿ ಗಣತಿ ವಿಚಾರದಲ್ಲಿ ದುಡುಕಿನ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ಕೆಲವರು ಈ ವಿಚಾರದಲ್ಲಿ ರಾಜಕೀಯ ಹೇಳಿಕೆ ನೀಡುತ್ತಿದ್ದಾರೆ. ಸತ್ಯಾಸತ್ಯತೆ ಏನು ಎಂಬುದನ್ನು ತಿಳಿದುಕೊಂಡು ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು.

ಜಾತಿಗಣತಿ ವರದಿಯಲ್ಲಿ ಲಿಂಗಾಯತರ ಜನಸಂಖ್ಯೆಯನ್ನು 66 ಲಕ್ಷ ತೋರಿಸಲಾಗಿದೆ. ಆದರೆ ಇದು ಆಧಾರರಹಿತ. ಹಲವು ಉಪಜಾತಿಗಳು ಲಿಂಗಾಯತರು ಎಂದು ಗುರುತಿಸಿಕೊಂಡರೆ ಈ ಜನಸಂಖ್ಯೆ 3 ಕೋಟಿಗೆ ದಾಟುತ್ತದೆ. ಲಿಂಗಾಯತ ಸಮುದಾಯ ಆರ್ಥಿಕವಾಗಿ ದಾರುಣ ಸ್ಥಿತಿಯಲ್ಲಿದೆ ಎಂದಿರುವ ಅವರು, ಜಾತಿಗಣತಿ ವರದಿಯಲ್ಲಿ ಲಿಂಗಾಯತರ ಜನಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ.

- ಶಂಕರ್ ಬಿದರಿ, ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ

ವೀರಶೈವ ಮಹಾಸಭಾದವರು ಅವರ ಸಮಾಜ ರಕ್ಷಣೆ ಮಾಡಿಕೊಳ್ಳಲು ಹೊರಟಿದ್ದು, ಅವರನ್ನು ನಾವು ಏಕೆ ಟೀಕೆ ಮಾಡಬೇಕು. ಪ್ರಜಾಪ್ರಭುತ್ವ, ಸಂವಿಧಾನದ ಪ್ರಕಾರವಾಗಿ ಅವರುಗಳು ತಮ್ಮ ನಿಲುವುಗಳನ್ನು ಪ್ರತಿಪಾದನೆ ಮಾಡಲಿ. ಚುನಾವಣೆ ಪೂರ್ವದಲ್ಲಿ ಒಕ್ಕಲಿಗ ಸಮುದಾಯ ಬೆನ್ನಿಗೆ ನಿಲ್ಲಬೇಕು ಎಂದು ಈ ಹಿಂದೆ ನೀಡಿದ್ದ ಹೇಳಿಕೆ ಬಗ್ಗೆ ಕೇಳಿದಾಗ, ಅದು ಬೇರೆ ವಿಚಾರ. ಈಗ ನಾನು ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿದ್ದೇನೆ. ಎಲ್ಲರಿಗೂ ನ್ಯಾಯ ಕೊಡಿಸುವುದು ನಮ್ಮ ಕರ್ತವ್ಯ, ಧ್ವನಿ, ಧ್ಯೇಯ, ಉದ್ದೇಶ, ಸಂಕಲ್ಪ ಎಲ್ಲವೂ ಸಹ ಎಂದರು.

ಸಮಾಚಾರ ಸಣ್ಣದಲ್ಲ

ಪ್ರಚೋದನಕಾರಿ ಹೇಳಿಕೆ: ಬಂಧನ

ದಾವಣಗೆರೆ: ವಕ್ಫ್ ಮಸೂದೆ ವಿರೋಧಿಸಿ ಪ್ರಚೋದನಕಾರಿ ಭಾಷಣ ಮಾಡಿದ್ದ ಆರೋಪದ ಮೇಲೆ

ಕಬೀರ್ ಖಾನ್ ಎಂಬವರನ್ನು ದಾವಣಗೆರೆ ಪೊಲೀಸರು ಬಂಧಿಸಿದ್ದಾರೆ. ಕೇಂದ್ರ ಸರಕಾರ ವಕ್ಫ್ ಮಸೂದೆ ಮಂಡನೆ ಮಾಡಿದ ಬೆನ್ನಲ್ಲೇ ಕಬೀರ್ ಖಾನ್ ನೀಡಿದ್ದ ಪ್ರಚೋದ ನಕಾರಿ ಹೇಳಿಕೆಯ ವಿಡಿಯೋ ವೈರಲ್ ಆಗಿತ್ತು. ಆಜಾದ್ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆ ಬಳಿಕ ಪ್ರಕಣದ ಪ್ರಮುಖ ಆರೋಪಿ ಕಾಂಗ್ರೆಸ್ ಮಾಜಿ ಕಾರ್ಪೋರೇಟರ್ ಕಬೀರ್ ಖಾನ್ ನಾಪತ್ತೆಯಾಗಿದ್ದರು. ದಾವಣಗೆರೆ ಪೊಲೀಸರು ಹುಡುಕಾಟ ಆರಂಭಿಸಿದ್ದರು. ಕಳೆದ ಎರಡು ದಿನಗಳ ಹಿಂದೆ ಇದೇ ಪ್ರಕರಣದಲ್ಲಿ ಸಹಕರಿಸಿದ ಆರೋಪಿಗಳಾದ ಅಬ್ದುಲ್ ಗನಿ (56) ಹಾಗೂ ಮೊಹಮ್ಮದ್ ಜುಬೇರ್ (40) ಅವರನ್ನು ಬಂಧಿಸಲಾಗಿತ್ತು. ಇದೀಗ ರಾಜಸ್ಥಾನದ ಅಜ್ಮೇರ್‌ನಲ್ಲಿ ಕಬೀರ್ ಖಾನ್ ಅವರನ್ನು ಬಂಧಿಸಿ ದಾವಣ ಗೆರೆ ಕರೆತಂದಿದ್ದಾರೆ. ದಾವಣಗೆರೆ ನಗರ ಡಿವೈಎಸ್ಪಿ ಶರಣಬಸವೇಶ್ವರ ಹಾಗೂ ಇನ್ಸ್‌ಪೆಕ್ಟರ್ ಅಶ್ವಿನ್ ಕುಮಾರ್ ನೇತೃತ್ವದ ತಂಡ ಆರೋಪಿಯನ್ನು ಬಂಧಿಸಿದೆ.

ದುಷ್ಕರ್ಮಿಗಳಿಂದ ತಾಯಿ, ಮಗನ ಕೊಲೆ

ಅಥಣಿ: ತಾಲೂಕಿನ ಐಗಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕೊಡಗಾನೂರು ಗ್ರಾಮದಲ್ಲಿ ಶನಿವಾರ ರಾತ್ರಿ ವೇಳೆ ದುಷ್ಕರ್ಮಿಗಳು ಮನೆಗೆ ನುಗ್ಗಿ ತಾಯಿ ಮತ್ತು ಮಗನನ್ನ ಕೊಚ್ಚಿ ಕೊಲೆಗೈದು ಪರಾರಿಯಾಗಿರುವ ಘಟನೆ ಸಾರ್ವಜನಿಕರನ್ನು ಬೆಚ್ಚಿಬೀಳಿಸಿದೆ.

ದುಷ್ಕರ್ಮಿಗಳಿಂದ ಕೊಲೆಯಾಗಿರುವ ಚಂದ್ರವ್ವ ಇಚಾರೆ (65), ಮತ್ತು ವಿಠ್ಠಲ ಇಚಾರೆ (42) ಎಂದು ಗುರುತಿಸಲಾಗಿದ್ದು, ಇವರಿಬ್ಬರೂ ತಾಯಿ ಮಗ ಸಂಬಂಧಿಕರಾಗಿದ್ದು, ಸಾವಿಗೆ ನಿಖರವಾದ ಕಾರಣ ಇನ್ನು ತಿಳಿದು ಬಂದಿಲ್ಲ. ಮೃತಪಟ್ಟವರ ಸಂಬಂಧಿಕರು ಐಗಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಬಲ್ಲ ಮೂಲಗಳ ಪ್ರಕಾರ ಕೆಲವು ತಿಂಗಳ ಹಿಂದೆ ರಸ್ತೆ ಅಪಘಾತದಲ್ಲಿ ಚಂದ್ರವ್ವ ಇಚಾರೆ ಅವರು ಗಾಯಗೊಂಡಿದ್ದರು. ಆ ಸಂದರ್ಭದಲ್ಲಿ ಅಪಘಾತ ಮಾಡಿದ ವಾಹನ ಮಾಲೀಕರು ವೈದ್ಯಕೀಯ ವೆಚ್ಚಕ್ಕಾಗಿ ಮತ್ತು ಪರಿಹಾರಧನ ನೀಡುವುದಾಗಿ ವಕೀಲರ ಮಧ್ಯ ಸ್ಥಿತಿಯಲ್ಲಿ ಒಪ್ಪಿಕೊಂಡಿದ್ದರು. ಆ ಪರಿಹಾರ ಹಣ ನೀಡುವ ದಿನ ಸಮೀಪಿಸುತ್ತಿದ್ದಂತೆ ಈ ದುರ್ಘಟನೆ ನಡೆಯುವುದು ಸಂದೇಹಕ್ಕೆ ಎಡೆ ಮಾಡಿದೆ. ಇದಲ್ಲದಕ್ಕೂ ಪೊಲೀಸ್ ತನಿಖೆಯಿಂದ ನಿಖರವಾದ ಕಾರಣ ತಿಳಿದು ಬರಬೇಕು. ಐಗಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದುಷ್ಕರ್ಮಿಗಳ ಪತ್ತೆಗಾಗಿ ಪೊಲೀಸ್ ಅಧಿಕಾರಿಗಳು ವಿಶೇಷ ತಂಡಗಳನ್ನು ರಚಿಸಿ ಬಂಧನಕ್ಕೆ ಜಾಲ ಬೀಸಿದ್ದಾರೆ.

ಹೃದಯಾಘಾತದಿಂದ ಪೇದೆ ಸಾವು

ಬೆಳಗಾವಿ: ಕ್ಯಾಂಪ್ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಮಲ್ಲಸರ್ಜ ಅಂಕಲಗಿ (45) ಭಾನುವಾರ ಹೃದಯಾಘಾತದಿಂದ ನಿಧನರಾಗಿ

ದ್ದಾರೆ. ಕರ್ತವ್ಯ ಮುಗಿಸಿ ಕೊಂಡು ಶನಿವಾರ ರಾತ್ರಿ ಊಟ ಮಾಡಿ ಮಲಗಿದ್ದಾರೆ. ಬೆಳಗ್ಗೆ ತಡವಾದರೂ ಏಳದ ಅವರನ್ನು ಮನೆಯವರು ಎಬ್ಬಿಸಲು ಹೋದಾಗ ವಿಷಯ ಗೊತ್ತಾಗಿದೆ.ಕ್ಯಾಂಪ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರು ಎಲ್ಲ ಸಿಬ್ಬಂದಿಗಳಿಗೆ ಅಚ್ಚು ಮೆಚ್ಚಾಗಿದ್ದರು. ಅವರ ಅಕಾಲಿಕ ನಿಧನಕ್ಕೆ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಸೇರಿದಂತೆ ಹಿರಿಯ ಅಧಿಕಾರಿಗಳು ಶೋಕ ವ್ಯಕ್ತಪಡಿಸಿದ್ದಾರೆ.

ಜಾತಿ ಜನಗಣತಿ ವರದಿ ಸಂಪುಟದಲ್ಲಿ ತೀರ್ಮಾನ

ಕಲಬುರಗಿ: ಜಾತಿ ಜನಗಣತಿ ವರದಿ ಈಗಾಗಲೇ ಸಚಿವ ಸಂಪುಟಕ್ಕೆ ಸಲ್ಲಿಕೆಯಾಗಿದೆ. ಅಧಿಕಾರಿಗಳು ಮಾತ್ರ ಅದರ ಸಾರಾಂಶ ಓದಿದ್ದಾರೆ. ಇನ್ನೂ ಪೂರ್ಣ ವರದಿ ಯಾರು ಓದಿಲ್ಲ. ವರದಿ ಚರ್ಚೆ ಮಾಡಲು ಎಲ್ಲಾ ಸಚಿವರಿಗೆ ಓದಲು ಪ್ರತಿ ತಲುಪಿಸಲಾಗಿದೆವರು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಜಾತಿ ಜನಗಣತಿ ವರದಿ ಇನ್ನೂ ನಾನು ಓದಿಲ್ಲ. ವರದಿಯಲ್ಲಿ ಏನಿದೆ ಎಂಬುದು ನನಗೆ ಗೊತ್ತಿಲ್ಲ, ವರದಿ ನನಗೆ ತಲುಪಿದ ಮೇಲೆ ಅದನ್ನು ಓದಿ ಪ್ರತಿಕ್ರಿಯೆ ನೀಡುತ್ತೇನೆ. ವರದಿ ನೋಡದೆ ಊಹಾಪೋಹಾ ಮಾತುಗಳಿಗೆ ಪ್ರತಿಕ್ರಿಯೆ ನೀಡುವುದು ಸರಿಯಲ್ಲ. ಮಾಧ್ಯಮಗಳಲ್ಲಿ ವರದಿ ಸೋರಿಕೆಯಾಗಿರುವುದು ವರದಿ ಓದಿದ ಮೇಲೆ ಸತ್ಯಾಸತ್ಯತೆ ತಿಳಿಯಲಿದೆ ಎಂದರು. ಏ.17 ರಂದು 4 ಗಂಟೆಗೆ ಸಚಿವ ಸಂಪುಟ ಸಭೆ ಕರೆದಿದ್ದು, ಚರ್ಚೆ ನಡೆಯಲಿದೆ ಎಂದು ಹೇಳಿದರು.

ಜಾತಿ ಜನಗಣತಿ ವರದಿ ಬಗ್ಗೆ ಸುಮ್ಮನೆ ಹೇಳುವುದು ಸರಿಯಲ್ಲ. ಬಿಜೆಪಿ ಅವರಿಗೆ ಕೆಲಸವಿಲ್ಲ. ಅದಕ್ಕೆ ಸುಮ್ಮನೆ ಸುಳ್ಳು ಹೇಳುತ್ತಿದ್ದಾರೆ. ಬಿಜೆಪಿಯವರು ಅಧಿಕಾರದಲ್ಲಿದ್ದಾಗ ವರದಿ ತಿರಸ್ಕಾರ ಮಾಡಬಹುದಿತ್ತಲ್ಲ. ಅವರೇಕೆ ಮಾಡಿಲ್ಲ. ಮಠಾಧೀಶರು ವರದಿ ಬಗ್ಗೆ ಹೇಳಿಕೆ ನೀಡುವುದರಿಂದ ಏನಾಗುವುದಿಲ್ಲ. ಮಠಾಧೀಶರಿಂದ ಸರಕಾರ ನಡೆಯುವುದಿಲ್ಲ. ಸಚಿವ ಸಂಪುಟ ಸಭೆಯಲ್ಲಿ ವರದಿಯನ್ನು ಅನುಮೋದನೆ, ತಿದ್ದುಪಡಿ ಅಥವಾ ಮರು ಗಣತಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳತ್ತದೆ.

- ಶರಣಬಸಪ್ಪ ದರ್ಶನಾಪುರ, ಸಣ್ಣ ಕೈಗಾರಿಕೆ ಸಚಿವ

ಅಭಿವೃದ್ಧಿ ಸಹಿಸದ ಬಿಜೆಪಿಗರಿಂದ ವಿರೋಧ

ಬಡವರ ಅನುಕೂಲಕ್ಕೆ ಜಾತಿ ಗಣತಿ ಸಮೀಕ್ಷೆ: ತಂಗಡಗಿ

ಕೊಪ್ಪಳ: ಇದು ಜಾತಿ ಗಣತಿ ಅಲ್ಲ. ಎಲ್ಲ ಜಾತಿಯಲ್ಲಿನ ಬಡವರಿಗೆ ಅನುಕೂಲಕ್ಕಾಗಿ ಮಾಡಿರುವ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಎಂದು ಹಿಂದುಳಿದ ವರ್ಗಗಳ ಕಲ್ಯಾ ಣ ಸಚಿವ ಶಿವರಾಜ ತಂಗಡಗಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಎಲ್ಲ ಜಾತಿಯಲ್ಲೂ ಬಡವರು ಇದ್ದಾರೆ. ಎಲ್ಲ ಜಾತಿಯಲ್ಲಿನ ಬಡವರಿಗೆ ಯೋಜನೆ ರೂಪಿಸಲು ಗಣತಿ ಮಾಡಲಾಗಿದೆ. ವರದಿ ವಿಚಾರವಾಗಿ ಸಮಗ್ರವಾಗಿ ಚರ್ಚೆ ಮಾಡಲು ಸಿಎಂ ಏ.17 ರಂದು ವಿಶೇಷ ಸಂಪುಟ ಸಭೆ ಕರೆದಿದ್ದಾರೆ. ಎಲ್ಲ ಮಂತ್ರಿಗಳಿಗೂ ವರದಿಯ ಪ್ರತಿಯನ್ನು ಕಳುಹಿಸುತ್ತೇವೆ. ಎಲ್ಲರೂ ಸರಿಯಾಗಿ ಓದಿಕೊಳ್ಳಬೇಕಿದೆ. ಇದರಿಂದ ಸಭೆಯಲ್ಲಿ ಇದರ ಬಗ್ಗೆ ಚರ್ಚಿಸಲು ಅನುಕೂಲ ಆಗಲಿದೆ ಎಂದರು. ಒಟ್ಟು 1.66 ಲಕ್ಷ ನೌಕರರು ಸಮೀಕ್ಷೆಯಲ್ಲಿ ಭಾಗಿಯಾಗಿ ಕೆಲಸ ಮಾಡಿ ದ್ದಾರೆ. ಎಲ್ಲರೂ ಯಾವುದಾದರೂ ಒಂದೇ ಜಾತಿಯವರು ಮಾಡಿರುವ ಸಮೀಕ್ಷೆ ಇದಲ್ಲ. ಮನೆ-ಮನೆಗೆ ಹೋಗಿ, ಅವರ ಪ್ರತಿ ಕುಟುಂಬದ ಸಾಮಾ ಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿ-ಗತಿ ಬಗ್ಗೆ ಮಾಹಿತಿ ಪಡೆದು, ಕುಟುಂಬದ ಸಹಿ ಪಡೆಯಲಾಗಿದೆ ಎಂದರು.

ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ವರದಿಯನ್ನು ಡಿಕೆಶಿ ವಿರೋಧ ಮಾಡಿಲ್ಲ. ಸ್ವತಃ ನಾನೇ ವರದಿ ಪಡೆದುಕೊಂಡಿದ್ದೇನೆ. ಡಿಕೆಶಿ ಅವರೂ ಕ್ಯಾಬಿನೆಟ್ ನಲ್ಲಿ ಇದ್ದೆ ಎಲ್ಲೆನೂ ವಿರೋಧ ಮಾಡಿಲ್ಲ. ಬಡವರಿಗೆ 2 ಕೊಟ್ಟರೂ ವಿರೋಧ ಮಾಡುವ, ಬಡವರ ಆರ್ಥಿಕ ಅಭಿವೃದ್ಧಿ ಸಹಿಸದ ಬಿಜೆಪಿಗರು ಮಾತ್ರ ಈ ಸಮೀಕ್ಷೆಯನ್ನು ವಿರೋಧ ಮಾಡುತ್ತಾರೆ.

- ಶಿವರಾಜ ತಂಗಡಗಿ, ಸಚಿವ

ಒಡೆದು ಆಳುವ ನೀತಿಗೆ ನಮ್ಮ ಬೆಂಬಲವಿಲ್ಲ

ಜಾತಿ ಗಣತಿ ಮಾಡುವ ಅಧಿಕಾರ ಕೇಂದ್ರಕ್ಕೆ ಮಾತ್ರ ಇರೋದು: ರವಿ

ಚಿಕ್ಕಮಗಳೂರು: ಜಾತಿ ಜನಗಣತಿ, ಜನಗಣತಿ ಮಾಡುವ ಅಧಿಕಾರ ಸಂವಿಧಾನಬದ್ಧವಾಗಿ ಕೇಂದ್ರಕ್ಕೆ ಮಾತ್ರ ಇರೋದು. ಇವರು ಸಾಮಾಜಿಕ-ಆರ್ಥಿಕ ಸಮೀಕ್ಷೆ ಎಂದು ಹೇಳಿದ್ದಾರೆ. ಅಧಿಕೃತವಾಗಿ ಬಿಡುಗಡೆಯಾಗಿಲ್ಲ, ಈಗಲೇ ಸತ್ಯ-ಸುಳ್ಳು ಪ್ರತಿಕ್ರಿಯೆ ಕಷ್ಟ. ಅನಧಿಕೃತವಾಗಿ ಸೋರಿಕೆಯಾಗಿರೋದನ್ನು ಸತ್ಯ ಎಂದು ಭಾವಿಸಿದರೆ ಚರ್ಚೆ ಹುಟ್ಟುಹಾಕುತ್ತೆ ಅಷ್ಟೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಜಾತಿ ಜನಗಣತಿ ವರದಿ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಅಲ್ಪ ಸಂಖ್ಯಾತರು ಯಾರು? ರಾಜ್ಯದ ಜನಸಂಖ್ಯೆಯಲ್ಲಿ 2ನೇ ದೊಡ್ಡ ಸಂಖ್ಯೆಯಲ್ಲಿರೋರು ಅಲ್ಪ ಸಂಖ್ಯಾತರಾಗುತ್ತಾರಾ? ಮೀಸಲಾತಿ ಸಂಬಂಧ ಕೋರ್ಟ್‌ನಲ್ಲಿ ಮೊಕದ್ದಮೆ ಇದ್ದಾಗ ಕೇಂದ್ರ ಮೀಸಲಾತಿ ಪರ ಪ್ರಮಾಣಪತ್ರ ಸಲ್ಲಿಸ್ತು, ಬಡ್ತಿ ಮೀಸಲಾತಿ ಪರ ಪ್ರಮಾಣಪತ್ರ ಸಲ್ಲಿಸ್ತು. ಇದು ಮೀಸಲಾತಿ ಬಗ್ಗೆ ಬಿಜೆಪಿಗೆ ಇರುವ ಬದ್ಧತೆ ಎಂದು ತಮ್ಮ ಪಕ್ಷ ಹಾಗೂ ಕೇಂದ್ರ ಸರಕಾರವನ್ನು ಸಮರ್ಥಿಸಿಕೊಂಡರು.

ವಕ್ಫ್ ಕಾಯ್ದೆ ವಿರುದ್ಧ ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ಹಿಂದೆ ಸಿಎಎ ವಿರುದ್ಧವೂ ಕಾಂಗ್ರೆಸ್ ಹೀಗೆಯೇ ಅಪಪ್ರಚಾರ ಮಾಡಿತ್ತು. ಕಾಂಗ್ರೆಸ್ ನಿಲುವು ರಾಷ್ಟ್ರಘಾತುಕ ನಿಲುವು, ಈಗ ವಕ್ಫ್ ಬಿಲ್‌ನಲ್ಲೂ ಅಪಪ್ರಚಾರ ಮಾಡ್ತಿದ್ದಾರೆ. ನ್ಯಾಯಬದ್ಧವಾಗಿರುವ ಜಮೀನನ್ನು ಯಾರೂ ಕಿತ್ತುಕೊಳ್ಳಲ್ಲ. ಅಕ್ರಮವಾಗಿರೋದನ್ನು ಬಿಡ್ಲೇಬೇಕು. ರೈತರ ಜಮೀನು, ಸಾವಿರಾರು ವರ್ಷಗಳ ದೇವಸ್ಥಾನದ ಜಮೀನುಗಳನ್ನು ನಮ್ಮದು ಅಂತಾರೆ, ಬಿಡ್ಲೇಬೇಕು. ವಿಧಾನಸೌಧ, ಸುಪ್ರೀಂ ಕೋರ್ಟ್, ಹೈಕೋರ್ಟ್, ಪಾರ್ಲಿಮೆಂಟ್ ನಮ್ದು ಅಂತ ಹೇಳೋಕೆ ಅವಕಾಶ ಕೊಡಬೇಕಾ?.

- ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ಸರಕಾರದ ಮೂಗಿನ ನೇರಕ್ಕೆ ಜಾತಿ ಗಣತಿ ವರದಿ ತಯಾರಾಗಿದೆ

ಮರು ಜಾತಿಗಣತಿ ಮಾಡುವಂತೆ ಒತ್ತಾಯ

ಚಿಕ್ಕಮಗಳೂರು: ಸರಕಾರ ಯಾವುದೋ ಒಂದು ಜಾತಿಯನ್ನು ತುಷ್ಟೀಕರಣ ಮಾಡಲು ಜಾತಿ ಗಣತಿ ವರದಿ ತಯಾರಿಸಿದೆ. ಹತ್ತಾರು ವರ್ಷಗಳಿಂದ ಜಾತಿ ಗಣತಿ ವರದಿ ನನೆಗುದಿಗೆ ಬಿದ್ದಿತ್ತು. ಜಾತಿ ಗಣತಿಗೆ ಅಖಿಲ ಭಾರತ ವೀರಶೈವ ಮಹಾಸಭಾ ಸಂಘ ವಿರೋಧಿಸಿದೆ. ಜಾತಿ ಗಣತಿ ವರದಿಯನ್ನು ಪಾರದರ್ಶಕವಾಗಿ ಮಾಡಿಲ್ಲ ಎಂದು ಬಾಳೆಹೊನ್ನೂರಿನ ರಂಭಾಪುರಿ ಪೀಠದ ವೀರಸೋ ಮೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸರಕಾರದ ಮೂಗಿನ ನೇರಕ್ಕೆ ಜಾತಿ ಗಣತಿ ವರದಿ ತಯಾರಾಗಿದೆ. ಜಾತಿ ಗಣತಿ ವರದಿ ಪುನರ್‌ವಿಮರ್ಶೆ ಆಗಬೇಕು. ಜನರ ಭಾವನೆಯನ್ನು ಅರಿತು ಪಾರದರ್ಶಕತೆಯಿಂದ, ಮನೆ ಮನೆಗೆ ಭೇಟಿ ಕೊಟ್ಟು ಅಧಿಕಾರಿಗಳು ವರದಿ ತಯಾರಿಸಬೇಕು ಎಂದು ಆಗ್ರಹಿಸಿದರು. ಈ ಜಾತಿ ಗಣತಿ ವರದಿಯನ್ನು ಸಾರಾಸಗಟಾಗಿ ಬಹಿಷ್ಕರಿಸಿ, ತಿರಸ್ಕಾರ ಮಾಡುತ್ತಿದ್ದೇವೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಕೆಲವೊಂದು ಜಾತಿಗೆ ಮೀಸಲು ನೀಡಬೇಕೆನ್ನುವುದು ಸರಕಾರಕ್ಕೆ ಇದೆ. ಆದರೆ ಸಂವಿಧಾನದ ಆಶಯದಂತೆ ಜಾತಿಗಣತಿ ವರದಿ ವಿಚಾರದಲ್ಲಿ ಹೆಜ್ಜೆ ಇಡಬೇಕು. ಸಂವಿಧಾನದಲ್ಲಿ ಯಾವ ಜಾತಿಗೆ ಎಷ್ಟು ಮೀಸಲಾತಿ ನೀಡಬೇಕೆನ್ನುವುದನ್ನು ಉಲ್ಲೇಖವಿದೆ ಎಂದರು.

ಜಾತಿ ಗಣತಿ ವರದಿಯನ್ನು ತಯಾರು ಮಾಡುವ ಅಧಿಕಾರ ರಾಜ್ಯ ಸರಕಾರಕ್ಕೆ ಇಲ್ಲ. ಕೇಂದ್ರ ಸರಕಾರಕ್ಕೆ ಮಾತ್ರ ಈ ಅಧಿಕಾರ ಇದೆ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ಸರಿಯಾದ ಮಾಹಿತಿ, ಕೆಲವೊಂದು ಸೂಚನೆಗಳನ್ನು ನೀಡಬೇಕು.

-ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ, ರಂಭಾಪುರಿ ಪೀಠ

- ಒಂದು ಜಾತಿಯನ್ನು ತುಷ್ಟೀಕರಣ ಮಾಡಲು ಜಾತಿ ಗಣತಿ ವರದಿ ತಯಾರಿಸಿದೆ.
- ಜಾತಿ ಗಣತಿಗೆ ಅಖಿಲ ಭಾರತ ವೀರಶೈವ ಮಹಾಸಭಾ ಸಂಘ ವಿರೋಧವಿದೆ.

ಜಾತಿಗಣತಿ ವರದಿಯ ಬಗ್ಗೆ ಏ.17ರಂದು ವಿಶೇಷ ಸಭೆ : ಎಂಬಿಪಾ

ಲಿಂಗಾಯತ ಜನಸಂಖ್ಯೆ 1ಕೋಟಿಗೂ ಅಧಿಕವಿದೆ

ವಿಜಯಪುರ: 2ಎ ಮೀಸಲಿಗಾಗಿ ಹಿಂದೂ ಸಾದರ, ಹಿಂದೂ ಗಾಣಿಗ, ಹಿಂದೂ ಬಣಜಿಗ ಎಂದು ನಮೂದು ಮಾಡಲಾಗಿದೆ. ಲಿಂಗಾಯತ ಸಮಾಜದಲ್ಲಿ ಇವೆಲ್ಲ ಸಮುದಾಯ

ಬಂದಿಲ್ಲ, ಇವೆಲ್ಲ ಸಮುದಾಯಗಳು ಒಳಗೊಂಡರೆ ಲಿಂಗಾಯತ ಸಮಾಜದ ಸಂಖ್ಯೆ ಒಂದು ಕೋಟಿಗೂ ಅಧಿಕ ಸಂಖ್ಯೆಯಾಗುತ್ತದೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ವರದಿ ಕಾಪಿ ತರಿಸಿಕೊಂಡಿದ್ದೇನೆ. ವರದಿ ನೋಡಿ ಓದಿ ಮಾತನಾಡುವೆ. ಜಾತಿಗಣತಿ ವರದಿಯ ವಿಚಾರವಾಗಿಯೇ ಏಪ್ರಿಲ್ 17ರಂದು ವಿಶೇಷ ಸಭೆ ನಡೆಯಲಿದೆ. ಸಚಿವ ಸಂಪುಟ ಸಭೆಯಲ್ಲಿ ಜಾತಿಗಣತಿ ವಿಚಾರವೊಂದೇ ಚರ್ಚೆಯಾಗಲಿದೆ. ಸಭೆಯಲ್ಲಿ ನಮ್ಮ ಅಭಿಪ್ರಾಯಗಳನ್ನು ಹೇಳುತ್ತೇವೆ ಎಂದರು.

ಜಾತಿಗಣತಿ ಸರಿಯಾಗಿಲ್ಲ ಮತ್ತೊಮ್ಮೆ ಜಾತಿ ಗಣತಿ ಮಾಡಬೇಕೆಂದು ವಿವಿಧ ಸ್ವಾಮೀಜಿಗಳ ಬೇಡಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಅದು ಅವರವರ ಅಭಿಪ್ರಾಯಕ್ಕೆ ಬಿಟ್ಟದ್ದು, ಕ್ಯಾಬಿನೆಟ್ ನಲ್ಲಿ ಈ ಕುರಿತು ಚರ್ಚೆ ಮಾಡಿ ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಆದರೆ ನಮ್ಮ ಲಿಂಗಾಯತ ಸಮಾಜದ ಜನಸಂಖ್ಯೆ ಒಂದು ಕೋಟಿಯನ್ನು ದಾಟುತ್ತದೆ. ಇದೆಲ್ಲದರ ಕುರಿತು ಚರ್ಚೆ ಮಾಡುತ್ತೇವೆ. ಒಂದೇ ಹೆಡ್ ನಲ್ಲಿ ತರುವ ಕೆಲಸ ಆಗಬೇಕು. ಅದು ಕಷ್ಟವಿದೆ. 2 ಎ ದಲ್ಲಿದ್ದ ಸಮಾಜಗಳು ಒಪ್ಪಲಿಕ್ಕಿಲ್ಲ. ಇದೆಲ್ಲವನ್ನ ಬಗೆಹರಿಸಬೇಕಿದೆ. ಈ ವಿಚಾರದಲ್ಲಿ ನಾವು ಯಾವುದೇ ಸಂಘರ್ಷಕ್ಕೆ ಇಳಿಯಲ್ಲ. ಎಲ್ಲರೂ ಸೇರಿ ಸಮಸ್ಯೆ ಪರಿಹಾರ ಮಾಡುತ್ತೇವೆ. ಲಿಂಗಾಯತರ ಜನಸಂಖ್ಯೆ 75 ಲಕ್ಷ ಅಲ್ಲ ಒಂದು ಕೋಟಿಗೂ ಅಧಿಕ ಇದೆ ಎಂದು ಸಚಿವ ಎಂ ಬಿ ಪಾಟೀಲ್ ಹೇಳಿದರು.

ಯತ್ನಾಳಗೆ ಭದ್ರತೆ ನೀಡುತ್ತೇವೆ

ಶಾಸಕ ಬಸನಗೌಡ ಪಾಟೀಲ ಯತ್ನಾಳರಿಗೆ ಜೀವ ಬೆದರಿಕೆ ವಿಚಾರವಾಗಿ ಮಾತನಾಡಿದ ಅವರು, ಧರ್ಮದ ಬಗ್ಗೆ ಯತ್ನಾಳ್ ಮಾತನಾಡಿದ್ದು ತಪ್ಪು, ಯತ್ನಾಳ್ ಗೆ ಜೀವ ಬೆದರಿಕೆ ಹಾಕಿದ್ದು ತಪ್ಪು. ಯತ್ನಾಳ್ ಗೆ ಭದ್ರತೆ ನೀಡಲಾಗುವುದು. ಯತ್ನಾಳ್ ಗೆ ಬಾಯಿಯಿದೆ ಎಂದು ಧರ್ಮದ ಬಗ್ಗೆ, ದೇವರ ಬಗ್ಗೆ ಮಾತನಾಡಬಾರದು. ಎಲ್ಲವನ್ನು ಮೈಮೇಲೆ ಎಳೆದುಕೊಂಡಿದ್ದಾರೆ. ಮುಸ್ಲಿಂಮರಿಗೂ ಯತ್ನಾಳ್ ಬಗ್ಗೆ ಮಾತನಾಡಲು ಬರುತ್ತೆ. ಜೀವ ಬೆದರಿಕೆ ಆಡಿಯೋ, ವಿಡಿಯೊ ಬಗ್ಗೆ ಪೊಲೀಸರು ತನಿಖೆ ಮಾಡುತ್ತಾರೆ. ಯತ್ನಾಳಗೆ ಭದ್ರತೆ ನೀಡುತ್ತೇವೆ ಎಂದರು.

ಹಿಂದಿನಿಂದಲೂ ಕಾಂಗ್ರೆಸ್ ಅಂಬೇಡ್ಕರ್ ದ್ವೇಷಿ

ಹುಬ್ಬಳ್ಳಿ: ರಾಜ್ಯ ಸರಕಾರವು ಕಾಂಗ್ರೆಸ್ ನ ಕೇಂದ್ರ ಹೈಕಮಾಂಡ್ ಅಣತಿಯಂತೆ ನಡೆದುಕೊಳ್ಳುತ್ತಿದ್ದು, ಹೀಗಾಗಿ ಅಂಬೇಡ್ಕರರು ನಿಪ್ಪಾಣಿಗೆ ಭೇಟಿ ನೀಡಿದ ಶತಮಾನೋತ್ಸವ

ಜಾತಿಗಣತಿ ವರದಿ ಬಗ್ಗೆ ಅವರಲ್ಲಿಯೇ ಗೊಂದಲವಿದೆ

ಆಚರಿಸುತ್ತಿಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹರಿಹಾಯ್ದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಹಿಂದಿನಿಂದಲೂ ಅಂಬೇಡ್ಕರ ರನ್ನು ದ್ವೇಷಿಸುತ್ತಲೇ ಬಂದಿದೆ. ಅವರು ಸಂಸತ್‌ಗೆ ಆಗಮಿಸದಂತೆ ಸೋಲಿಸಿತ್ತು. ನೆಹರು ಅವರ ವಿರುದ್ಧ ಪ್ರಚಾರ ಮಾಡಿ ಸೋಲಿಸಿದರು. ಹೀಗಾಗಿ ಅಂಬೇಡ್ಕರ ಶತಮಾನೋತ್ಸವ ಆಚರಿಸಿದರೆ ತಮ್ಮ ಕುತಂತ್ರ ಎಲ್ಲಿ ಬಯಲಾಗುತ್ತದೆಂದು ಕೈಬಿಟ್ಟಿದೆ ಎಂದು ವಾಗ್ದಾಳಿ ನಡೆಸಿದರು. ಮಹಾತ್ಮಾ ಗಾಂಧಿಯವರು ಬೆಳಗಾವಿಗೆ ಭೇಟಿ ನೀಡಿದರೆಂದು ಈಗಿನ ನಕಲಿ ಗಾಂಧಿಗಳು ಸರಕಾರದ ಖರ್ಚಿನಲ್ಲಿ ಸಮ್ಮೇಳನ ನಡೆಸಿದ್ದರು ಎಂದು ಕುಟುಕಿ ದರು. ಪ್ರಿಯಾಂಕ್ ಖರ್ಗೆಗೆ ಇತಿಹಾಸ ಗೊತ್ತಿಲ್ಲ. ಹಾಗಾದರೆ ಅಂಬೇಡ್ಕರ್ ಬಗ್ಗೆ ರಮೇಶ ಕುಮಾರ ಸದನದಲ್ಲಿ ಹೇಳಿದ್ದಕ್ಕೆ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತಾರೆಯೇ ಎಂದು ಪ್ರಶ್ನಿಸಿದರು. ಜಾತಿಗಣತಿ ವರದಿ ಬಗ್ಗೆ ಅವರಲ್ಲಿಯೇ ಗೊಂದಲವಿದೆ. ಸಮೀಕ್ಷೆ ಅವೈಜ್ಞಾನಿಕವಾಗಿದೆ. ತಮ್ಮ ಕುರ್ಚಿ ಉಳಿಸಿಕೊಳ್ಳಲು ಜಾತಿ ಗಣತಿ ದಾಳ ಬೀಸಿದ್ದಾರೆ ಎಂದು ಹರಿಹಾಯ್ದರು.

ಜಾತಿ ಗಣತಿ ವರದಿ ಹಿಂಪಡೆದು, ಪ್ರತಿ ಮನೆಗೆ ಹೋಗಿ ಸಮೀಕ್ಷೆ ಮಾಡಿ

ಮುಸ್ಲಿಂ ವೋಟ್ ಬ್ಯಾಂಕ್ ವರದಿ: ಅಶೋಕ್

ಬೆಂಗಳೂರು: ಕೇವಲ ಮುಸ್ಲಿಮರನ್ನು ವೋಟ್ ಬ್ಯಾಂಕ್ ಮಾಡಿಕೊಳ್ಳಲು ಸಿಎಂ ಸಿದ್ದರಾಮಯ್ಯ ಜಾತಿ ಗಣತಿ ವರದಿ ಮಾಡಿಸಿದ್ದಾರೆ. ಈ ವರದಿಯನ್ನು ಹಿಂಪಡೆದು, ಪ್ರತಿ ಮನೆಗೆ ಹೋಗಿ ಸಮೀಕ್ಷೆ ಮಾಡಿ ವೈಜ್ಞಾನಿಕವಾಗಿ ವರದಿ ರೂಪಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಜಾತಿ ಹಾಗೂ ಧರ್ಮಗಳನ್ನು ಒಡೆಯುವ ಕೆಲಸ ಮಾಡಿದ್ದಾರೆ. ಮೊದಲು ರಾಜ್ಯದಲ್ಲಿ ಅತಿ ದೊಡ್ಡ ಜಾತಿ ಲಿಂಗಾಯತರು, ಎರಡನೇ ಅತಿ ದೊಡ್ಡ ಜಾತಿ ಒಕ್ಕಲಿಗರು ಹಾಗೂ ಮೂರನೆಯವರು ದಲಿತರು ಎಂದಿತ್ತು. ಆದರೆ ಈಗ ಮುಸ್ಲಿಮರು ಅತಿ ದೊಡ್ಡ ಜಾತಿ ಎನ್ನಲಾಗಿದೆ. ಮುಸ್ಲಿಮರಲ್ಲೇ ವಿವಿಧ ಜಾತಿಗಳಿದ್ದು, ಅದನ್ನು ಬೇರೆ ಮಾಡಿಲ್ಲ. ಒಕ್ಕಲಿಗರಲ್ಲೇ ಕೆಲವು ಜಾತಿಗಳನ್ನು ವಿಂಗಡಣೆ ಮಾಡಿದ್ದಾರೆ. ಕಾಂಗ್ರೆಸ್ ಗೆ ಹೆಚ್ಚು ಮತ ನೀಡುವವರ ಸಂಖ್ಯೆಯನ್ನು ಹೆಚ್ಚಾಗಿ ತೋರಿಸಲಾಗಿದೆ. ಒಕ್ಕಲಿಗರಿಗೆ, ಲಿಂಗಾಯತರಿಗೆ, ದಲಿತರಿಗೆ ನಾಮ ಹಾಕಿದ್ದಾರೆ ಎಂದು ಟೀಕಿಸಿದರು.

ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದು ಹಳೆ ಕಾಂಗ್ರೆಸ್. ಈಗಿನ ಕಾಂಗ್ರೆಸ್‌ನಲ್ಲಿ ಹಳಬರು ಇಲ್ಲ. ಈ ಕಾಂಗ್ರೆಸ್ ಒಕ್ಕಲಿಗರು, ಲಿಂಗಾಯತರ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದೆ. ಈಗಲೂ ಸಮಯವಿದೆ. ಆರು ತಿಂಗಳು ತಡವಾದರೂ ಪರವಾಗಿಲ್ಲ, ಪ್ರತಿ ಮನೆಗೆ ಹೋಗಿ ಸಮೀಕ್ಷೆ ಮಾಡಿ ವರದಿಯನ್ನು ಮತ್ತೆ ರೂಪಿಸಲಿ. ಈ ವರದಿಗೆ 150 ಕೋಟಿ ಖರ್ಚಾಗಿದೆ ಎನ್ನಲಾಗಿದೆ. ಅಧಿಕಾರಿ ಕಾಂತರಾಜು ಅವರನ್ನು ಮನೆಗೆ ಕರೆಸಿಕೊಂಡ ಸಿಎಂ ಸಿದ್ದರಾಮಯ್ಯ ಡಿಕ್ಟೇಶನ್ ಮಾಡಿಸಿ ವರದಿ ಬರೆಸಿದ್ದಾರೆ. ಬಳಿಕ ಕಾಂತರಾಜು ಸಹಿ ಹಾಕದೆ ಓಡಿದ್ದಾರೆ. ಈ ಹಣವನ್ನು ಯಾರು ತಿಂದಿದ್ದಾರೆ ಎಂದು ತನಿಖೆ ಮಾಡಬೇಕಿದೆ. ಕೇವಲ ಮುಸ್ಲಿಮರನ್ನು ವೋಟ್ ಬ್ಯಾಂಕ್ ಮಾಡಿಕೊಳ್ಳಲು ವರದಿ ಮಾಡಲಾಗಿದೆ ಎಂದರು.

ಹಳ್ಳಿಕಾರ್, ಕುಂಚಿಟಿಗರನ್ನು ಬೇರೆ ಮಾಡಲಾಗಿದೆ. ರೆಡ್ಡಿ ಲಿಂಗಾಯತರನ್ನು ಪ್ರತ್ಯೇಕ ಮಾಡಲಾಗಿದೆ. ಇಂತಹ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ಅದನ್ನು ಸಚಿವರು ಒಪ್ಪಿದರೆ ಆಯಾ ಸಮುದಾಯದ ಜನರು ಅವರನ್ನು ಒಪ್ಪುವುದಿಲ್ಲ. ಈ ವರದಿಯಿಂದಾಗಿ ಕಾಂಗ್ರೆಸ್‌ನಲ್ಲೇ ಧಂಗೆ ಆರಂಭವಾಗಲಿದೆ. ಸಮುದಾಯಗಳ ಜನರು ಮುಂದಿನ ಚುನಾವಣೆಯಲ್ಲಿ ಇವರನ್ನು ಹತ್ತಿರ ಸೇರಿಸುವುದಿಲ್ಲ. ಒಕ್ಕಲಿಗ ಸ್ವಾಮೀಜಿಯವರು ಸಭೆ ಕರೆದು ಈ ಬಗ್ಗೆ ಚರ್ಚೆ ಮಾಡಲಿದ್ದಾರೆ. ಇದೇ ರೀತಿ ಬೇರೆ ಸಮುದಾಯದವರೂ ಸಭೆ ಮಾಡಿ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು.

ನ್ಯಾಷನಲ್ ಹೆರಾಲ್ಡ್ ಪತ್ರಿಕೆಯನ್ನು ಸ್ವಾತಂತ್ರ್ಯ ಹೋರಾಟಗಾರರು ಸ್ಥಾಪಿಸಿದ್ದರು. ಆದರೆ ಬಳಿಕ ಇಟಲಿ ಮೂಲದ ಸೋನಿಯಾ ಗಾಂಧಿ ಹಾಗೂ ಮಕ್ಕಳು 5 ಸಾವಿರ ಕೋಟಿ ಆಸ್ತಿ ಲೂಟಿ ಮಾಡಿ ದ್ದಾರೆ. ಅದು ದೇಶದ ಆಸ್ತಿಯೇ ಹೊರತು, ಇಟಲಿಯ ಆಸ್ತಿಯಲ್ಲ. ಈ ನಿಟ್ಟಿನಲ್ಲಿ ಇಡಿ ಉತ್ತಮ ಕೆಲಸ ಮಾಡಿದೆ.

- ಆರ್. ಅಶೋಕ್, ಪ್ರತಿಪಕ್ಷ ನಾಯಕ

ಜಾತಿ ಗಣತಿಗೆ 168 ಕೋಟಿ ಖರ್ಚು

ತುಮಕೂರು: ಜಾತಿಗಣತಿ ವರದಿ ಸಂಪುಟದಲ್ಲಿ ಮಂಡನೆಯಾಗಿದೆ ಅಷ್ಟೇ, ಚರ್ಚೆಯಾಗಿಲ್ಲ ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಏ. 17 ರಂದು ಕರೆದಿದ್ದಾರೆ. ಬರೀ ಅದೊಂದೆ ವಿಚಾರ ಇರಬೇಕು ಬೇರೆ ಏನು ಇರಬಾರದು ಅಂತಾ ಸಿಎಂ ಸೂಚನೆ ನೀಡಿದ್ದಾರೆ. ಜಾತಿಗಣತಿ ವರದಿಯಲ್ಲಿ ಏನಿದೆ ಎಲ್ಲಾ ಓದಿಕೊಂಡು, ಮುಂದಿನ ಸಚಿವ ಸಂಪುಟದಲ್ಲಿ ವಿಶೇಷ ಸಭೆ ಕರೆದಿದ್ದಾರೆ ಎಂದರು. ಮುಂದಿನ 17 ರಂದು ನಡೆಯುವ ಸಚಿವ ಸಂಪುಟದಲ್ಲಿ ಈ ವರದಿ ಬಗ್ಗೆ ಚರ್ಚೆ ಆಗಲಿದೆ. ನನಗೂ ಒಂದು ಕಾಪಿ ತಲುಪಿದೆ. ನಾನು ಓದುತ್ತಾ ಇದಿನಿ, ಓದಲು ಶುರು ಮಾಡಿದ್ದೀನಿ, ಇನ್ನೂ ಪೂರ್ತಿಯಾಗಿ ಓದಿಲ್ಲ. ಓದಿರೋದು ಅರ್ಧ ಅಷ್ಟೇ, ಹೇಳಿದ್ರೆ ತಪ್ಪಾಗುತ್ತದೆ ಎಂದರು. 2015 ರಿಂದ ಸರಕಾರ ಜನಗಣತಿ ಮಾಡಿದೆ. ಒಂದು ವರದಿ ಒಪ್ಪಿಗೆ ಆಗಲಿ ಅಥವಾ ತಿರಸ್ಕಾರ ಮಾಡಲಿ ಅದು ಬೇರೆ ವಿಚಾರ. ಸರಕಾರಕ್ಕೆ ಕೊಡುವ ಪ್ರಕ್ರಿಯೆಯನ್ನಾದರೂ ಆಗಬೇಕಲ್ವಾ. ಸರಕಾರ ಇದಕ್ಕೆ 168 ಕೋಟಿ ಖರ್ಚು ಮಾಡಿದೆ. ಇದಕ್ಕೆ ಸರಿ ಅಥವಾ ತಪ್ಪು ಅಂತಾ ಹೇಳಬೇಕಲ್ವಾ. ಬಿಜೆಪಿ ಅದು ಸರಿಯಿಲ್ಲ ಅಂತಾ ಬೇಕಾದರೂ ಹೇಳಲಿ. ಆದರೆ ಏನು ಸರಿಯಂತ ನಾವು ಹೇಳ್ತಿವಿ ಅಲ್ವಾ ಎಂದರು.

ವಿಶ್ವವಾಣಿ

ಸಂಪಾದಕೀಯ

ಮತ್ತೆ ಬಾಲ ಬಿಚ್ಚಿದರೇ ಉಗ್ರರು?

ಕಣಿವೆ ರಾಜ್ಯದಲ್ಲಿ ಮತ್ತೆ ಕದಲಿಕೆ ಉಂಟಾಗಿದೆ. ಜಮ್ಮು-ಕಾಶ್ಮೀರದ ಅಖ್ನೂರ್ ವಲಯದಲ್ಲಿ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಬಳಿ ಪಾಕಿಸ್ತಾನ ಮೂಲದ ಉಗ್ರರ ತಂಡವು ದೇಶದೊಳಗೆ ನುಸುಳುತ್ತಿರುವುದನ್ನು ಕಂಡ ಭದ್ರತಾ ಪಡೆಯ ಯೋಧರು ತಕ್ಷಣವೇ ಕಾರ್ಯಾಚರಣೆ ಆರಂಭಿಸಿದ್ದಕ್ಕೆ ಉಗ್ರರೂ ಪ್ರತಿಯಾಗಿ ಗುಂಡು ಹಾರಿಸಿದರು ಎಂದು ತಿಳಿದುಬಂದಿದೆ. ಆದರೆ ಉಭಯ ಪಾಳಯಗಳ ನಡುವೆ ನಡೆದ ಈ ಗುಂಡಿನ ಚಕಮಕಿಯ ವೇಳೆ ಭಾರತೀಯ ಸೇನಾಧಿಕಾರಿಯೊಬ್ಬರು ಹುತಾತ್ಮರಾಗಿದ್ದು ನೋವಿನ ಸಂಗತಿ. ಈ ಬೆಳವಣಿಗೆಯನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಏಕೆಂದರೆ, ಜಮ್ಮು-ಕಾಶ್ಮೀರ ಭಾಗದಲ್ಲಿ ಕೆಲ ವರ್ಷದಿಂದ ಉಗ್ರರ ಉಪಟಳ ಕಡಿಮೆಯಾಗಿತ್ತು ಮತ್ತು ಇದಕ್ಕೆ ಕೇಂದ್ರ ಸರಕಾರವು ಕಾಲಾನುಕಾಲಕ್ಕೆ ಕೈಗೊಂಡಿದ್ದ ಕಟ್ಟುನಿಟ್ಟಿನ ಕ್ರಮಗಳು ಕಾರಣವಾಗಿದ್ದವು. ಈಗ ಉಗ್ರರು ಮತ್ತೆ ಬಾಲ ಬಿಚ್ಚುತ್ತಿರುವುದನ್ನು ನೋಡಿದರೆ, ಪಾಕಿಸ್ತಾನ ಮತ್ತು ಚೀನಾದಂಥ ಗಡಿಯಾಚೆಗಿನ ಕುತ್ಸಿತ ಶಕ್ತಿಗಳ ಚಿತಾವಣೆ ಈ ಬೆಳವಣಿಗೆಯ ಹಿಂದಿರಬಹುದೇ ಎಂಬ ಶಂಕೆ ಮೂಡುತ್ತದೆ. ಏಕೆಂದರೆ, ನೆರೆಯ ಬಾಂಗ್ಲಾದೇಶದಲ್ಲಿ ಪ್ರತಿಭಟನೆಯ ನೆಪದಲ್ಲಿ ಹಿಂದೂ ಸಮುದಾಯದವರ ಮೇಲೆ ಏಕಾಏಕಿ ನಡೆದ ಹಿಂಸಾಚಾರಗಳು ಹಾಗೂ ಮನೆಗಳ ಲೂಟಿಗಳು, ಈಶಾನ್ಯ ರಾಜ್ಯ ಮಣಿಪುರದಲ್ಲಿನ ಜನಾಂಗೀಯ ಸಂಘರ್ಷ ತಾರಕಕ್ಕೇರಿದ್ದು ಇವೆಲ್ಲದರ ಹಿಂದೆ ಇಂಥ ಮಗ್ಗುಲು ಮುಳ್ಳುಗಳ ಕುಮ್ಮಕ್ಕು ಇದೆ ಎನ್ನಲಾಗುತ್ತಿದೆ. ಭಾರತದ ಭದ್ರತೆ, ಸಮಗ್ರತೆ ಮತ್ತು ಸಾರ್ವಭೌಮತೆಗಳ ಮೇಲೆ ವಕ್ರದೃಷ್ಟಿ ಬೀರಿ ಅವಕ್ಕೆ ಸಂಚಕಾರ ತಂದೊಡ್ಡಲು ಹವಣಿಸುತ್ತಿರುವ ಈ ಎರಡು ದೇಶಗಳ ಎಲ್ಲ ಕಸರತ್ತುಗಳನ್ನು ಭಾರತವು ವಿಫಲಗೊಳಿಸಬೇಕಾದ ಅಗತ್ಯ ಹಿಂದೆಂದಿಗಿಂತ ಹೆಚ್ಚಾಗಿದೆ ಎಂಬುದಕ್ಕೆ ಜಮ್ಮು-ಕಾಶ್ಮೀರದಲ್ಲಿ ನಡೆದಿರುವ ಈ ಚಕಮಕಿಯೇ ಸಾಕ್ಷಿ. ಕಿಶ್ತ್ವಾರ ಅರಣ್ಯದಲ್ಲಿ ಇಬ್ಬರು ಉಗ್ರರನ್ನು ಭಾರತ ಸೇನೆಯು ಹೊಡೆದು ಉರುಳಿಸಿದೆ ಎಂಬುದು ಸಮಾಧಾನಕರ ಸಂಗತಿಯಾದರೂ, ಈ ಕಾರ್ಯಾಚರಣೆಗೆ ಮತ್ತಷ್ಟು ವೇಗವನ್ನು ತುಂಬಬೇಕಿದೆ ಎಂಬುದನ್ನು ಮರೆಯಲಾಗದು. ಅದು ಈ ಕ್ಷಣದ ಅನಿವಾರ್ಯತೆಯೂ ಹೌದು.

ಸೊಂಪಾದಕೀಯ

ಚಿರಪರಿಚಿತ ಚಿರತೆ

ಕಾಡು ಹೋಗು ಅಂತಿದೆ, ಊರು ಬಾ ಅಂತಿದೆ' ಅನ್ನೋ ಹಾಗೆ, ಇತ್ತೀಚೆಗೆ ಕಾಡುಪ್ರಾಣಿಗಳು ನಾಡಿಗೆ ಬರೋದು ತುಂಬಾ ಕಾಮನ್ ಎನ್ನಿಸುವಂಥ ವಿಷಯ ಆಗಿದೆ. ಆಗಾಗ್ಗೆ ಅಲ್ಲಲ್ಲಿ ಆನೆದಾಳಿ ನಡೆದ ಬಗ್ಗೆ ವರದಿ ಆದರೂ, ಅವು ಕಣ್ಣಿಗೆ ರಾಚುವಂತೆ ಬಂದು ಹೋಗುತ್ತವೆ. ಆದರೆ ಯಾರಿಗೂ ಗೊತ್ತಿಲ್ಲದಂತೆ ಕತ್ತಲಲ್ಲಿ ಬಂದು ಕಣ್ಣಾಮುಚ್ಚಾಲೆ ಆಡಿ, ಹಗಲಲ್ಲಿ ಅವಿತು ಕುಳಿತುಕೊಳ್ಳುವ ಚಿರತೆಗಳ ಹಾವಳಿ ಕೂಡಾ ಇತ್ತೀಚೆಗೆ

ಜಾಸ್ತಿ ಆಗಿದೆ. ಆನೆಗಳು ತಮ್ಮ ಘನತೆಗೆ ತಕ್ಕಂತೆ ಆನೆ ನಡೆದಿದ್ದೇ ದಾರಿ ಎನ್ನುವಂತೆ ರಾಜ ಬೀದಿಯಲ್ಲಿ ತಮ್ಮ ಕ'ರಾ'ಮ'ತ್'ತು ತೋರಿಸುತ್ತವೆ. ಆದರೆ ಚಿರತೆಗಳು ಜನರ ಕಣ್ಣಿಗೆ ಬೀಳುವುದು ಕಷ್ಟ. ಅವೇನಿದ್ದರೂ ಕೇವಲ ಸಿಸಿಟಿವಿ ಕ್ಯಾಮೆರಾಗಳ ಕಣ್ಣಿಗೆ ಮಾತ್ರ ಬೀಳೋದು, ಆನಂತರ ಅರಣ್ಯ ಇಲಾಖೆಯವರ ಬೋನಿಗೆ ಬೀಳೋದು ವಾಡಿಕೆ. ರಾಜ್ಯದಲ್ಲಿ ಕೆಲ ತಿಂಗಳ ಹಿಂದೆ ಎರಡು ಕಡೆ ಚಿರತೆಗಳ ಹಾವಳಿ ಕಂಡುಬಂದಿತ್ತು. ಚಿಕ್ಕಮಗಳೂರಿನ ಸಮತಳ ಗ್ರಾಮದಲ್ಲಿ ಚಿರತೆಯೊಂದು ಬೋನಿಗೆ ಬಿತ್ತು. ಕೇವಲ ಸಿಸಿಟಿವಿಗೆ ದರ್ಶನ ಕೊಟ್ಟಿದ್ದ ಚಿರತೆ ನಂತರ ಬೋನಿನಲ್ಲಿ ಬಂದಿಯಾಯಿತು, ನಂತರ ಅದನ್ನು ಕಾಡಿಗೆ ವಾಪಸ್ ಬಿಡಲಾಯಿತು. ಹಾಗೇ ಮೈಸೂರಿನ ಇನ್ಫೋಸಿಸ್ ಆವರಣದಲ್ಲಿ ಇನ್ನೊಂದು ಚಿರತೆ ಕಾಣಿಸಿಕೊಂಡಿತು. ಆದರೆ ಇನ್ಫೋಸಿಸ್ ಆವರಣಕ್ಕೆ ಚಿರತೆ ಯಾಕೆ ಬಂತು ಅನ್ನೋದು ಇಲ್ಲಿ ಯಕ್ಷಪ್ರಶ್ನೆ. ಬಹುಶಃ ಇನ್ಫೋಸಿಸ್‌ನಲ್ಲಿ ಕೆಲಸ ಹುಡುಕಿಕೊಂಡು ಬಂದ ಚಿರತೆ, ಇದು ನಾರಾಯಣಮೂರ್ತಿ ಅವರ ಕಚೇರಿ ಅಂತ ತಿಳಿದು, 'ವಾರಕ್ಕೆ 72 ಗಂಟೆ ಕೆಲಸ ಮಾಡೋಕೆ ನನ್ ಕೈಲಿ ಆಗಲ್ಲಪ್ಪ' ಅಂತ ಅಲ್ಲಿಂದ ಕಂಬಿ ಕಿತ್ತಿರಬಹುದು ಅನ್ನೋದು ಕೆಲವೊಬ್ಬರು ಕುಹಕಿಗಳು ಮಾಡಿದ ಕಾಮೆಂಟು. ಒಟ್ಟಿನಲ್ಲಿ ಚಿರತೆಯು ಜನವಸತಿ ಪ್ರದೇಶದಲ್ಲಿ ಕಾಣಿಸಿಕೊಂಡರೂ ಸುದ್ದಿ, ಬೋನಿಗೆ ಬಿದ್ದರೂ ಸುದ್ದಿ, ಅದನ್ನು ಮರಳಿ ಕಾಡಿಗೆ ಬಿಟ್ಟು ಬಂದರೂ ಸುದ್ದಿ ಅನ್ನೋ ಹಾಗೆ ಆಗಿದೆ ಈಗ!

ಸಂಪಾದಕರ ಸದ್ಯಶೋಧನೆ

ಶಾಪವಾದ ದೀರ್ಘಾಯುಷ್ಯ

ನಾನು ಜಪಾನಿಗೆ ಹೋದಾಗ ಅಲ್ಲಿನ ಪ್ರತಿಷ್ಠಿತ ಪತ್ರಿಕೆ 'ದಿ ಜಪಾನ್ ಟೈಮ್ಸ್'ನಲ್ಲಿ ಒಂದು ವರದಿ ಪ್ರಕಟವಾಗಿತ್ತು. Some 58,000 elderly people died alone at home this year ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾದ ಆ ಸುದ್ದಿಯಲ್ಲಿ ತಮ್ಮ ಮನೆಯಲ್ಲಿ ಒಂಟಿಯಾಗಿ ಮೃತಪಟ್ಟ 65 ಅಥವಾ ಹೆಚ್ಚು ವಯಸ್ಸಿನ ವ್ಯಕ್ತಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ ಎಂಬ ಆಘಾತಕಾರಿ ಸಂಗತಿ ಬಹಿರಂಗವಾಗಿತ್ತು. ತಮ್ಮ ತಮ್ಮ ಮನೆಗಳಲ್ಲಿ ಏಕಾಂಗಿಯಾಗಿರುವ 58 ಸಾವಿರಕ್ಕೂ ಅಧಿಕ ವೃದ್ಧರು ಅಬ್ಬೇಪಾರಿಗಳಾಗಿ ಸತ್ತಿದ್ದಾರೆಂದು ಜಪಾನಿನ ರಾಷ್ಟ್ರೀಯ ಪೊಲೀಸ್ ಸಂಸ್ಥೆ (National Police Agency) ಪ್ರಕಟಿಸಿತ್ತು. ಈ ಅಂಕಿ-ಅಂಶಗಳನ್ನು ವಾರ್ಷಿಕ ಆಧಾರದ ಮೇಲೆ ಬಿಡುಗಡೆ ಮಾಡಿರುವುದು ಇದೇ ಮೊದಲು. ಈ ಮಾಹಿತಿಯನ್ನು ಸರಕಾರ ಸಮಾಜದಿಂದ ಪ್ರತ್ಯೇಕವಾಗುತ್ತಿರುವ ವ್ಯಕ್ತಿಗಳಿಗೆ ಬೆಂಬಲ ನೀಡುವ ಯೋಜನೆಗಳನ್ನು ರೂಪಿಸಲು ಉಪಯೋಗಿಸಲೆಂದು ಕಲೆಹಾಕಿತ್ತು. ಈ ಅಂಕಿ-ಅಂಶಗಳ ಪ್ರಕಾರ, 2024ರಲ್ಲಿ ರಾಷ್ಟ್ರವ್ಯಾಪಿಯಾಗಿ ಪೊಲೀಸ್ ಇಲಾಖೆ ನಿರ್ವಹಿಸಿದ ಒಟ್ಟು 2,04,184 ಸಾವುಗಳಲ್ಲಿ (ಇದರಲ್ಲಿ ಆತ್ಮಹತ್ಯೆಗಳು ಕೂಡ ಸೇರಿವೆ), ಒಂಟಿಯಾಗಿ ಮನೆಗಳಲ್ಲಿ ಮೃತಪಟ್ಟವರು 76 ಸಾವಿರಕ್ಕೂ ಅಧಿಕ ಮಂದಿಯಿದ್ದರು. ಅವರ ಪೈಕಿ ಸುಮಾರು ಶೇ.76 ಜನರು (ಅಂದರೆ ಸುಮಾರು 58 ಸಾವಿರ ಮಂದಿ) 65 ಅಥವಾ ಹೆಚ್ಚು ವಯಸ್ಸಿನವರಾಗಿದ್ದರು. ಒಂಟಿಯಾಗಿ ಸತ್ತವರಲ್ಲಿ 85 ವರ್ಷ ಅಥವಾ ಹೆಚ್ಚಿನ ವಯಸ್ಸಿನವರೇ ಅಧಿಕವಾಗಿದ್ದರು. ಸುಮಾರು ಶೇ.40ರಷ್ಟು ಪ್ರಕರಣಗಳಲ್ಲಿ ಮೃತರನ್ನು ಮರಣದ ದಿನವೇ ಅಥವಾ ಅದರ ಮರುದಿನ ಪತ್ತೆ ಹಚ್ಚಲಾಯಿತು. ಅಂದಾಜು ಶೇ.70ರಷ್ಟು ಪ್ರಕರಣಗಳಲ್ಲಿ ಒಂದು ವಾರದೊಳಗೆ ಮೃತದೇಹಗಳನ್ನೂ ಪತ್ತೆ ಹಚ್ಚಲಾಯಿತು. ಗಂಭೀರವಾದ ಅಂಶವೆಂದರೆ, 6,945 ಪ್ರಕರಣಗಳಲ್ಲಿ (ಅಂದರೆ ಸುಮಾರು ಶೇ.10ರಷ್ಟು) ಮೃತರನ್ನು ಒಂದು ತಿಂಗಳಿಗಿಂತ ಹೆಚ್ಚು ಕಾಲ ಯಾರೂ ಪತ್ತೆ ಹಚ್ಚಿರಲಿಲ್ಲ. 65ಕ್ಕಿಂತ ಕಡಿಮೆ ವಯಸ್ಸಿನವರು ಒಂಟಿಯಾಗಿ ಸತ್ತ ಸಂದರ್ಭಗಳಲ್ಲಿ, ಅವರ ಮೃತದೇಹ ಪತ್ತೆಯಾಗುವುದರಲ್ಲಿ ಹೆಚ್ಚು ವಿಳಂಬವಾಗುತ್ತದೆ. ವೃದ್ಧರ ಸಂಬಂಧದಲ್ಲಿ ತಕ್ಷಣ ಗಮನ ಸೆಳೆಯುವ ಕುಟುಂಬ ಅಥವಾ ನೆರೆಹೊರೆಯವರು ಇದ್ದರೂ, ಇತರ ವಯೋಮಾನದವರಿಗೆ ಅದು ಇಲ್ಲದಿರುವ ಸಾಧ್ಯತೆ ಇದೆ. ಈ ಘಟನೆಗಳನ್ನು ನೋಡಿದಾಗ, ಜಪಾನಿನಲ್ಲಿ ಹೆಚ್ಚುತ್ತಿರುವ 'ಒಂಟಿತನದ ಮರಣ' (ಇದನ್ನು ಅವರು ಕೊಡೋಕುಶಿ ಎಂದು ಕರೆಯುತ್ತಾರೆ) ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಇಡೀ ಜಪಾನಿನಲ್ಲಿ ಮಾನವೀಯತೆಗೆ ಸವಾಲಾಗಿರುವ 'ಒಂಟಿತನದ ಮರಣ'ವನ್ನು ಹೇಗೆ ನಿಭಾಯಿಸುವುದು ಎಂಬುದು ಸರಕಾರಕ್ಕೆ ತಲೆನೋವಾಗಿದೆ. ಇದು ಕೇವಲ ಆರೋಗ್ಯ ಸಮಸ್ಯೆಯೊಂದೇ ಆಗದೇ, ಮಾನವೀಯತೆ, ಬಾಂಧವ್ಯ ಮತ್ತು ಸಹಬಾಳ್ವೆಯ ಕುರಿತು ಗಂಭೀರ ಚಿಂತನೆಗೆ ಗ್ರಾಸವಾಗಿರುವ ಅಂಶವಾಗಿದೆ. ಈ ಸಮಸ್ಯೆ ಮುಂದಿನ ದಶಕಗಳಲ್ಲಿ ಮತ್ತಷ್ಟು ತೀವ್ರವಾಗಿ ಪರಿಣಮಿಸಲಿದೆ. 'ಜಪಾನ್ ಟೈಮ್ಸ್' ಪತ್ರಿಕೆಯಲ್ಲಿ ಬಾಕ್ಸ್ ಐಟಮ್ ಆಗಿ ಇನ್ನೊಂದು ಸಂಗತಿ ಪ್ರಕಟವಾಗಿತ್ತು- ಹಿಂದಿನ ವರ್ಷ ಕ್ಯೋಟೋ ನಗರದಿಂದ ಸುಮಾರು 36 ಕಿ.ಮೀ. ದೂರದ ಹಳ್ಳಿಯೊಂದರಲ್ಲಿ 98 ವರ್ಷದ ವೃದ್ಧನೊಬ್ಬ ಒಂಟಿಯಾಗಿ ಮನೆಯಲ್ಲಿ ಜೀವನ ಸಾಗಿಸುತ್ತಿದ್ದ. ಆತ ಕಳೆದ 16 ವರ್ಷಗಳಿಂದ ತನ್ನ ಮನೆಯಲ್ಲಿ ಒಂಟಿಯಾಗಿದ್ದ. ಆತನನ್ನು ನೋಡಲು ಯಾರೂ ಬರುತ್ತಿರಲಿಲ್ಲ. ನಗರ ಪ್ರದೇಶದಲ್ಲಿ ಪುನರ್ವಸತಿ ಕಲ್ಪಿಸುವುದಾಗಿ ಸರಕಾರ ಹೇಳಿದರೂ ಆತ ತನ್ನ ಸ್ವಂತ ಮನೆಯಲ್ಲಿಯೇ ಜೀವಿಸುತ್ತಿದ್ದ. ಒಂದು ದಿನ ಆತ ತೀರಿಕೊಂಡ. ಆದರೆ ಅದು ಹೊರಜಗತ್ತಿಗೆ ಗೊತ್ತಾಗಲು 4 ತಿಂಗಳುಗಳೇ ಹಿಡಿದವು. ತಮ್ಮ ಕುಟುಂಬ, ಸ್ನೇಹಿತರಿಂದ ದೂರವಾಗಿ ಅಥವಾ ಸಾಮಾಜಿಕ ಸಂಪರ್ಕ ಕಡಿಮೆಕೊಂಡು ತಮ್ಮ ಮನೆಗಳಲ್ಲಿ ಅನಾಥವಾಗಿ ಸತ್ತು ಹೋಗುವ ಸ್ಥಿತಿಯನ್ನು ಬಿಂಬಿಸುವ ಈ 'ಒಂಟಿತನದ ಮರಣ'ಗಳು ಜಪಾನಿನ ಸಾಮಾಜಿಕ ವ್ಯವಸ್ಥೆಯ ಇನ್ನೊಂದು ಕರಾಳ ಮುಖವನ್ನು ಅನಾವರಣಗೊಳಿಸುತ್ತವೆ. ದೀರ್ಘಾಯುಷ್ಯವೂ ಅಲ್ಲಿನ ಜನರಿಗೆ ಶಾಪವಾಗಿ ಪರಿಣಮಿಸಿದೆ.

ವಿಜಯ ಯಾತ್ರೆ, ಇವರಿಗೆಲ್ಲ ಮಾತ್ರೆ!

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಮೊನ್ನೆ ಕರ್ನಾಟಕ ಬಿಜೆಪಿಯ ಉಸ್ತುವಾರಿ ರಾಧಾಮೋಹನದಾಸ್ ಅಗರ್ವಾಲ್ ಅವರನ್ನು ಸಂಪರ್ಕಿಸಿದ ರಾಜ್ಯ ಬಿಜೆಪಿಯ ನಾಯಕರೊಬ್ಬರು ಕಂಪ್ಲೇಂಟುಗಳ ಸುರಿಮಳೆ ಸುರಿಸಿದ್ದಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಇಡುತ್ತಿರುವ ಹೆಜ್ಜೆ ನಮಗೆ ಮುಳುವಾಗಲಿದೆ ಅಂತ ಆತಂಕ ವ್ಯಕ್ತಪಡಿಸಿದ್ದಾರೆ. ಅಂದ ಹಾಗೆ ರಾಜ್ಯ ಸರಕಾರದ ಬೆಲೆ ಏರಿಕೆ ನೀತಿಯ ವಿರುದ್ಧ ವಿಜಯೇಂದ್ರ ನೇತೃತ್ವದಲ್ಲಿ ಆರಂಭವಾಗಿರುವ 'ಜನಾಕ್ರೋಶ ಯಾತ್ರೆ' ಒಂದು ಮಟ್ಟದ ಹವಾ ಎಬ್ಬಿಸಿರುವುದು ನಿಜ. ಏಕತಾನತೆಯ ಹೋರಾಟಗಳಿಂದ ಮಂಕಾಗಿದ್ದ ರಾಜ್ಯ ಬಿಜೆಪಿಗೆ ವಿಜಯೇಂದ್ರ ನೇತೃತ್ವದ ಜನಾಕ್ರೋಶ ಯಾತ್ರೆ ಟಾನಿಕ್ ನೀಡಿದೆಯಾದರೂ ರಾಜ್ಯ ಬಿಜೆಪಿಯ ಕೆಲ ಸಿಎಂ ಕ್ಯಾಂಡಿಡೇಟುಗಳಿಗೆ ಅದು ಇಷ್ಟವಾಗುತ್ತಿಲ್ಲ. ಕಾರಣ? ಇಡೀ ಜನಾಕ್ರೋಶ ಯಾತ್ರೆಯ ಕೇಂದ್ರಬಿಂದುವಾಗಿ ವಿಜಯೇಂದ್ರ ಕಾಣಿಸುತ್ತಿದ್ದರೆ, ತಾವು ಸ್ಟ್ಯಾಂಪ್ ಸೈಜಿನ ಫೋಟೋಗೆ ಸೀಮಿತರಾಗಿದ್ದೇವೆ ಎಂಬುದು ಈ ಸಿಎಂ ಕ್ಯಾಂಡಿಡೇಟುಗಳ ಸಿಟ್ಟು.

ಹಾಗಂತಲೇ ಪಕ್ಷದ ಉಸ್ತುವಾರಿ ರಾಧಾಮೋಹನದಾಸ್ ಅಗರ್ವಾಲ್ ಅವರನ್ನು ಸಂಪರ್ಕಿಸಿದ ರಾಜ್ಯ ಬಿಜೆಪಿಯ ನಾಯಕರೊಬ್ಬರು ವಿಜಯೇಂದ್ರ ವಿರುದ್ಧ ದೂರಿನ ಮಳೆ ಸುರಿಸಿದ್ದಾರೆ. ''ಇವತ್ತು ರಾಜ್ಯ ಸರಕಾರದ ವಿರುದ್ಧ ಆರಂಭವಾಗಿರುವ ಜನಾಕ್ರೋಶ ಯಾತ್ರೆಯನ್ನು ತಮ್ಮ ಗುರಿಸಾಧನೆಗೆ ಏಣಿಯನ್ನಾಗಿ ಮಾಡಿಕೊಂಡಿರುವ ವಿಜಯೇಂದ್ರ ಅವರು, ನಮ್ಮನ್ನು ಆ ಏಣಿಯ ಮೆಟ್ಟಿಲುಗಳನ್ನಾಗಿ ಮಾಡಿಕೊಳ್ಳಲು ಹೊರಟಿದ್ದಾರೆ. ಇವತ್ತು ಇಷ್ಟು ದೊಡ್ಡ ಹೋರಾಟ ಆರಂಭಿಸುವಾಗ ನಾವು ಮಿತ್ರಪಕ್ಷ ಜೆಡಿಎಸ್ ಅನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿತ್ತು. ಆದರೆ ನೆಪಮಾತ್ರಕ್ಕೂ ಜೆಡಿಎಸ್ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದ ವಿಜಯೇಂದ್ರ, ಇಡೀ ಹೋರಾಟ ತಮ್ಮದೇ ಅಂತ ಹೊರಟಿದ್ದಾರೆ. ಇವರ ಈ ಕೆಲಸದಿಂದ ಜೆಡಿಎಸ್ ಸಿಟ್ಟಿಗೆದ್ದರೆ, ಮೈತ್ರಿಯಿಂದ ಹಿಂದೆ ಸರಿದರೆ, ಕಾಂಗ್ರೆಸ್ ವಿರುದ್ಧ ಒಕ್ಕಲಿಗ-ಲಿಂಗಾಯತ ಶಕ್ತಿಗಳು ಕನ್‌ಸಾಲಿಡೇಟ್ ಆಗುವುದಿಲ್ಲ ಮತ್ತು ಇದರ ಲಾಭ ಪಡೆಯುವ ಕಾಂಗ್ರೆಸ್ ಪಕ್ಷ ಅಹಿಂದ ವರ್ಗಗಳ ಸಾಲಿಡ್ಡು ಬೆಂಬಲದಿಂದ ಮರಳಿ ಅಧಿಕಾರ ಹಿಡಿಯುತ್ತದೆ. ಹಾಗಾಗಬಾರದು ಎಂದರೆ ವರಿಷ್ಠರು ತಕ್ಷಣವೇ ವಿಜಯೇಂದ್ರ ಅವರಿಗೆ ಎಚ್ಚರಿಕೆ ಕೊಡಬೇಕು. ಆಗಿರುವ ತಪ್ಪು ಸರಿಪಡಿಸಿಕೊಳ್ಳಲು ಹೇಳಬೇಕು'' ಅಂತ ಈ ನಾಯಕರು ವಿವರಿಸಿದ್ದಾರೆ.

ಹೀಗೆ ಆ ನಾಯಕರು ಹೇಳಿದ್ದನ್ನು ಕೇಳಿಸಿಕೊಂಡ ರಾಧಾಮೋಹನದಾಸ್ ಅಗರ್ವಾಲ್ 'ಶ್ಯೂರ್ ಶ್ಯೂರ್' ಅಂತ ಭರವಸೆಯ ಮಾತನಾಡಿದ್ದಾರೆ. ಆದರೆ ತಾವು ಅವರಿಗೆ ಕೊಟ್ಟ ದೂರು ವರಿಷ್ಠರ ಕಿವಿ ತಲುಪಿಲ್ಲ, ವಿಜಯೇಂದ್ರ ಅವರಿಗೆ ವಾರ್ನಿಂಗೂ ಬಂದಿಲ್ಲ ಎಂಬುದು ಯಾವಾಗ ಖಚಿತವಾಯಿತೋ ಆಗ ಈ ನಾಯಕರು, ಹವಾ ಎಬ್ಬಿಸುತ್ತಾ ಹೊರಟಿದ್ದ ಜನಾಕ್ರೋಶ ಯಾತ್ರೆಯಿಂದ ದೂರ ಉಳಿದಿದ್ದಾರೆ. ಅಷ್ಟೇ ಅಲ್ಲ, ಯಾತ್ರೆಗೆ ಹೊರಟ ವಿಜಯೇಂದ್ರ ಅವರಿಗೆ ಕೇಂದ್ರ ಸಚಿವ ಅಮಿತ್ ಶಾ ಅವರ ಫುಲ್ಲು ಬೆಂಬಲವಿದೆ ಎಂಬುದು ನಿಕ್ಕಿಯಾಗಿ ಮಂಕಾಗಿದ್ದಾರೆ.

ವಿಜಯೇಂದ್ರ ಲೆಕ್ಕಾಚಾರ ಏನು?

ಅಂದ ಹಾಗೆ, ಜನಾಕ್ರೋಶ ಯಾತ್ರೆಗೆ ಮುಂದಾದ ವಿಜಯೇಂದ್ರರು ಜೆಡಿಎಸ್ ಪಕ್ಷದಿಂದ ಅಂತರ ಕಾಯ್ದುಕೊಂಡಿರುವುದೇಕೆ ಎಂಬುದು ರಹಸ್ಯವಲ್ಲ. ಅವರ ಪ್ರಕಾರ, ಇವತ್ತು ಹೆಜ್ಜೆ ಹೆಜ್ಜೆಗೂ ಜೆಡಿಎಸ್ ಪಕ್ಷವನ್ನು ನೆಚ್ಚಿಕೊಂಡು ಹೋದರೆ ನಾಳೆ ಸ್ವಯಂಬಲದ ಮೇಲೆ ಪಕ್ಷ ಅಧಿಕಾರ ಹಿಡಿಯುವುದು ಕಷ್ಟ. ಇದರ ನಡುವೆಯೇ ಜೆಡಿಎಸ್ ಜತೆಗಿನ ಮೈತ್ರಿ ಬೇಕು ಅಂತ ವರಿಷ್ಠರು ನಿರ್ಧರಿಸಿದರೂ, ಇಂಥ ಮೈತ್ರಿಯ ಫಲವಾಗಿ ಜೆಡಿಎಸ್ 50ಕ್ಕಿಂತ ಹೆಚ್ಚು ಸೀಟು ಗೆಲ್ಲುವ ಮಟ್ಟಕ್ಕೆ ಹೋದರೆ ಏನಾಗುತ್ತದೆ? ನಿರ್ವಿವಾದವಾಗಿ ಕುಮಾರಸ್ವಾಮಿ ಅವರೇ ಮುಖ್ಯಮಂತ್ರಿಯಾಗುತ್ತಾರೆ. ಹೀಗೆ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಬಿಜೆಪಿ ಏಕೆ ದುಡಿಯಬೇಕು? ಅದರ ಬದಲು ಉಳಿದಿರುವ ಮೂರು ವರ್ಷಗಳ ಅವಧಿಯಲ್ಲಿ ನಾವೇ ಹೆಚ್ಚು ಶ್ರಮ ಹಾಕಿ ಪಕ್ಷ ಕಟ್ಟಿದರೆ ಸ್ವಯಂಬಲದ ಮೇಲೆ ಸರಕಾರ ರಚಿಸಬಹುದು. ಹೀಗೆ ಸರಕಾರ ರಚಿಸುವ ಸಂಖ್ಯಾಬಲ ನಮಗೇ ಇದೆಯೆಂದರೆ ಕುಮಾರಸ್ವಾಮಿ ಮುಖ್ಯಮಂತ್ರಿ ಹುದ್ದೆಗೆ ಪಟ್ಟು ಹಿಡಿಯುವುದು ಕಷ್ಟ. ಆದ್ದರಿಂದ ನಾವೇ ಸ್ವಯಂಬಲದ ಮೂಲಕ ಸರಕಾರ ರಚಿಸುವ ಶಕ್ತಿಯನ್ನು ಗಳಿಸಿಕೊಳ್ಳಬೇಕು ಎಂಬ ತೀರ್ಮಾನಕ್ಕೆ ಬಂದಿರುವ ವಿಜಯೇಂದ್ರ, ತಮ್ಮ ಸಂಪೂರ್ಣ ಬಲದೊಂದಿಗೆ ಪಕ್ಷ ಕಟ್ಟಲು ತೀರ್ಮಾನಿಸಿದ್ದಾರೆ. ಗಮನಿಸಬೇಕಿರುವ ಸಂಗತಿ ಎಂದರೆ ವಿಜಯೇಂದ್ರ ಅವರ ನಡೆಗೆ ಅಮಿತ್ ಶಾ ಅವರ ಸಂಪೂರ್ಣ ಸಹಮತ ಇದೆ. ಮತ್ತದು ವಿಜಯೇಂದ್ರ ಅವರಿಗೂ ಗೊತ್ತಿದೆ.

ಅಮಿತ್ ಶಾ ಆಟಕ್ಕೇನು ಕಾರಣ?

ಇನ್ನು ಕರ್ನಾಟಕದಲ್ಲಿ ಪಕ್ಷವನ್ನು ಸ್ವಯಂಶಕ್ತಿಯ ಮೇಲೆ ನಿಲ್ಲಿಸಲು ಹೊರಟಿರುವ ವಿಜಯೇಂದ್ರ ಅವರಿಗೆ ಅಮಿತ್ ಶಾ ಬೆಂಬಲ ಕೊಡುತ್ತಿರುವುದೇಕೆ? ಬಿಜೆಪಿ ಮೂಲಗಳ ಪ್ರಕಾರ, ಅಮಿತ್ ಶಾ ಅವರ ನಡವಳಿಕೆಗೆ 2018ರಲ್ಲಿ ನಡೆದ ಬೆಳವಣಿಗೆಯೇ ಕಾರಣ. ಅವತ್ತು ಕರ್ನಾಟಕ ವಿಧಾನಸಭೆಗೆ ಚುನಾವಣೆಗಳು ಘೋಷಣೆಯಾದಾಗ ಅಮಿತ್ ಶಾ ಯೋಚನೆಗೆ ಬಿದ್ದಿದ್ದರು. ಕಾರಣ? ಈ ಸಂಬಂಧ ಅವರು ಕರ್ನಾಟಕದಿಂದ ತರಿಸಿಕೊಂಡ ಸರ್ವೆ ರಿಪೋರ್ಟು ಒಂದು ಆತಂಕದ ಬಗ್ಗೆ ವಿವರಿಸಿತ್ತು. ಬಿಜೆಪಿ ಸುಮಾರು ನೂರು ಕ್ಷೇತ್ರಗಳಲ್ಲಿ ಗೆಲ್ಲಲಿದೆಯಾದರೂ, ಆಡಳಿತಾರೂಢ ಕಾಂಗ್ರೆಸ್ ಪಕ್ಷ ಅಲ್ಪ ಬಹುಮತದ ಸರಕಾರ ರಚಿಸುವಲ್ಲಿ ಯಶಸ್ವಿಯಾಗಬಹುದು ಎಂಬುದು ಆ ಆತಂಕವಾಗಿತ್ತು. 'ಆದರೆ ಹಳೆ ಮೈಸೂರು ಭಾಗದ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್, ಜೆಡಿಎಸ್ ಮಧ್ಯೆ ತೀವ್ರ ಪೈಪೋಟಿ ಇದ್ದು, ಇಂಥ ಕ್ಷೇತ್ರಗಳಲ್ಲಿ ನಾವು ದುರ್ಬಲ ಕ್ಯಾಂಡಿಡೇಟುಗಳನ್ನು ಕಣಕ್ಕಿಳಿಸಿದರೆ ಕಾಂಗ್ರೆಸ್-ಜೆಡಿಎಸ್ ಮಧ್ಯೆ ನೇರ ಹಣಾಹಣಿ ನಡೆಯುತ್ತದೆ. ಆ ಮೂಲಕ ಜೆಡಿಎಸ್ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಲು ಸಾಧ್ಯವಾಗುತ್ತದೆ. ಹೀಗೆ ಜೆಡಿಎಸ್ ಮೂವತ್ತಕ್ಕೂ ಹೆಚ್ಚು ಸೀಟುಗಳನ್ನು ಗೆಲ್ಲಲು ಅನುಕೂಲ ಮಾಡಿಕೊಟ್ಟರೆ ತದನಂತರ ನಮಗೆ ಕೊರತೆಯಾಗುವ ಬಲವನ್ನು ಅದರ ಜತೆಗಿನ ಮೈತ್ರಿಯಿಂದ ನಿವಾರಿಸಿಕೊಳ್ಳಬಹುದು' ಎಂಬುದು ಅಮಿತ್ ಶಾ ಕೈಲಿದ್ದ ರಿಪೋರ್ಟಿನ ಸಾರಾಂಶ.

ಅದರ ಪ್ರಕಾರ, ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಬಿಜೆಪಿ ದುರ್ಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತು. ಮತ್ತದರ ಪ್ರಯೋಜನ ಜೆಡಿಎಸ್‌ಗೆ ಸಾಲಿಡ್ಡಾಗಿಯೇ ದಕ್ಕಿತು. ಆದರೆ ಯಾವಾಗ ಫಲಿತಾಂಶ ಬಂದು ಸರಕಾರ ರಚಿಸಲು ಬಿಜೆಪಿ ವರಿಷ್ಠರು ಜೆಡಿಎಸ್ ಕಡೆ ಮುಖ ಮಾಡಿದರೋ, ಅಷ್ಟೊತ್ತಿಗಾಗಲೇ ಸಿಎಂ ಪಟ್ಟದ ಮೇಲೆ ಕಣ್ಣಿಟ್ಟಿದ್ದ ಜೆಡಿಎಸ್ ನಾಯಕರು ಕಾಂಗ್ರೆಸ್ ಜತೆ ಸೆಟ್ಲಾಗಿಬಿಟ್ಟಿದ್ದರು. ಕಾರಣ? ಬಿಜೆಪಿ ವರಿಷ್ಠರು ಜೆಡಿಎಸ್ ಪಕ್ಷಕ್ಕೆ ಉಪಮುಖ್ಯಮಂತ್ರಿ ಹುದ್ದೆ ಬಿಟ್ಟುಕೊಡುವ ಲೆಕ್ಕಾಚಾರದಲ್ಲಿದ್ದರೆ, ಕಾಂಗ್ರೆಸ್ ವರಿಷ್ಠರು ಬೇಷರತ್ತಾಗಿ ಜೆಡಿಎಸ್‌ಗೆ ಮುಖ್ಯಮಂತ್ರಿ ಹುದ್ದೆ ಬಿಟ್ಟುಕೊಡುವ ಡೀಲು ಕುದುರಿಸಿಬಿಟ್ಟಿದ್ದರು. ಮೂಲಗಳ ಪ್ರಕಾರ, ಈ ರೀತಿ ಕಾಂಗ್ರೆಸ್ ಜತೆ ಸೆಟ್ಲಾದ ಜೆಡಿಎಸ್ ವಿಷಯದಲ್ಲಿ ಅಮಿತ್ ಶಾ ಅವರಿಗೆ ಕೋಪ ಬಂದಿದ್ದು ನಿಜ. ಮತ್ತು ಇದೇ ಕಾರಣಕ್ಕಾಗಿ 2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಮುಗಿಸಲು ಪಕ್ಷದ ನಾಯಕರಿಗೆ ಅವರು ಸುಪಾರಿ ನೀಡಿದ್ದೂ ನಿಜ. ಅವರ ಈ ಸೂಚನೆಯ ಅನುಸಾರವಾಗಿಯೇ 2023ರಲ್ಲಿ ಹಳೆ ಮೈಸೂರಿನ ಕ್ಷೇತ್ರಗಳಲ್ಲಿ ಬಿಜೆಪಿ ಸರ್ವಬಲವನ್ನು ಬಳಸಿ ಹೋರಾಡಿತು.

ಈ ಹೋರಾಟದ ಫಲವಾಗಿ ಜೆಡಿಎಸ್ ಬಹುತೇಕ ಕಡೆ ಸೋತು ಸುಸ್ತಾಯಿತೇನೋ ನಿಜ. ಆದರೆ ಹೀಗೆ ಜೆಡಿಎಸ್‌ನ ಸೊಂಟ ಮುರಿಯುವಲ್ಲಿ ಯಶಸ್ವಿಯಾದರೂ ಬಿಜೆಪಿಗೆ ವೈಯಕ್ತಿಕವಾಗಿ ಲಾಭವಾಗಲಿಲ್ಲ. ಬದಲಿಗೆ ಜೆಡಿಎಸ್-ಬಿಜೆಪಿ ನಡುವೆ ಕಾಂಗ್ರೆಸ್ ವಿರೋಧಿ ಮತಗಳು ಹಂಚಿ ಹೋಗಿದ್ದರಿಂದ ಕಾಂಗ್ರೆಸ್ ಅದರ ಲಾಭ ಪಡೆಯಿತು.

ಬದಲಾದ 'ಐರನ್‌ಮ್ಯಾನ್' ಪ್ಲಾನು

ಹೀಗೆ ಹಳೆ ಮೈಸೂರಿನಲ್ಲಿ ಜೆಡಿಎಸ್ ಪಕ್ಷವನ್ನು ಹಣಿಯುವ ಪ್ಲಾನು ಯಾವಾಗ ಕಾಂಗ್ರೆಸ್ ಪಕ್ಷಕ್ಕೆ ಅನುಕೂಲ ಒದಗಿಸಿಕೊಟ್ಟಿತೋ, ಆಗ ಬಿಜೆಪಿಯ 'ಐರನ್‌ಮ್ಯಾನ್' ಅಮಿತ್ ಶಾ ಲೆಕ್ಕಾಚಾರ ಬದಲಾಯಿತು. ಅರ್ಥಾತ್, ಯಾವ ಜೆಡಿಎಸ್ ಪಕ್ಷವನ್ನು ಮುಗಿಸಿ ಮೇಲೇಳಲು ಅವರು ಬಯಸಿದ್ದರೋ, ಅದೇ ಪಕ್ಷದ ಜತೆ ಮೈತ್ರಿ ಸಾಧಿಸಿ ಕಾಂಗ್ರೆಸ್ ವಿರುದ್ಧ ಹೋರಾಡುವುದು ಆ ಪ್ಲಾನಾಗಿತ್ತು. ತಮ್ಮ ಈ ಪ್ಲಾನಿಗೆ ಪೂರಕವಾಗಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರನ್ನು ಬಳಸಿಕೊಂಡ ಅಮಿತ್ ಶಾ, ಅವರ ಮೂಲಕ ಜೆಡಿಎಸ್ ಜತೆ ಮೈತ್ರಿ ಸಾಧಿಸಿದರು ಮತ್ತು ಈ ಮೈತ್ರಿಯ ಫಲವಾಗಿ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಒಂದಷ್ಟು ಲಾಭವೂ ಆಯಿತು.

ಆದರೆ ಲೋಕಸಭೆ ಚುನಾವಣೆಯಲ್ಲಿ ಲಾಭವಾಯಿತು ಅಂತ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ದುರ್ಬಲವಾಗುವಂತೆ ಮಾಡಲು ಸಾಧ್ಯವಿಲ್ಲವಲ್ಲ? ಹೀಗಾಗಿ ಕರ್ನಾಟಕದಲ್ಲಿ ಬಿಜೆಪಿ ಸ್ವಯಂಬಲದಿಂದ 114 ಎಂಬ ಮ್ಯಾಜಿಕ್ ನಂಬರನ್ನು ತಲುಪಬೇಕು ಅಂತ ಅವರು ಬಯಸಿದ್ದಾರೆ. ಇವತ್ತು ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೆ ಸಿಗುತ್ತಿರುವ ಫುಲ್ಲು ಫ್ರೀಡಮ್ಮಿಗೆ ಇದೇ ಮುಖ್ಯ ಕಾರಣ. ಹೀಗಾಗಿ ಇವತ್ತು ಜೆಡಿಎಸ್ ಪಕ್ಷವನ್ನು ದೂರವಿಟ್ಟು ವಿಜಯೇಂದ್ರ ಆರಂಭಿಸಿರುವ ಜನಾಕ್ರೋಶ ಯಾತ್ರೆಯ ವಿರುದ್ಧ ಯಾರೆಷ್ಟೇ ದೂರು ಕೊಟ್ಟರೂ ಅಮಿತ್ ಶಾ ಅದನ್ನು ಪಕ್ಕಕ್ಕಿಡುವುದು ಗ್ಯಾರಂಟಿ

ಇವರಿಗೆ ಜೆಡಿಎಸ್ ಏಕೆ ಬೇಕು?

ಅಂದ ಹಾಗೆ, ವಿಜಯೇಂದ್ರ ಅವರಿಗೆ ಅಮಿತ್ ಶಾ ಫುಲ್ಲು ಸಪೋರ್ಟು ಕೊಡಲು ಮತ್ತೊಂದು ಕಾರಣವಿದೆ. ಅದೆಂದರೆ ರಾಜ್ಯ ಬಿಜೆಪಿಯ ಕೆಲ ನಾಯಕರಲ್ಲಿರುವ ಜೆಡಿಎಸ್ ಬಗೆಗಿನ ಪ್ರೀತಿ. ಈ ನಾಯಕರ ಪೈಕಿ ಬಹುತೇಕರು ಸಿಎಂ ಹುದ್ದೆಯ ಆಕಾಂಕ್ಷಿಗಳು. ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಅಧಿಕಾರ ಹಿಡಿದರೆ ಸಿಎಂ ಆಗುವ, ಇಲ್ಲವೇ ಕನಿಷ್ಠ ಪಕ್ಷ ಒಳ್ಳೆಯ ಖಾತೆಗಳನ್ನಾದರೂ ಪಡೆಯುವ ಲಕ್ಕು ತಮಗೆ ಸಿಗುತ್ತದೆ. ಆದರೆ ವಿಜಯೇಂದ್ರ ಅವರೇನಾದರೂ ರಾಜ್ಯಾಧ್ಯಕ್ಷ ಹುದ್ದೆಯಲ್ಲಿ ಸೆಟ್ಲಾಗಿ, ಪಕ್ಷ ಮ್ಯಾಜಿಕ್ ನಂಬರ್ ಗಿಟ್ಟಿಸಿದರೆ ತಾವು ಸೈಡ್‌ಲೈನಿಗೆ ಸರಿಯುವುದು ಗ್ಯಾರಂಟಿ ಎಂಬುದು ಈ ನಾಯಕರ ಆತಂಕ. ಹಾಗಂತಲೇ ವಿಜಯೇಂದ್ರ ಆರಂಭಿಸಿದ ಜನಾಕ್ರೋಶ ಯಾತ್ರೆ ಇವರಲ್ಲಿ ದಿಗಿಲು ಮೂಡಿಸಿದೆ ಮತ್ತು ಇಂಥ ದಿಗಿಲು ಕಂಪ್ಲೇಂಟುಗಳ ರೂಪದಲ್ಲಿ ವ್ಯಕ್ತವಾಗುತ್ತಿದೆ ಎಂಬುದು ಅಮಿತ್ ಶಾ ಅವರಿಗಿರುವ ರಿಪೋರ್ಟು.

ಲಾಸ್ಟ್ ಸಿಪ್: ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮೊನ್ನೆ ಕರ್ನಾಟಕಕ್ಕೆ ಬಂದಾಗ ಚಿಕ್ಕಪೇಟೆ ಕ್ಷೇತ್ರದ ಶಾಸಕ ಉದಯ ಗರುಡಾಚಾರ್ ಅವರಿಗೆ ಮುಖಾಮುಖಿಯಾಗಿದ್ದಾರೆ. ಅಂದ ಹಾಗೆ, ಉದಯ ಗರುಡಾಚಾರ್ ಅವರ ತಂದೆ ಹಾಗೂ ಪೊಲೀಸ್ ಮಹಾನಿರ್ದೇಶಕರಾಗಿದ್ದ ಬಿ.ಎನ್.ಗರುಡಾಚಾರ್ ಅವರು ಖರ್ಗೆಯವರಿಗೆ ಆಪ್ತರಾಗಿದ್ದವರು. ಹೀಗಾಗಿ ಸಹಜವಾಗಿಯೇ ಖರ್ಗೆಯವರೊಂದಿಗೆ ಉದಯ ಗರುಡಾಚಾರ್ ಅವರಿಗೆ ಉತ್ತಮ ಬಾಂಧವ್ಯವಿದೆ. ಈ ಬಾಂಧವ್ಯವನ್ನು ಬಳಸಿಕೊಂಡ ಉದಯ ಗರುಡಾಚಾರ್, ಮೊನ್ನೆ ಖರ್ಗೆಯವರೆದುರು ತಮ್ಮ ಸಂಕಟ ತೋಡಿಕೊಂಡರಂತೆ- ''ಸರ್, ಈ ಬಿಜೆಪಿಯ ಸಹವಾಸವೇ ಸಾಕಾಗಿದೆ, ಕಾಂಗ್ರೆಸ್ಸಿಗೆ ಬರಲು ನಾನು ತಯಾರಿದ್ದೇನೆ. ಹೀಗಾಗಿ ನನ್ನ ದಾರಿಯನ್ನು ಸಾಫ್ ಮಾಡಿ'' ಅಂತ ಅವರು ಹೇಳಿದಾಗ ಅಲ್ಲಿದ್ದವರೆಲ್ಲ ಬೆಚ್ಚಿ ಬಿದ್ದಿದ್ದಾರೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನೆಲ ಡೊಂಕು ಅಂದರಂತೆ!

ನಾವು ಮೊದಲೆರಡು ಪಂದ್ಯಗಳಿಗೆ ಬ್ಯಾಟಿಂಗ್ ಪಿಚ್ ಸಿದ್ಧಪಡಿಸಲು ಕೇಳಿದ್ದೆವು, ಆದರೆ ಬ್ಯಾಟಿಂಗ್‌ಗೆ ಸವಾಲೊಡ್ಡುವಂಥ ಪಿಚ್ ಸಿದ್ಧಪಡಿಸಿದ್ದಾರೆ. ಹೀಗಾಗಿ ತವರಿನಂಗಳದ ಲಾಭ ನಮಗೆ ಸಿಗಲಿಲ್ಲ' ಎಂದಿದ್ದಾರೆ ಆರ್‌ಸಿಬಿ ತಂಡದ ಮೆಂಟರ್ ದಿನೇಶ್ ಕಾರ್ತಿಕ್. ಇದು, 'ಕುಣಿಯೋಕೆ ಬರದವರು ನೆಲ ಡೊಂಕು ಅಂದರಂತೆ' ಎಂಬ ಮಾತನ್ನು ನೆನಪಿಸುತ್ತದೆ. ಆರ್‌ಸಿಬಿ ತಂಡವು ತವರಿನಲ್ಲಿ ಗುಜರಾತ್ ಮತ್ತು ಡೆಲ್ಲಿ ತಂಡಗಳ ಜತೆಗೆ ಆಡಿದ 2 ಪಂದ್ಯಗಳಲ್ಲಿ ಸೋತಿದೆ. ಅದ್ಭುತವಾಗಿ ಆಡಿ ಜಯಗಳಿಸಿದ ಆ ಎರಡು ತಂಡಗಳಿಗೆ ಪ್ರತ್ಯೇಕ ಪಿಚ್ ಸಿದ್ಧಪಡಿಸಿರಲಿಲ್ಲ, ಅದರಲ್ಲೇ ಅವು ಆಡಿ ಗೆದ್ದಿರುವಾಗ ಆರ್‌ಸಿಬಿ ತಂಡಕ್ಕೆ ಆಗಲಿಲ್ಲವೇಕೆ? ಅದರಲ್ಲೂ, ಡೆಲ್ಲಿ ತಂಡದ ಆಟಗಾರ ನಮ್ಮ ಕನ್ನಡಿಗ ಕೆ.ಎಲ್.ರಾಹುಲ್ ಔಟಾಗದೆ 93 ರನ್ ಗಳಿಸಿದ್ದು ಗಮನಾರ್ಹ. ಹಾಗಾಗಿ ದಿನೇಶ್ ಕಾರ್ತಿಕ್ ಹೀಗೆ ಹೇಳಿಕೆ ನೀಡಿದ್ದು ತರವಲ್ಲ. 'ಆಟವೆಂದರೆ ಸೋಲು ಮತ್ತು ಗೆಲುವು ಇರುವಂಥದ್ದೇ. ನಮ್ಮ ತಂಡ ಚೆನ್ನಾಗಿ ಆಡಲಿಲ್ಲ, ಮುಂದಿನ ಪಂದ್ಯಗಳಲ್ಲಿ ನಮ್ಮ ತಪ್ಪುಗಳನ್ನು ತಿದ್ದಿಕೊಂಡು ಗೆಲ್ಲುತ್ತೇವೆ' ಎಂದು ಹೇಳಿದ್ದರೆ ಅವರ ಕುರಿತಾದ ಗೌರವ ಹೆಚ್ಚುತ್ತಿತ್ತು.

- ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಅಣ್ಣಾಮಲೈ ಮಾದರಿಯಾಗಲಿ

ರಾಜಕಾರಣಿಗಳ ತಾಳಕ್ಕೆ ತಕ್ಕಂತೆ ಕುಣಿಯದೆ ಸ್ವಂತಿಕೆ ಉಳಿಸಿಕೊಂಡ ಅಣ್ಣಾಮಲೈ, ಇಲಾಖೆಯ ನೀತಿ ನಿಯಮಗಳಿಗೆ ಅನುಸಾರವಾಗಿ ಒಬ್ಬ ಅಧಿಕಾರಿಯಾಗಿ ಕೆಲಸ ಮಾಡಿದವರು. ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆಯಿಂದ ಹಗಲಿರುಳೂ ದುಡಿದು ಜನಮೆಚ್ಚುಗೆ ಗಳಿಸಿದವರು, ಅಧಿಕಾರಿಗಳಿಗೆ ಒಂದು ಮಾದರಿಯಾದವರು. ಇಂದಿನ ರಾಜಕೀಯದಲ್ಲಿನ

ಅಧಿಕಾರದಾಹ, ಲಂಚ ಇವುಗಳನ್ನು ನಿಯಂತ್ರಿಸಬೇಕು, ಆಡಳಿತವು ಪ್ರಜಾಪ್ರಭುತ್ವದ ಆಶಯಕ್ಕೆ ಅನುಗುಣವಾಗಿರಬೇಕೆಂಬ ಉದ್ದೇಶದಿಂದ ರಾಜಕೀಯಕ್ಕೆ ಧುಮುಕಿದವರು. ತಮಿಳುನಾಡಿನಲ್ಲಿ ಅಸ್ತಿತ್ವವೇ ಇಲ್ಲದ ಬಿಜೆಪಿಯು ಅಲ್ಲಿ ಬೆಳೆಯಲು ಭದ್ರಬುನಾದಿ ಹಾಕಿದವರು. ಕೆಲ ಕಾಲದಲ್ಲೇ ಅಲ್ಲಿನ ಜನರ ಮನಗೆದ್ದು ರಾಜಕೀಯ ವಲಯದಲ್ಲಿ ಮುಂಚೂಣಿಯಲ್ಲಿ ಮಿಂಚಿದವರು. ಇಷ್ಟಾಗಿಯೂ 'ನಾನೇ ದೊಡ್ಡವ' ಎಂಬ ಅಹಂ ಅನ್ನು ಅವರು ಬೆಳೆಸಿಕೊಳ್ಳಲಿಲ್ಲ.

ಆದರೀಗ, ತಮಿಳುನಾಡಿನಲ್ಲಿ ಎಐಎಡಿಎಂಕೆ ಜತೆಗಿನ ಮೈತ್ರಿಯು ಅನಿವಾರ್ಯವಾಗಿರುವುದನ್ನು ಅವರು ಅರ್ಥಮಾಡಿಕೊಂಡು, ಪಕ್ಷದ ಹಿತದೃಷ್ಟಿಯಿಂದ ಅಧ್ಯಕ್ಷ ಸ್ಥಾನವನ್ನು ತ್ಯಜಿಸಿದ್ದು ಒಂದು ಅಪರೂಪದ ಪ್ರಸಂಗ. ತಮ್ಮಿಂದಲೇ ಪಕ್ಷ ಎಂಬ ಭ್ರಮೆ ಇವರಿಗಿಲ್ಲ ಎಂಬುದಕ್ಕೆ ಇದು ಸಾಕ್ಷಿ. ದೇಶದ ಇತರೆಡೆಗಳ ರಾಜಕಾರಣಿಗಳಂತೆ, ಸ್ಥಾನ/ಅಧಿಕಾರ ಸಿಗದಿದ್ದಾಗ ಇನ್ನೊಂದು ಪಕ್ಷ ಸ್ಥಾಪಿಸಿ ಅಧಿಕಾರಕ್ಕೆ ಬರಲು ತವಕಿಸುವ ಅವಕಾಶವಾದಿಯಾಗಲಿಲ್ಲ ಅಣ್ಣಾಮಲೈ. ಅವರ ಸೇವೆ-ಸಾಧನೆ-ತ್ಯಾಗವನ್ನು ಮನದುಂಬಿ ಹೊಗಳಿರುವ ಹೈಕಮಾಂಡ್, ಅವರಿಗೆ ಇನ್ನೂ ಹೆಚ್ಚಿನ ಜವಾಬ್ದಾರಿ ಕೊಟ್ಟು ರಾಷ್ಟ್ರದ ಪ್ರಮುಖ ರಾಜಕಾರಣಿಯಾಗಿ ಮಿಂಚಲು ವೇದಿಕೆ ಕಲ್ಪಿಸಲಿ ಎನ್ನುವುದೇ ಸಹೃದಯಿಗಳ ನಿರೀಕ್ಷೆ ಮತ್ತು ಆಶಯ.

- ಸತ್ಯಬೋಧ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಯುನುಸ್ ತಾತ ಮತ್ತು ಸಪ್ತ ಸೋದರಿಯರು

ಕಟ್ಟೆ ಪಂಚಾಯ್ತಿ
ತಿಮ್ಮಣ್ಣ ಭಾಗ್ವತ್
vveditoped@gmail.com

ಸೆವೆನ್ ಸಿಸ್ಟರ್ಸ್ ಎನ್ನಲಾಗುವ ಈಶಾನ್ಯ ಭಾರತದ 7 ರಾಜ್ಯಗಳು ಭೂಮಿಯಿಂದ ಆವೃತವಾಗಿವೆ (Land Locked). ಅವುಗಳ ಸಾಗರ ಸಂಪರ್ಕಕ್ಕೆ ನಮ್ಮ ದೇಶವೇ ಗತಿ. ಆದ್ದರಿಂದ ಆ ಪ್ರದೇಶವು ಚೀನಾದ ಆರ್ಥಿಕತೆಯ ವಿಸ್ತರಣೆಗೆ ದೊಡ್ಡ ಅವಕಾಶ. ಅದೊಂದು ನಿಮ್ಮ ದೊಡ್ಡ ಉತ್ಪಾದನಾ ಕೇಂದ್ರವಾಗಬಹುದು''- ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಖ್ಯಸ್ಥರಾಗಿರುವ 85 ವರ್ಷದ ಮೊಹಮ್ಮದ್ ಯುನುಸ್ ತಮ್ಮ ಚೀನಾ ಭೇಟಿಯ ವೇಳೆ ನೀಡಿದ ಪ್ರಚೋದನಕಾರಿ ಹೇಳಿಕೆಯಿದು. ಆಂತರಿಕ ಕ್ಷೋಭೆ, ಅತ್ಯಧಿಕ ಸಾಲ, ಆರ್ಥಿಕ ದಿವಾಳಿತನ, ರಾಜಕೀಯ ಅನಿಶ್ಚಿತತೆ ಹಾಗೂ ವ್ಯಾಪಕ ಹಿಂಸಾಚಾರಗಳಿಂದ ಕಂಗಾಲಾಗಿರುವ ಬಾಂಗ್ಲಾ ಆರ್ಥಿಕ ನೆರವಿಗಾಗಿ ಚೀನಾವನ್ನು ಅಂಗಲಾಚುತ್ತಿದೆ. ಭಾರತದ ಭೂಭಾಗವನ್ನು ಅತಿಕ್ರಮಿಸಲು ಪರೋಕ್ಷ ಪ್ರಚೋದನೆ ನೀಡುವ ಮೂಲಕ ಚೀನಾವನ್ನು ಓಲೈಸುತ್ತಿರುವ ಯುನುಸ್‌ರ ಹೊಸ ಆಡಳಿತವು, ಬಾಂಗ್ಲಾ ವಿಮೋಚನೆಯ ಸಂಗ್ರಾಮದಲ್ಲಿ ಭಾರತ ನೀಡಿದ ಬೆಂಬಲವನ್ನು ಮರೆತಂತಿದೆ.

ಈಶಾನ್ಯ ಭಾರತದ ಅರುಣಾಚಲಪ್ರದೇಶ, ಅಸ್ಸಾಂ, ಮೇಘಾಲಯ, ತ್ರಿಪುರ, ಮಣಿಪುರ, ಮಿಜೋರಾಂ ಮತ್ತು ನಾಗಾಲ್ಯಾಂಡ್ ರಾಜ್ಯಗಳನ್ನು 'ಸೆವೆನ್ ಸಿಸ್ಟರ್ಸ್' ಎನ್ನಲಾಗುತ್ತದೆ. ಉತ್ತರದಲ್ಲಿ ಭೂತಾನ್, ನೇಪಾಳ ಮತ್ತು ಚೀನಾ, ಪೂರ್ವದಲ್ಲಿ ಮ್ಯಾನ್ಮಾರ್, ದಕ್ಷಿಣ ಮತ್ತು ಪಶ್ಚಿಮದಲ್ಲಿ ಬಾಂಗ್ಲಾದ ಗಡಿಯಿಂದ ಆವೃತವಾಗಿರುವ ಈ ಪ್ರದೇಶಕ್ಕೆ ಕೇವಲ 20-22 ಕಿ.ಮೀ. ಅಗಲದ ಸಿಲಿಗುರಿ ಕಾರಿಡಾರ್ ಎಂಬ ದಾರಿಯ ಮೂಲಕ ಮಾತ್ರ ದೇಶದ ಮುಖ್ಯಭಾಗದ ಸಂಪರ್ಕವಿದೆ. 'ಕೋಳಿಯ ಕತ್ತು' (Chiken-neck) ಎನ್ನಲಾಗುವ ಪಶ್ಚಿಮ ಬಂಗಾಳದ ಈ ಪ್ರದೇಶವು, ಉತ್ತರದ ನೇಪಾಳ ಮತ್ತು ಭೂತಾನ್ ಹಾಗೂ ದಕ್ಷಿಣದ ಬಾಂಗ್ಲಾದ ನಡುವೆ ಸ್ಯಾಂಡ್‌ವಿಚ್‌ನಂತೆ ಆಗಿದೆ. ಅತ್ಯಂತ ಕಿರಿದಾದ ಈ ಪ್ರದೇಶವೇನಾದರೂ ಚೀನಾದ ವಶವಾದರೆ ನಮ್ಮ ಈಶಾನ್ಯ ರಾಜ್ಯಗಳು ಭಾರತದ ಮುಖ್ಯಭಾಗದ ಸಂಪರ್ಕವನ್ನು ಪೂರ್ತಿಯಾಗಿ ಕಳೆದುಕೊಳ್ಳುತ್ತವೆ. ಈ ಚಿಕನ್-ನೆಕ್‌ನ ಮಹತ್ವ 1962ರ ಭಾರತ-ಚೀನಾ ಯುದ್ಧದ ವೇಳೆ ಗಮನಕ್ಕೆ ಬಂದ ನಂತರ ಭಾರತೀಯ ಸೇನೆ ಇದನ್ನು ಅತಿ ಆಯಕಟ್ಟಿನ ಸೂಕ್ಷ್ಮ ರಕ್ಷಣಾ ಪ್ರದೇಶ ಎಂದು ಪರಿಗಣಿಸುತ್ತಿದೆ. ಇತ್ತೀಚಿನ ಡೋಕ್ಲಾಂ ಸಂಘರ್ಷದ ಸಮಯದಲ್ಲೂ ಈ ಚಿಕನ್-ನೆಕ್ ಮಹತ್ವ ಪಡೆಯಿತು. ಭಾರತದ ಗಡಿ ಪ್ರದೇಶದ ಪ್ರತಿಯೊಂದು ಸೂಕ್ಷ್ಮ ವಿಷಯಗಳ ಪೂರ್ತಿ ಅರಿವಿರುವ ಚೀನಾಕ್ಕೆ ಇದು ತಿಳಿಯದ ವಿಷಯವೇನಲ್ಲ. ಹಿಂದೂ ಮಹಾಸಾಗರದ ಆಯಕಟ್ಟಿನ ಸ್ಥಳದಲ್ಲಿರುವ ಬಾಂಗ್ಲಾವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಚೀನಾದ ಪ್ರಯತ್ನಗಳಿಗೆ ಭಾರತದ ಪರ ಒಲವಿದ್ದ ಪ್ರಧಾನಿ ಬೇಗಂ ಶೇಖ್ ಹಸೀನಾ ಅವಕಾಶ ನೀಡಿರಲಿಲ್ಲ. ಆದರೆ ಅಗಸ್ಟ್ 2024ರಲ್ಲಿ ವಿದ್ಯಾರ್ಥಿ ಚಳವಳಿ ಹೆಸರಿನಲ್ಲಿ ನಡೆದ ವ್ಯಾಪಕ ಹಿಂಸಾಚಾರ, ದೊಂಬಿ, ಅವಾಮಿ ಲೀಗ್ ಸದಸ್ಯರ ಹಾಗೂ ಹಿಂದೂಗಳ ಮೇಲೆ ನಡೆದ ಹಲ್ಲೆ ಮುಂತಾದ ಘಟನೆಗಳ ಪರಿಣಾಮವಾಗಿ ಶೇಖ್ ಹಸೀನಾ ರಾಜೀನಾಮೆ ನೀಡಿ ಭಾರತದಲ್ಲಿ ಆಶ್ರಯ ಪಡೆದರು. ನಂತರ ರಚನೆಯಾದ ಮಧ್ಯಂತರ ಸರಕಾರಕ್ಕೆ ಯುನುಸ್‌ರವರ ನೇಮಕ, ಚೀನಾ ಭೇಟಿ ವೇಳೆಗೆ ಅವರಿಗೆ ದೊರೆತ ಸ್ವಾಗತ, ಎರಡು ದೇಶಗಳ ನಡುವೆ ಆದ ಅನೇಕ ಒಡಂಬಡಿಕೆಗಳು ಹಾಗೂ ಅವರು ಅಲ್ಲಿ ನೀಡಿದ ಭಾರತ ವಿರೋಧಿ ಪ್ರಚೋದನಾತ್ಮಕ ಹೇಳಿಕೆಗಳನ್ನು ಒಟ್ಟಾಗಿ ಗಮನಿಸಿದರೆ ಈ ಪೂರ್ವನಿಯೋಜಿತ ಗಲಭೆಗಳ ಸಂಚಿನ ಎಲ್ಲ ಪಾತ್ರಧಾರಿಗಳ ಪರಿಚಯವಾಗುತ್ತದೆ. ನಮ್ಮ ನೆರೆರಾಷ್ಟ್ರದಲ್ಲಿ ಭಾರತಕ್ಕೆ ಅಪಾಯಕಾರಿಯಾಗಬಲ್ಲ ಇಷ್ಟೊಂದು ದೊಡ್ಡ ಪ್ರಮಾಣದ ಸಂಚು ನಡೆಯುವ ಸುಳಿವು ನಮ್ಮ ಗುಪ್ತಚರ ವ್ಯವಸ್ಥೆಗೆ ತಿಳಿದಿರಲಿಲ್ಲವೆಂದಾದರೆ ಅದೊಂದು ದೊಡ್ಡ ವೈಫಲ್ಯವೆಂದೇ ಹೇಳಬೇಕಾಗುತ್ತದೆ. ಶೇಖ್ ಹಸೀನಾರಿಗೂ ಬಹುಶಃ ಇದರ ಸುಳಿವು ದೊರೆತಿರಲಿಕ್ಕಿಲ್ಲ.

ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರ ಎಂಬ ಆಧಾರದಲ್ಲಿ ದೇಶ ವಿಭಜನೆಯಾಗುವಾಗ, ಮುಸ್ಲಿಂ ಬಾಹುಳ್ಯವಿರುವ ಭಾಗಗಳು ಮಾತ್ರ ಪಾಕಿಸ್ತಾನಕ್ಕೆ ಸೇರಬೇಕಾಗಿತ್ತು. ಬೌದ್ಧರು ಮತ್ತು ಮುಸ್ಲಿಮೇತರ ಗುಡ್ಡಗಾಡು ಜನರೇ ಅಧಿಕವಾಗಿದ್ದ (97%) ಚಿತ್ತಗಾಂಗ್ ಮತ್ತು ಸುತ್ತಲಿನ ಪ್ರದೇಶಗಳು ವಿಭಜನೆಯ ಮೂಲತತ್ವಗಳ ಪ್ರಕಾರ ಭಾರತಕ್ಕೇ ಸೇರಬೇಕಿತ್ತು. ಅಲ್ಲಿನ ಚಕ್ಮಾ ಮತ್ತು ಇತರ ಗುಡ್ಡಗಾಡು ಜನರು ಕೂಡಾ ಇದನ್ನೇ ಬಯಸಿದ್ದರು. ಅಲ್ಲಿನ ಮುಖಂಡರಿಗೆ ಕಾಂಗ್ರೆಸ್ಸಿನ ನಾಯಕರಿಂದ ಚಿತ್ತಗಾಂಗ್ ಭಾರತಕ್ಕೆ ಸೇರುವುದೆಂಬ ಆಶ್ವಾಸನೆಯೂ ಸಿಕ್ಕಿತ್ತು. ಇದನ್ನು ನಂಬಿದ ಅವರು 1947ರ ಅಗಸ್ಟ್ 15ರಂದು ತ್ರಿವರ್ಣ ಧ್ವಜವನ್ನು ಹಾರಿಸಿದರು. ಆದರೆ ದೇಶ ವಿಭಜನೆಯ ಗಡಿರೇಖೆಗಳನ್ನು ನಿರ್ಣಯಿಸಲು ನಿಯುಕ್ತರಾದ ಬ್ರಿಟಿಷ್ ಅಧಿಕಾರಿ ಭಾರತಕ್ಕೆ ಕಲ್ಕತ್ತಾ ಬಂದರು ನೀಡಿದ್ದಕ್ಕೆ ಪ್ರತಿಯಾಗಿ ಚಿತ್ತಗಾಂಗನ್ನು ಬಾಂಗ್ಲಾಕ್ಕೆ ನೀಡಿದರಂತೆ. ಇದನ್ನು ಆಕ್ಷೇಪಿಸಲು ಚಿತ್ತಗಾಂಗ್ ಗುಡ್ಡಗಾಡು ಪ್ರದೇಶದ ಯಾವ ಸದಸ್ಯರೂ ಗಡಿರೇಖೆ ಗುರುತಿಸುವ ಸಮಿತಿಯಲ್ಲಿ ಇರಲಿಲ್ಲ. ಚಕ್ಮಾ ಪಂಗಡದ ನಾಯಕರು ಪುನಃ ದೆಹಲಿಗೆ ಭೇಟಿ ನೀಡಿದಾಗ ಅವರಿಗೆ ಭಾರತ ಸರಕಾರದಿಂದ ಅಗತ್ಯ ಸ್ಪಂದನೆ ಸಿಗಲಿಲ್ಲ. ಕೊನೆಗೂ ಚಿತ್ತಗಾಂಗ್ ಪಾಕಿಸ್ತಾನಕ್ಕೆ ಸೇರುವಂತಾದದ್ದು ದೊಡ್ಡ ಐತಿಹಾಸಿಕ ಪ್ರಮಾದ. ಚಿತ್ತಗಾಂಗ್ ಗುಡ್ಡಗಾಡು ಪ್ರದೇಶ ಅಸ್ಸಾಮಿನ ದಕ್ಷಿಣಕ್ಕಿದ್ದು ಬಂಗಾಲಕೊಲ್ಲಿಯವರೆಗೂ ಭಾರತದ ಭೂಭಾಗಕ್ಕೆ ಅಂಟಿಕೊಂಡಿದೆ. ಪ್ರಮುಖ ಚಿತ್ತಗಾಂಗ್ ಬಂದರು ಸೇರಿದಂತೆ ಈ ಪ್ರಾಂತ್ಯ ಆಸ್ಸಾಂಗೆ ಸೇರಿದ್ದರೆ ಹೊರಜಗತ್ತಿನ ಸಂಪರ್ಕಕ್ಕಾಗಿ ಬಾಂಗ್ಲಾದ ಮೇಲೆ ಅವಲಂಬನೆ ಇರುತ್ತಿರಲಿಲ್ಲ. ದೇಶ ವಿಭಜನೆಯ ಹಂತದಲ್ಲಿ ಆದ ಈ ಪ್ರಮಾದವನ್ನು ಸರಿಮಾಡಲು 1971ರ ಬಾಂಗ್ಲಾ ವಿಮೋಚನೆಯ ನಂತರವಾದರೂ ಯತ್ನಿಸಬಹುದಿತ್ತು. ಯುದ್ಧ ಜಯಿಸಿದ ಸಂಭ್ರಮದಲ್ಲಿ ಬಹುಶಃ ಭಾರತ ಈ ಮಹತ್ವದ ಸಂಗತಿಯನ್ನು ಕಡೆಗಣಿಸಿತು. ಪರಿಣಾಮ, ನಾವೇ ಸಾಕಿದ ಗಿಣಿ ಹದ್ದಾಗಿ ಈಗ ನಮ್ಮನ್ನೇ ಕುಕ್ಕುವ ಯತ್ನದಲ್ಲಿದೆ!

ದಿವಾಳಿಯ ಹಂತ ತಲುಪಿರುವ ಬಾಂಗ್ಲಾ, ಆರ್ಥಿಕ ನೆರವು ಪಡೆಯಲೆಂದು ಚೀನಾದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ. ಧಾರ್ಮಿಕ ಸಿದ್ಧಾಂತದ ಕಾರಣಕ್ಕೆ, ಮೂಲಭೂತವಾದಿ ಪಾಕಿಸ್ತಾನದ ಜತೆಗಿನ ಹಿಂದಿನ ವೈರ ಮರೆತು ಭಾರತ-ವಿರೋಧಿ ಕಾರ್ಯತಂತ್ರದಲ್ಲಿ ಕೈಜೋಡಿಸಲು ಮುಂದಾಗಿದೆ. ಭೌಗೋಳಿಕವಾಗಿ ಬಂಗಾಲ ಕೊಲ್ಲಿಯ ಆಯಕಟ್ಟಿನ ಜಾಗದಲ್ಲಿ ಬಂದರುಗಳನ್ನು ಹೊಂದಿರುವ ಬಾಂಗ್ಲಾ, ಚೀನಾದ ಜತೆ ಸೇರಿದರೆ ಭಾರತದ ಭದ್ರತೆಗೆ ಗಂಭೀರ ಬೆದರಿಕೆ ಒಡ್ಡಬಹುದು. ಈಗಾಗಲೇ ಸಿಲಿಗುರಿ ಕಾರಿಡಾರ್‌ನ ಸಮೀಪ ಉತ್ತರದಲ್ಲಿ ಚೀನಾ ತನ್ನ ವಾಯುನೆಲೆಯನ್ನು ಸ್ಥಾಪಿಸಿದೆ. ಚೀನಾದ ಆರ್ಥಿಕ-ತಾಂತ್ರಿಕ ಸಹಾಯದಿಂದ ಬಾಂಗ್ಲಾದ ಮಾತಬರ್ಾರಿ ಮತ್ತು ಮೋಂಗ್ಲಾ ಬಂದರುಗಳನ್ನು ನೌಕಾಬಲದ ಕಾರ್ಯಾಚರಣೆಗೂ ಸೂಕ್ತವಾಗುವಂತೆ ಅಭಿವೃದ್ಧಿಪಡಿಸಲಾಗುತ್ತಿದೆ ಮತ್ತು ಇವನ್ನು ಉಪಯೋಗಿಸಲು ಚೀನಾಕ್ಕೆ ಮುಕ್ತ ಅವಕಾಶ ನೀಡಲಾಗುತ್ತಿದೆ. ಭಾರತದ ಪೂರ್ವ ಕರಾವಳಿ ಮತ್ತು ಸಿಲಿಗುರಿ ಕಾರಿಡಾರಿಗೆ ಅತಿ ಸಮೀಪವಿರುವ ಈ ಬಂದರುಗಳಲ್ಲಿ ಚೀನಾದ ನೌಕಾಬಲ ನೆಲೆ ನಿಲ್ಲಲಿದೆ. ಅಲ್ಲದೆ ಸಿಲಿಗುರಿ ಕಾರಿಡಾರಿಗೆ ಸಮೀಪವಿರುವ ಬಾಂಗ್ಲಾದ ಲಾಲ್ ಮೊನಿರ್ಹಾಟ್ ಎಂಬಲ್ಲಿ ಚೀನಾದ ನೆರವಿನಿಂದ ವಾಯುನೆಲೆ ಸ್ಥಾಪಿಸಲಾಗುತ್ತಿದೆ. ಸಾಲದೆಂಬಂತೆ ತೀಸ್ತಾ ನದಿಗೆ ಚಿಕನ್-ನೆಕ್ ಪ್ರದೇಶದಿಂದ ಕೇವಲ 100 ಕಿ.ಮೀ.ಗಿಂತ ಕಡಿಮೆ ಅಂತರದಲ್ಲಿ ಅಣೆಕಟ್ಟು ನಿರ್ಮಿಸುವ ಕಾಮಗಾರಿಯನ್ನು ಚೀನಾಕ್ಕೆ ವಹಿಸಲಾಗುತ್ತಿದೆ. ಈ ಎಲ್ಲ ಬೆಳವಣಿಗೆಗಳಿಂದ ಆ ಪ್ರದೇಶದ ಭದ್ರತೆಗೆ ಅಪಾಯವೆಂಬ ಆತಂಕ ಎದುರಾಗಿದೆ. ಬಾಂಗ್ಲಾದಲ್ಲಿ ಚೀನಾ ಹೂಡಿರುವ 2.1 ಬಿಲಿಯನ್ ಡಾಲರ್ ದಾನವಲ್ಲ. ಬದಲಾಗಿ ಆ ದೇಶವನ್ನು ಸಾಲದ ಸುಳಿಯಲ್ಲಿ ಸಿಲುಕಿಸಿ ತನ್ನ ಕಾರ್ಯತಂತ್ರಕ್ಕೆ ಬೇಕಾದಂತೆ ಉಪಯೋಗಿಸುವ ಹುನ್ನಾರ. ಪಾಕಿಸ್ತಾನ ಮತ್ತು ಶ್ರೀಲಂಕಾ ಈಗಾಗಲೇ ಸಾಲದ ಸುಳಿಯೊಳಗೆ ಸಿಲುಕಿವೆ. ಬಾಂಗ್ಲಾದ ಆರ್ಥಿಕತೆಯಲ್ಲಿ ಚೀನಾದ ಆಟವು ಯುನುಸ್‌ರ ಭೇಟಿಯ ನಂತರ ಇನ್ನೂ ಹೆಚ್ಚಲಿದೆ. ಸದ್ಯದಲ್ಲೇ, 100ಕ್ಕೂ ಹೆಚ್ಚು ಉದ್ಯಮಿಗಳ ನಿಯೋಗದೊಂದಿಗೆ ಚೀನಾದ ವಿದೇಶಾಂಗ ಸಚಿವರು ಬಾಂಗ್ಲಾಕ್ಕೆ ಭೇಟಿ ನೀಡಲಿದ್ದಾರೆ ಎನ್ನಲಾಗಿದೆ. ಇತ್ತ ಪಾಕಿಸ್ತಾನದ ಉನ್ನತ ಮಟ್ಟದ ಸೈನಿಕ, ಔದ್ಯಮಿಕ ಹಾಗೂ ರಾಜಕೀಯ ನಾಯಕರುಗಳು ಬಾಂಗ್ಲಾಕ್ಕೆ ಭೇಟಿ ನೀಡುತ್ತಿದ್ದಾರೆ. ಪಾಕ್‌ನ ಸೇನೆಯ ಮೇಜರ್ ಜನರಲ್ ಒಬ್ಬರು ಐಎಸ್‌ಐ ತಂಡದೊಂದಿಗೆ ಇತ್ತೀಚೆಗೆ ಢಾಕಾಕ್ಕೆ ನೀಡಿದ ಭೇಟಿ, ಬೇಹುಗಾರಿಕೆ ಮತ್ತು ಜಂಟಿ ಸೈನಿಕ ಕಾರ್ಯತಂತ್ರದ ಭಾಗವಾಗಿದೆ ಎಂಬುದು ಸ್ಪಷ್ಟ. ಬಾಂಗ್ಲಾದ ಸೈನ್ಯಕ್ಕೆ ಆಧುನಿಕ ಶಸ್ತ್ರಾಸ್ತ್ರಗಳ ತರಬೇತಿ ನೀಡಲು ಪಾಕ್ ಸೇನೆ ಸಿದ್ಧವಾಗಿದೆ. ರೊಹಿಂಗ್ಯಾ ಸಮಸ್ಯೆ, ಮಣಿಪುರದ ಕುಕಿ-ನಾಗಾ ಸಮಸ್ಯೆ, ಚಕ್ಮಾ ನಿರ್ವಸಿತರ ಸಮಸ್ಯೆ ಇವೆಲ್ಲದರ ಜತೆ ಬಾಂಗ್ಲಾದಿಂದ ಅಕ್ರಮ ನುಸುಳುವಿಕೆಯ ಸಮಸ್ಯೆಗಳೆಲ್ಲವುಗಳ ಹಿಂದೆ ಬಾಂಗ್ಲಾ-ಚೀನಾಗಳ ಸಕ್ರಿಯ ಪಾತ್ರವಿರುವ ಶಂಕೆಗೆ ಕಾರಣಗಳಿವೆ. ಯುನುಸ್‌ರ ಹೇಳಿಕೆ ಈಶಾನ್ಯ ರಾಜ್ಯಗಳಲ್ಲಿ ಸಂಚಲನವನ್ನು ಸೃಷ್ಟಿಸಿದೆ. ತ್ರಿಪುರಾದ ರಾಜವಂಶದ ಪ್ರದ್ಯೋತ ಕಿಶೋರ್ ದೆಬ್ಬರ್ಮಾ, ಬಾಂಗ್ಲಾವನ್ನು ಒಡೆದು ಹಿಂದೂಗಳಿಗೆ ಪ್ರತ್ಯೇಕ ರಾಷ್ಟ್ರ ನಿರ್ಮಿಸುವ ತಾಕತ್ತು ಭಾರತಕ್ಕಿದೆ ಎಂದಿದ್ದಾರೆ. ಆಸ್ಸಾಮಿನ ಮುಖ್ಯಮಂತ್ರಿ ಹಿಮಂತ ಬಿಶ್ವಾಸ್ ಶರ್ಮ, ಯುನುಸ್‌ರ ಹೇಳಿಕೆಯನ್ನು ಆಕ್ರಮಣಕಾರಿ ಎಂದು ಖಂಡಿಸಿದ್ದಾರೆ.

ಥಾಯ್ಲೆಂಡ್‌ನಲ್ಲಿ BIMSTEC ಸಭೆಯ ವೇಳೆ ನಡೆದ ಭೇಟಿಯಲ್ಲಿ ಮೋದಿಯವರು ಬಾಂಗ್ಲಾದಲ್ಲಿ ನಡೆದ ಹಿಂಸಾಚಾರ ಮತ್ತು ಯುನೂಸ್‌ರ ಪ್ರಚೋದನಾತ್ಮಕ ಹೇಳಿಕೆಗಳ ಕುರಿತಾದ ಭಾರತದ ಕಳವಳವನ್ನು ಸ್ಪಷ್ಟವಾಗಿ ಹೇಳಿದರು. ಆದರೆ ಬಾಂಗ್ಲಾದ ಪ್ರತಿಕ್ರಿಯೆಯು ಭಾರತದ ಜತೆಗಿನ ಸಂಬಂಧ ಸುಧಾರಣೆಗೆ ಪೂರಕವಾಗಿರಲಿಲ್ಲವೆನ್ನಲಾಗಿದೆ. ಹಿಂದೂ ಮಹಾಸಾಗರದ 6500 ಕಿ.ಮೀ.ನಷ್ಟು ಉದ್ದದ ಕರಾವಳಿ ಮತ್ತು ಅನೇಕ ಬಂದರುಗಳನ್ನು ಹೊಂದಿರುವ ಭಾರತ ತನ್ನ ರಕ್ಷಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈಶಾನ್ಯ ರಾಜ್ಯಗಳನ್ನು ಮ್ಯಾನ್ಮಾರ್ ಮೂಲಕ ಥಾಯ್ಲೆಂಡ್‌ಗೆ ಸಂಪರ್ಕಿಸುವ 1360 ಕಿ.ಮೀ. ಉದ್ದದ ಹೆದ್ದಾರಿಯ ನಿರ್ಮಾಣ ಪ್ರಗತಿಯಲ್ಲಿದೆ. ಅದು ಪೂರ್ತಿಯಾದಾಗ ಈಶಾನ್ಯ ರಾಜ್ಯಗಳು ಏಷ್ಯಾದ ಪ್ರಮುಖ ಕೈಗಾರಿಕಾ ಕೇಂದ್ರಗಳಾಗುತ್ತವೆ. ಅಲ್ಲದೆ ಮ್ಯಾನ್ಮಾರಿನ ಸಿತ್ವೆ ಬಂದರನ್ನು ಭಾರತ ಅಭಿವೃದ್ಧಿ ಪಡಿಸುತ್ತಿದ್ದು ಅದು ಈಶಾನ್ಯ ಭಾರತದ ಮುಖ್ಯ ಸಂಪರ್ಕ ಕೇಂದ್ರವಾಗಲಿದೆ. ಬಾಂಗ್ಲಾದ ಸರಕುಗಳನ್ನು ಭಾರತದ ಭೂಭಾಗದ ಮೂಲಕ ಸಾಗಿಸಿ ರಫ್ತು ಮಾಡಲು ನೀಡಿದ್ದ ಸೌಲಭ್ಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಮಾಡಲಾಗಿದೆ ಮತ್ತು ಆ ಮೂಲಕ ಬಾಂಗ್ಲಾದ ಸುತ್ತಲೂ ಭಾರತದ ಭೂಭಾಗವಿದೆ ಎಂಬುದನ್ನು ಆ ದೇಶಕ್ಕೆ ನೆನಪಿಸಲಾಗುತ್ತಿದೆ. ಸಿಲಿಗುರಿ ಕಾರಿಡಾರಿನ ಭದ್ರತೆ ಹೆಚ್ಚಿಸಲು, ಆ ಮೂಲಕ ಈಶಾನ್ಯ ರಾಜ್ಯಗಳಿಗೆ ಸಂಪರ್ಕ ವ್ಯವಸ್ಥೆ ಸುಗಮಗೊಳಿಸಲು ಭೂಗತ ಬಹುಪದರ ಸಾಗಾಟ ಮಾರ್ಗದಂಥ ನೂತನ ತಾಂತ್ರಿಕತೆಯನ್ನು ಅಳವಡಿಸಲಾಗುತ್ತಿದೆ. ಹಿಂದೂ ಮಹಾಸಾಗರದಲ್ಲಿ ಚೀನಾದ ಪ್ರಾಬಲ್ಯ ಹೆಚ್ಚುವ ಸಾಧ್ಯತೆಯ ಹಿನ್ನೆಲೆಯಲ್ಲಿ ಆಂಧ್ರಪ್ರದೇಶದ ರಾಮ್‌ಬಿಲ್ಲಿಯ ವರ್ಷಾ ನೌಕಾನೆಲೆಯಲ್ಲಿ ಅಣುಶಕ್ತಿ ಆಧಾರಿತ ಬ್ಯಾಲಿಸ್ಟಿಕ್ ಕ್ಷಿಪಣಿ ಸಾಮರ್ಥ್ಯಹೊಂದಿದ ಜಲಾಂತರ್ಗಾಮಿಗಳನ್ನು ಸ್ಥಾಪಿಸಲಾಗುತ್ತಿದೆ. ಅರಿಮರ್ದನ್ ಎಂಬ ಆಧುನಿಕ ಜಲಾಂತರ್ಗಾಮಿ ನೌಕೆ ಭಾರತದ ನೌಕಾಬಲಕ್ಕೆ ಸೇರ್ಪಡೆಯಾಗಿದೆ. ಕಾರವಾರದ ಸೀಬರ್ಡ್ ನೌಕಾನೆಲೆಯ ಅಭಿವೃದ್ಧಿ ಕೂಡಾ ವೇಗ ಪಡೆದುಕೊಳ್ಳುತ್ತಿದೆ. ರಾಜತಾಂತ್ರಿಕ ಕ್ರಮಗಳ ಅಂಗವಾಗಿ ಶ್ರೀಲಂಕಾ, ಥಾಯ್ಲೆಂಡ್, ಮ್ಯಾನ್ಮಾರ್, ನೇಪಾಳ, ಭೂತಾನ್ ಮುಂತಾದ ದೇಶಗಳೊಂದಿಗೆ ಬಾಂಧವ್ಯ ವೃದ್ಧಿಗೆ ಅಗತ್ಯ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಇಷ್ಟೆಲ್ಲ ಕ್ರಮಗಳ ಹೊರತಾಗಿಯೂ ಈವರೆಗೆ ಮಿತ್ರರಾಷ್ಟ್ರವಾಗಿದ್ದ ಬಾಂಗ್ಲಾ ಏಕಾಏಕಿ ಶತ್ರುಗಳ ಕಡೆಗೆ ವಾಲಿರುವುದು ಆತಂಕದ ವಿಷಯ. ಬಲಾಢ್ಯ ಚೀನಾದ ಬೆಂಬಲದ ಧೈರ್ಯದಲ್ಲಿರುವ ಬಾಂಗ್ಲಾ, ಪಾಕಿಸ್ತಾನ ಮತ್ತು ಶ್ರೀಲಂಕಾಗಳ ಅನುಭವದಿಂದ ಪಾಠ ಕಲಿಯದಿದ್ದರೆ ಇಡೀ ದಕ್ಷಿಣ ಏಷ್ಯಾದ ಸುರಕ್ಷತೆಗೆ ಚೀನಾದಿಂದ ಅಪಾಯ ತಪ್ಪಿದ್ದಲ್ಲ.

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಭಟ್ಟರ್ ಸ್ಕಾಚ್

- **ವಿನಾಯಕ ದಿಬ್ಬ, (ಇಮೇಲ್ ಮೂಲಕ)**
ಭಟ್ರೇ, ದಿನದಲ್ಲಿ ಎರಡು ನಿಮಿಷ ನಗುವುದು ಇಪ್ಪತ್ತು ನಿಮಿಷ ಜಾಗಿಂಗ್ ಮಾಡುವುದಕ್ಕೆ ಸಮವಂತೆ?
– **ಅದಕ್ಕಾಗಿಯೇ ನಾನು ಪಾರ್ಕಿನಲ್ಲಿ ಕುಳಿತು ಎಲ್ಲ ಜಾಗರ್‌ಗಳನ್ನು ನೋಡಿ ನಗುವುದು!**

- **ಕೆ.ಸಿ.ಗೋಪಾಲಕೃಷ್ಣ, ಮೂಡಿಗೆರೆ**
ಭಟ್ರೇ, ನಿಮಗೆ ಈಗಿನ ಪತ್ರಕರ್ತರನ್ನು ನೋಡಿದರೆ ಏನನ್ನಿಸುತ್ತದೆ?
– **ಒಬ್ಬೊಬ್ಬರೂ ಒಂದೊಂದು ಯುಟ್ಯೂಬ್ ಚಾನೆಲ್ ಥರಾ ಕಾಣಿಸ್ತಾರೆ!**

- **ಬ.ಗೋವಿಂದ, ಮಂಡ್ಯ**
ಭಟ್ರೇ, ಭಾರತದಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ ಎಂದು ನಿಮಗೆ ಅನಿಸುವುದು ಯಾವಾಗ?
– **ರೀಲ್ಸ್‌ಗಳನ್ನು ನೋಡುವಾಗ!**

- **ಸಂತೋಷ ಪಾಗಡಿ, ಧಾರವಾಡ**
ಭಟ್ರೇ, ಅಷ್ಟಕ್ಕೂ ಮನುಷ್ಯನಿಗೆ ಬೇಕಾಗುವುದು ಪ್ರೀತಿಯಂತೆ, ಹೌದಾ?
– **ಅದು ಸಿಕ್ಕ ನಂತರ ಹಣ, ಮನೆ, ಕಾರು ಬೇಕು ಅಂತ ಅನಿಸುತ್ತದೆ!**

- **ಭಾವನಾ, ತುಮಕೂರು**
ಭಟ್ರೇ, 'ರಶ್ ಅವರ್' ಅಂತ ಏಕೆ ಕರೆಯುತ್ತಾರೆ?
– **ಯಾವುದೂ ಚಲಿಸುವುದಿಲ್ಲವಲ್ಲ, ಅದಕ್ಕೆ ಹಾಗಂತಾರಾ ಗೊತ್ತಿಲ್ಲ!**

- **ರಾಕೇಶ ಬಲ್ಲಾಳ, (ಇಮೇಲ್ ಮೂಲಕ)**
ಭಟ್ರೇ, ಆತ ಆಗಾಗ 'ಡೋಂಟ್ ಬಿ ಸೋ ಹಂಬಲ್' ಅಂತಾನಲ್ಲ?
– **ಹೂಂ.. ನೀನು ಅಷ್ಟೇನೂ ಗ್ರೇಟ್ ವ್ಯಕ್ತಿ ಅಲ್ಲ ಅನ್ನೋದನ್ನು ಹಾಗೆ ಹೇಳುತ್ತಿರಬೇಕು!**

- **ರಾಜಿ, ಬೆಂಗಳೂರು**
ಭಟ್ರೇ, ನೀವು ಇಲ್ಲಿ ತನಕ ಕಲಿತಿದ್ದರ ಪೈಕಿ ಪ್ರಯೋಜನಕ್ಕೆ ಬಾರದಿರುವುದು ಅಂದ್ರೆ ಯಾವುದು?
– **ಆಲ್ಜಿಬ್ರಾ!**

- **ಪ್ರದೀಪ ನಾಯಕ, ಬೆಂಗಳೂರು**
ಭಟ್ರೇ, ನಾನು ಯಾರೇ ಆಗಿರಬಹುದು, ಅದನ್ನು ಒಪ್ಪಿಕೊಳ್ಳಬೇಕಂತೆ, ಹೌದಾ?
– **ಹೌದು, ಆದರೆ ನೀವು ಸೀರಿಯಲ್ ಕಿಲ್ಲರ್ ಆದ್ರೆ ಈ ಮಾತು ಅನ್ವಯಿಸುವುದಿಲ್ಲ!**

ಮೂರು ಅನಾರ್ಕಲಿಯಲ್ಲಿ ನಟಿಸಿದ ವಿದೇಶಿ ಮಹಿಳೆ

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ರೂಬಿ ಮಾಯರ್ಸ್ ಹೆಸರು ಕೇಳಿದ್ದೀರಾ? ಇಲ್ಲವಾದರೆ ಸುಲೋಚನಾ ಹೆಸರಂತೂ ನೀವು ಕೇಳಿರಬಹುದು. ಈಗಂತೂ ಯಾವ ನ್ಯೂಸ್ ಚಾನೆಲ್ ನೋಡಿದರೂ ಕರ್ಣಪಟಲ ಹರಿದುಹೋಗುವಷ್ಟು ಜೋರಾಗಿ ಕಿರುಚುವ, ನೇರ ಮಿದುಳಿಗೇ ಕೈಹಾಕಿ ಕಿವುಚುವ ನಿರೂಪಕರ ಹಾವಳಿ. ಎಲ್ಲವನ್ನೂ ಬಿಟ್ಟು ಸಿನಿಮಾ ನೋಡೋಣವೆಂದು ಕುಳಿತರೆ, ಹೊಸ ಸಿನಿಮಾಗಳ ಪಾಡೂ ಅಷ್ಟೇ. ಕೊಲೆ, ಸುಲಿಗೆ, ಅತ್ಯಾಚಾರ, ಬಾಂಬ್, ಹೊಡೆದಾಟ, ಬಡಿದಾಟ, ರಕ್ತಪಾತ. ಎರಡೂವರೆ ತಾಸಿನ ಚಿತ್ರದಲ್ಲಿ ಎರಡೂ ಕಾಲು ತಾಸು ಬೇಡವಾದದ್ದನ್ನೇ ತೋರಿಸಿ, ಕೊನೆಯ 15 ನಿಮಿಷದಲ್ಲಿ 'ಮುಂಚೆ ತೋರಿಸಿದ್ದನ್ನು ಮಾಡಿದರೆ ಶಿಕ್ಷೆಯಾಗುತ್ತದೆ' ಎಂಬ ಸಂದೇಶ.

ಇನ್ನು ತೆರೆಯ ಮೇಲೆ ಯಾವ ಕಲಾವಿದ/ಕಲಾವಿದೆ ಕಂಡರೂ ನಿಜಜೀವನದಲ್ಲಿ ಇವರೂ ಡ್ರಗ್ಸ್ ಸೇವಿಸಿದವರಾ, ಕಾಸ್ಟಿಂಗ್ ಕೌಚ್‌ಗೆ ಒಪ್ಪಿದವರಾ, ಲೈಂಗಿಕ ಕಿರುಕುಳಕ್ಕೆ ಒಳಪಟ್ಟವರಾ ಎಂಬ ಅನುಮಾನ ಬೇರೆ. ತೆರೆಯ ಮೇಲೆ ಸೊಬಗರಾಗಿ ನಿಜಜೀವನದಲ್ಲಿ ತದ್ವಿರುದ್ಧವಾಗಿರುವ ನಾಯಕ-ನಾಯಕಿಯರನ್ನು ಸ್ವೀಕರಿಸಲು ಮನಸ್ಸು ಒಪ್ಪುತ್ತಿಲ್ಲ. ಇಂಥವರ ಚಿತ್ರಗಳನ್ನು ನೋಡಲು ನಾವು ಇಷ್ಟೊಂದು ಹಣ ಸುರಿದೆವಾ!? ಅದ್ಯಾಕೋ ಹಳೆಯ ಚಲನಚಿತ್ರಗಳೇ ಒಳಿತು ಅನಿಸಿತು. ಏನಿಲ್ಲವೆಂದರೂ 4 ಒಳ್ಳೆಯ ಹಾಡುಗಳು, ಅಬ್ಬರವಿಲ್ಲದ ಸುಮಧುರ ಹಿನ್ನೆಲೆ ಸಂಗೀತ, ಮಿತವಾದ ಸಂಭಾಷಣೆ, ಮನಸ್ಸಿಗೆ ಆಹ್ಲಾದಕರ. ನಾಯಕನ ಬೆಲ್‌ಬಾಟಮ್ ಪ್ಯಾಂಟ್ (ಇನ್ನೂ ಹಿಂದೆ ಹೋದರೆ ಮೂಲಂಗಿ ಪ್ಯಾಂಟ್) ಮೂರು ಇಂಚು ಅಗಲದ ಬೆಲ್ಟ್, ಅದಕ್ಕೆ ತಕ್ಕಂತೆ ದೊಡ್ಡ ಬಿಲ್ಲೆಯ ಬಕಲ್, ಹಿಪ್ಪಿ ಕಟ್, ನಾಯಕಿಯ ಕಿವಿಯಲ್ಲಿನ ಜುಮುಕಿ, ಕೈ ತುಂಬ ಬಳೆ, ಕಾಲಲ್ಲಿ ಗೆಜ್ಜೆ ಇವನ್ನೆಲ್ಲ ನೋಡುವುದು ಏನೋ ಒಂದು ರೀತಿಯ ಖುಷಿ. ಇನ್ನೂ ಹಿಂದಕ್ಕೆ ಹೋದರೆ ಮೂಕಿ ಚಿತ್ರಗಳ ಕಾಲ. ಆ ಪ್ರಪಂಚವೇ ಬೇರೆ. ಮೂಕಿ ಚಿತ್ರವೆಂದರೆ ನಮ್ಮ ನೆನಪಿಗೆ ಬರುವುದು ಕಮಲ್ ಹಾಸನ್‌ನ 'ಪುಷ್ಪಕ ವಿಮಾನ' ತಾನೆ? ಅದಕ್ಕೂ ಹಿಂದೆ ಹೋಗಿ, ಕಪ್ಪು-ಬಿಳುಪಿನ ಮೂಕಿ ಚಿತ್ರಗಳನ್ನು ನೋಡಿ, ಮಜವಾಗಿರುತ್ತೆ. ಸಂಭಾಷಣೆಯೊಂದಿಗೆ ಸಂವಹನ ಸುಲಭ, ಸಂಭಾಷಣೆ ಇಲ್ಲದೆಯೇ ಪ್ರೇಕ್ಷಕನಿಗೆ ಸಂದೇಶ ತಲುಪಿಸುವ ಕೆಲಸ ತುಂಬಾ ಕಷ್ಟ.

ಅಂಥದ್ದರಲ್ಲಿ ಚಾರ್ಲಿ ಚಾಪ್ಲಿನ್ ನಮ್ಮನ್ನೆಲ್ಲ ನಗಿಸುತ್ತಿದ್ದರು ಎಂಬುದನ್ನು ಮರೆಯುವಂತಿಲ್ಲ. ಹಿಂದೆ ಭಾರತೀಯ ಚಿತ್ರರಂಗದಲ್ಲಿ ಸಂಚಲನ ಮೂಡಿಸಿದ 'ರಾಜಾ ಹರಿಶ್ಚಂದ್ರ', 'ಲಂಕಾದಹನ', 'ಕೃಷ್ಣ ಜನ್ಮ', 'ಮೋಹಿನಿ ಭಸ್ಮಾಸುರ', 'ಜಮಾಯಿ ಬಾಬು' ಚಿತ್ರಗಳು ಇಂದಿಗೂ ಜೀವಂತವಾಗಿವೆ. ಅಂತೆಯೇ ಆ ಕಾಲದ ಕಲಾವಿದರ ನೆನಪು ಕೂಡ. ಆ ಕಲಾವಿದರ ಪೈಕಿ ಚಿರಸ್ಥಾಯಿಯಾಗಿ ಉಳಿಯುವವರಲ್ಲಿ ರೂಬಿ ಮಾಯರ್ಸ್ ಸಹ ಒಬ್ಬರು ಎಂದರೆ ತಪ್ಪಾಗಲಿಕ್ಕಿಲ್ಲ.

18ನೇ ಶತಮಾನದಲ್ಲಿ ಇರಾಕ್‌ನ ಬಾಗ್ದಾದ್ ಪ್ರದೇಶದಿಂದ ಭಾರತಕ್ಕೆ ವ್ಯಾಪಾರಕ್ಕೆಂದು ಬರುವವರ ಒಂದು ದಂಡೇ ಇತ್ತು. ಅವರು ಹೆಚ್ಚಾಗಿ ಆ ಭಾಗದ ಸಾಮಗ್ರಿಗಳನ್ನು ಭಾರತದ ಮುಂಬೈ, ದಿಲ್ಲಿ ಮತ್ತು ಕಲ್ಕತ್ತಾದಂಥ ನಗರಗಳಲ್ಲಿ ಮಾರಾಟ ಮಾಡುತ್ತಿದ್ದರು. ಹಾಗೆ ಬಂದವರಲ್ಲಿ ಕೆಲವರು ಅಲ್ಲಿಯ ಟರ್ಕಿ ಮುಸ್ಲಿಂ ಆಡಳಿತಗಾರರ ಕಿರುಕುಳದಿಂದ ಪಾರಾಗಲು ಭಾರತದಲ್ಲಿಯೇ ಉಳಿಯುತ್ತಿದ್ದರು. ಅಂಥ ಪರಿವಾರಗಳಲ್ಲಿ, ಪೂನಾದಲ್ಲಿ ಬೀಡುಬಿಟ್ಟ ಯಹೂದಿ ಪರಿವಾರವೂ ಒಂದಾಗಿತ್ತು. ಆ ಪರಿವಾರದಲ್ಲಿ 1907ರಲ್ಲಿ ಜನಿಸಿದವಳು ದುಂಡು ಮುಖದ ರೂಬಿ ಮಾಯರ್ಸ್. ರೂಬಿ ತೀರಾ ಚಿಕ್ಕ ವಯಸ್ಸಿನಲ್ಲಿಯೇ ಜೀವನೋಪಾಯಕ್ಕೆಂದು ಪೂನಾದಲ್ಲಿಯೇ ಟೆಲಿಫೋನ್ ಬೂತ್‌ನಲ್ಲಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದಳು. ಕೊಹಿನೂರ್ ಫಿಲ್ಮ್ ಕಂಪನಿಯ ಮೋಹನ್ ಭವನಾನಿ ಈ ಸುಂದರ ಯುವತಿಯನ್ನು ತನ್ನ ಚಿತ್ರದಲ್ಲಿ ನಟಿಸುವಂತೆ ಕೇಳಿಕೊಂಡಾಗ, ಅವಕಾಶ ಸಿಕ್ಕಿದ್ದಕ್ಕಾಗಿ ಒಳಗೊಳಗೇ ಸಂತೋಷಗೊಂಡರೂ, ಏನೋ ಒಂದು ರೀತಿಯ ದುಗುಡ. ಹೆಣ್ಣು ಮಕ್ಕಳು ಚಿತ್ರರಂಗಕ್ಕೆ ಬರಲು ಅಂಜುತ್ತಿದ್ದ, ಗಂಡಸರೇ ಹೆಣ್ಣಿನ ಪಾತ್ರದಲ್ಲಿ ನಟಿಸುತ್ತಿದ್ದ ಕಾಲ ಅದು. ನಿಮಗೆ ತಿಳಿದಿರಬಹುದು, ಭಾರತದ ಮೊದಲ ಚಿತ್ರ ರಾಜಾ ಹರಿಶ್ಚಂದ್ರದಲ್ಲಿ ನಾಯಕಿ, ರಾಣಿ ತಾರಾಮತಿಯಾಗಿ ನಟಿಸಿದ್ದು ಒಬ್ಬ ಗಂಡು. ಲಂಕಾದಹನ ಚಿತ್ರದಲ್ಲಿ ನಾಯಕ-ನಾಯಕಿಯರಾದ ರಾಮ ಮತ್ತು ಸೀತೆಯಾಗಿ ದ್ವಿಪಾತ್ರದಲ್ಲಿ ಕಾಣಿಸಿಕೊಂಡವರೂ ಗಂಡು. ಅವರೇ ಅಂದಿನ ಕಾಲದ ಅತ್ಯುತ್ತಮ ನಾಯಕಿ ಎಂದು ಹೆಸರು ಗಳಿಸಿದ್ದ ಅಣ್ಣಾ ಸಾಳುಂಕೆ. ಹಾಗಿರುವಾಗ ಅಭಿನಯದ ಓನಾಮ ಕೂಡ ಗೊತ್ತಿಲ್ಲದವಳು ನಟಿಸುವುದು ಎಂದರೆ ಹೇಗೆ? ಅದರಲ್ಲೂ ಇಡೀ ದೇಶದ ಜನ

ತನ್ನ ಅಭಿನಯವನ್ನು ನೋಡುತ್ತಾರೆ ಎಂಬ ಅಳುಕು. ಯೋಚಿಸಲು ಸಮಯಾವಕಾಶ ಪಡೆದು, ಬಹಳ ಯೋಚಿಸಿ, ಅಂತೂ ಒಪ್ಪಿಗೆ ಸೂಚಿಸಿದ್ದಳು ರೂಬಿ. ಅಂತೆಯೇ ತೆರೆಯ ಮೇಲೆ ಸುಲೋಚನಾ ಎಂಬ ಬದಲಾದ ಹೆಸರಿನಲ್ಲಿ ಮೆರೆದಳು. ಈಕೆ ಅಭಿನಯಿಸಿದಷ್ಟು ಸ್ತ್ರೀ ಪ್ರಧಾನ ಚಿತ್ರಗಳಲ್ಲಿ ಬೇರೆ ಯಾರೂ ಅಭಿನಯಿಸಿದ ಉದಾಹರಣೆ ಹಿಂದಿ ಚಿತ್ರರಂಗದಲ್ಲಿ ಇರಲಿಕ್ಕಿಲ್ಲ.

18ನೆಯ ವಯಸ್ಸಿನಲ್ಲಿ ಆ ಕ್ಷೇತ್ರಕ್ಕೆ ಸಂಬಂಧಿಸಿದ ಯಾವುದೇ ಅನುಭವ ಅಥವಾ ಕಾರ್ಯಜ್ಞಾನವೂ ಇಲ್ಲದೇ ಚಿತ್ರರಂಗ ಪ್ರವೇಶಿಸಿದ ಸುಲೋಚನಾಳ ಮೊದಲ ಚಿತ್ರ 'ವೀರ ಬಾಲಾ'. ವರ್ಷಕ್ಕೆ ಒಂದು ಅಥವಾ ಎರಡು ಚಿತ್ರಗಳಲ್ಲಷ್ಟೇ ನಟಿಸುತ್ತಿದ್ದ ಈಕೆ 1926ರಲ್ಲಿ ನಟಿಸಿದ 'ಟೈಪಿಸ್ಟ್ ಗರ್ಲ್' ಮತ್ತು 'ಸಿನಿಮಾ ಕ್ವೀನ್', 1927ರಲ್ಲಿ ನಟಿಸಿದ Wild cat of Bombay(ಬಾಂಬೆ ಕಿ ಬಿಲ್ಲಿ) ಮತ್ತು 'ಬಲಿದಾನ್' ಆ ಕಾಲದ ಸೂಪರ್ ಹಿಟ್ ಚಿತ್ರಗಳಾದವು. Wild cat of Bombayಯಲ್ಲಿ ಪೊಲೀಸ್, ಜೇಬು ಕಳ್ಳ, ದೇಶೀಯ ಸಂಭಾವಿತ ಮನುಷ್ಯ, ವಿದೇಶಿ ಮಹಿಳೆ, ಹಣ್ಣು ಮಾರುವವಳು, ದಾರಿ ಬದಿಗಿನ ಬಾಲ ಭಿಕ್ಷುಕ, ತೋಟದ ಮಾಲಿ ಹೀಗೆ ಒಟ್ಟು 8 ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿದ್ದು ಒಂದು ದಾಖಲೆಯಷ್ಟೇ ಅಲ್ಲ, ಅವಳ ಪ್ರತಿಭೆಗೆ ಪುರಾವೆಯೂ ಹೌದು. ಅದಾಗಿ ಮೂರೂವರೆ ದಶಕದ ನಂತರ ಶಿವಾಜಿ ಗಣೇಶನ್ 9 ಪಾತ್ರಗಳಲ್ಲಿ, ಅದರ ನಾಲ್ಕೂವರೆ ದಶಕದ ನಂತರ ಕಮಲ್ ಹಾಸನ್ 'ದಶಾವತಾರ' ಚಿತ್ರದಲ್ಲಿ 10 ಪಾತ್ರಗಳಲ್ಲಿ ಅಭಿನಯಿಸಿ ದಾಖಲೆ ಬರೆದರೂ, ಅತಿಹೆಚ್ಚು ಪಾತ್ರಗಳಲ್ಲಿ ನಟಿಸಿದ ಮಹಿಳೆಯ ದಾಖಲೆ ಈಗಲೂ ಸುಲೋಚನಾ ಹೆಸರಿನಲ್ಲಿಯೇ ಇದೆ.

ನಂತರ 2 ವರ್ಷ ಆರ್.ಎಸ್.ಚೌಧರಿ ನಿರ್ದೇಶಿಸಿದ 'ಮಾಧುರಿ', 'ಅನಾರ್ಕಲಿ' ಮತ್ತು 'ಇಂದಿರಾ B. A.', ಎಲ್ಲವೂ ಸೂಪರ್ ಹಿಟ್ ಚಿತ್ರಗಳೇ. ಆಕೆ ತನ್ನ ವೃತ್ತಿಜೀವನದ ಉತ್ತುಂಗದಲ್ಲಿದ್ದು, ಭಾರತದ ಶ್ರೇಷ್ಠ ಚಿತ್ರ ನಿರ್ಮಾಣ ಸಂಸ್ಥೆ ಎಂದು ಹೆಸರುಗಳಿಸಿದ್ದ ಇಂಪೀರಿಯಲ್ ಫಿಲ್ಮ್ ಕಂಪನಿಯೊಂದಿಗೆ ಕೈ ಜೋಡಿಸಿ, ಚಿತ್ರರಂಗವನ್ನು ಅಕ್ಷರಶಃ ಆಳಿದ ಕಾಲ ಅದು ಎಂದರೆ ತಪ್ಪಾಗಲಾರದು. ಆ ದಿನಗಳಲ್ಲಿ ಅವಳ ಖ್ಯಾತಿ ಎಷ್ಟು ವ್ಯಾಪಕವಾಗಿತ್ತೆಂದರೆ, ಮಹಾತ್ಮ ಗಾಂಧಿಯವರ ಖಾದಿ ಪ್ರದರ್ಶನದ ಉದ್ಘಾಟನೆಯ ಕಿರು ಚಿತ್ರವೊಂದರ ಜತೆಗೆ ಸುಲೋಚನಾ ಅಭಿನಯಿಸಿದ ಮಾಧುರಿ ಚಿತ್ರದ ಒಂದು ಜನಪ್ರಿಯ ನೃತ್ಯವನ್ನು ಸೇರಿಸಲಾಗಿತ್ತು ಎಂಬ ಮಾತಿದೆ.

ಯಶಸ್ಸಿನ ಉತ್ತುಂಗದಲ್ಲಿರುವಾಗಲೇ ಆಕೆ ಗಾಬರಿಗೊಳಗಾಗುವ ಸಂದರ್ಭವೊಂದು ಬಂದೊದಗಿತ್ತು. 1931ರ ವೇಳೆಗೆ ಭಾರತದ ಚಿತ್ರರಂಗ ಹೊಸ ಸೂರ್ಯೋದಯವನ್ನು ಕಂಡಿತು. ಚಿತ್ರೋದ್ಯಮ ಮೂಕಿ ಚಿತ್ರದಿಂದ ಟಾಕಿ (ವಾಕ್ಚಿತ್ರ) ಚಿತ್ರದೆಡೆಗೆ ದಾಪುಗಾಲು ಹಾಕಿತ್ತು. ಹಿಂದಿ ಸ್ಪಷ್ಟವಾಗಿ ಮಾತನಾಡಲು ಬರದ ಯಹೂದಿ ಮಹಿಳೆ ಸುಲೋಚನಾ ಸ್ವಲ್ಪ ತಬ್ಬಿಬ್ಬಾಗಿದ್ದ ಕಾಲ ಅದು. ಆದರೂ ಧೃತಿಗೆಡದೆ, ಒಂದು ವರ್ಷ ಉದ್ಯಮದಿಂದ ದೂರ ಉಳಿದು, ಹಿಂದಿ ಭಾಷೆಯ ಸತ್ವ ಸಂಗ್ರಹಿಸಿ ಮೊದಲಿಗಿಂತಲೂ ಶಕ್ತಿಯುತವಾಗಿ ಎದ್ದು ನಿಂತಳು. 1932ರಲ್ಲಿ ಮೊದಲು ತನ್ನದೇ ಚಿತ್ರವಾದ ಮಾಧುರಿ, ನಂತರ ನಾಲ್ಕು ವರ್ಷಗಳಲ್ಲಿ ಅನಾರ್ಕಲಿ, Wild cat of Bombay ಮತ್ತು ಇಂದಿರಾ B. A. (ಇಂದಿರಾ M. A. ಎಂದು ಹೆಸರು ಬದಲಾಯಿಸಿ) ಚಿತ್ರಗಳನ್ನು ಸಂಭಾಷಣೆಯೊಂದಿಗೆ ಪುನಃ ತೆರೆಗೆ ತಂದಳು. 1933ರಿಂದ 1939ರವರೆಗೆ ತನ್ನ ಪ್ರಿಯಕರ, ಅಂದಿನ ಜನಪ್ರಿಯ ನಾಯಕ ಡಿನ್ಶಾ ಬಿಲ್ಲಿಮೋರಿಯಾನೊಂದಿಗೆ ಮಾತ್ರ ಅಭಿನಯಿಸಿದಳು. 6 ವರ್ಷಗಳ ಅವಧಿಯಲ್ಲಿ ಅವರಿಬ್ಬರೂ ಅಭಿನಯಿಸಿದ ಒಟ್ಟು ಚಿತ್ರಗಳ ಸಂಖ್ಯೆ 7. ಅವೆಲ್ಲವೂ ಯಶಸ್ವಿ ಚಿತ್ರಗಳೆಂದು ಬೇರೆ ಹೇಳಬೇಕಿಲ್ಲವಲ್ಲ. 1935ರ ವೇಳೆಗೆ ತನ್ನದೇ ಸಂಸ್ಥೆ 'ರೂಬಿ ಸ್ಟುಡಿಯೋ' ಸ್ಥಾಪಿಸಿ ಭಾರತದಲ್ಲಿ ಚಲನಚಿತ್ರ ನಿರ್ಮಾಣಕ್ಕಿಳಿದ ಮಹಿಳೆಯರ ಪಟ್ಟಿಗೆ ಸೇರಿಕೊಂಡಳು.

'Sexy symbol of silent movies' (ಮಾದಕ ನಟಿ, ಮಾದಕ ದ್ರವ್ಯದ ನಟಿ ಅಲ್ಲ!) ಎಂದು ಪ್ರಸಿದ್ಧಿ ಪಡೆದಿದ್ದ ಸುಲೋಚನಾ ಕೇವಲ ಚಲನಚಿತ್ರಗಳಲ್ಲಷ್ಟೇ ಅಲ್ಲದೆ ಅನೇಕ ಜಾಹೀರಾತುಗಳಲ್ಲಿಯೂ ಕಾಣಿಸಿಕೊಳ್ಳುತ್ತಿದ್ದಳು. ಆ ದಿನಗಳಲ್ಲಿ ಕಲಾವಿದರಿಗೆ ತಿಂಗಳ ಲೆಕ್ಕದಲ್ಲಿ ಸಂಭಾವನೆ ನೀಡಲಾಗುತ್ತಿತ್ತು. ಇಂದಿಗೆ ಸುಮಾರು 90 ವರ್ಷಗಳ ಹಿಂದೆ ಸುಲೋಚನಾ ಪಡೆಯುತ್ತಿದ್ದ ಸಂಭಾವನೆ ಎಷ್ಟು ಗೊತ್ತಾ? ಬರೋಬ್ಬರಿ 5,000 ರುಪಾಯಿಗಳು! ಇದು ಅಂದಿನ ದಿನಗಳಲ್ಲಿ ಮಹಾರಾಷ್ಟ್ರದ ಗವರ್ನರ್ ಪಡೆಯುತ್ತಿದ್ದ ಸಂಬಳಕ್ಕಿಂತ ಹೆಚ್ಚಾಗಿತ್ತು ಎಂದರೆ ಆಶ್ಚರ್ಯ ಪಡಬೇಡಿ. ಈ ವೇತನ ಊಟೋಪಚಾರ, ವಸತಿ, ಇತರೆ ಖರ್ಚು ಹೊರತಾಗಿ ಎಂದು ಬೇರೆ ಹೇಳಬೇಕಿಲ್ಲವಲ್ಲ. ಆ ಕಾಲದಲ್ಲಿ ನಾಯಕ ನಟರಿಗೆ ಸಿಗುತ್ತಿದ್ದ ಗರಿಷ್ಠ ವೇತನ 2500 ರುಪಾಯಿಗಳು! ಕೆಲವು ನಾಯಕ ನಟರೇ ಬೈಸಿಕಲ್ ತುಳಿದು ಚಿತ್ರೀಕರಣಕ್ಕೆ ಬರುತ್ತಿದ್ದ ಆ ಕಾಲದಲ್ಲಿ ಸುಲೋಚನಾ ಶೆವರ್ಲೆ ಕಾರಿನಲ್ಲಿ ಬರುತ್ತಿದ್ದಳು ಎಂದರೆ ಊಹಿಸಿ. ಅಂದ ಹಾಗೆ ಆ ದಿನಗಳಲ್ಲಿ ಒಂದು ಚಲನಚಿತ್ರ ನಿರ್ಮಾಣಕ್ಕೆ ತಗುಲುತ್ತಿದ್ದ ಒಟ್ಟು ವೆಚ್ಚ 40ರಿಂದ 50 ಸಾವಿರ ರುಪಾಯಿಗಳು. ಅದರಲ್ಲಿ ಒಂದು ದೊಡ್ಡ ಪಾಲು ಈ ಕಲಾವಿದೆಯ ವೇತನ. ತಿಂಗಳಿಗೆ 150 ರುಪಾಯಿಯಿಂದ ಆರಂಭಿಸಿ 4-5 ವರ್ಷಗಳ ಅವಧಿಯಲ್ಲಿ 5,000 ರುಪಾಯಿಗಳವರೆಗೆ ತಲುಪುವುದೆಂದರೆ ಸಾಮಾನ್ಯದ ಮಾತಲ್ಲ. ಆ ಹೆಸರಿಗೆ ಅಷ್ಟು ಬೇಡಿಕೆ ಇತ್ತು, ಜನರು ಆಕೆಯನ್ನು ಆ ಮಟ್ಟದಲ್ಲಿ ಇಷ್ಟಪಡುತ್ತಿದ್ದರು ಎನ್ನುವುದಕ್ಕೆ ಸಾಕ್ಷಿ ಅದು.

'ಕ್ವೀನ್ ಆಫ್ ರೋಮಾನ್ಸ್' ಎಂದೇ ಖ್ಯಾತಳಾಗಿದ್ದ ಸುಲೋಚನಾ ಮತ್ತು ಭಾರತದ ಜಾನ್ ಬೆರಿಮೋರ್ ಎಂದು ಹೆಸರು ಮಾಡಿದ್ದ ಬಿಲ್ಲಿಮೋರಿಯಾ ಜೋಡಿ ಆ ದಿನಗಳಲ್ಲಿ ಅತ್ಯಂತ ಜನಪ್ರಿಯವಾಗಿತ್ತು. ಅದ್ಯಾಕೋ ಅವಳಿಗೆ ಕಂಕಣಭಾಗ್ಯ ಮಾತ್ರ ಕೂಡಿ ಬರಲಿಲ್ಲ. 1939ರಲ್ಲಿ ಬಿಲ್ಲಿಮೋರಿಯಾನಿಂದ ದೂರವಾದ ಈಕೆ ತನ್ನ ಜೀವನದ ಕೊನೆ ತನಕ ಕುಮಾರಿಯಾಗೇ ಉಳಿದಳು ಎನ್ನುವುದು ಬೇರೆಯ ಮಾತು. ಆದರೆ ಇವರಿಬ್ಬರೂ ಒಬ್ಬರಿಂದೊಬ್ಬರು ದೂರಾದ ದಿನದಿಂದ ಇಬ್ಬರ ವೃತ್ತಿಜೀವನದಲ್ಲಿ ಯಶಸ್ಸೂ ನಿಧಾನವಾಗಿ ದೂರ ಸರಿಯಲಾರಂಭಿಸಿತ್ತು. ಅದಾಗಿ ಒಂದೆರಡು ವರ್ಷದಲ್ಲೇ ಬಿಲ್ಲಿಮೋರಿಯಾ ಚಿತ್ರರಂಗದಿಂದಷ್ಟೇ ಅಲ್ಲ, ಲೋಕದಿಂದಲೇ ಮರೆಯಾದ. ಸುಲೋಚನಾ ಮಾತ್ರ ತನ್ನ ಪಯಣ ಮುಂದುವರಿಸಿದ್ದಳು.

ನಂತರದ ವರ್ಷಗಳಲ್ಲಿ, ದೋಸ್ತಾನಾ, ಆಮ್ರಪಾಲಿ, ಜೂಲಿ, ಖಟ್ಟಾ ಮೀಠಾ ಮೊದಲಾದವು ಈಕೆಯ ಸಫಲ ಚಿತ್ರಗಳು. ಈ ನಡುವೆ 1947ರಲ್ಲಿ ದಿಲೀಪ್ ಕುಮಾರ್ ಜತೆ 'ಜುಗ್ನು' ಚಿತ್ರದಲ್ಲಿ ನಟಿಸಿದಳು. ನೈತಿಕತೆಗೆ ವಿರುದ್ಧವಾದ ಕಥಾ ಸಾರಾಂಶ ಹೊಂದಿದ ಚಿತ್ರವೆಂದು ಅಂದಿನ ಮಹಾರಾಷ್ಟ್ರದ ಗೃಹ ಸಚಿವ ಮೊರಾರ್ಜಿ ದೇಸಾಯಿ ಆ ಚಿತ್ರಕ್ಕೆ ನಿರ್ಬಂಧ ಹೇರಿದ್ದರು. ನಂತರದ ದಿನಗಳಲ್ಲಿ ಅದು ಪ್ರದರ್ಶನಗೊಂಡಿತು, ಆ ಮಾತು ಬೇರೆ.

ಆದರೆ ವೃದ್ಧಿಸುತ್ತಿದ್ದ ವಯಸ್ಸಿನ ಪ್ರಭಾವ ಮತ್ತು ಹೊಸ ನಾಯಕಿಯರ ಪ್ರವೇಶದಿಂದ ಈಕೆಯ ಜನಪ್ರಿಯತೆ ಇಳಿಮುಖವಾಗತೊಡಗಿತ್ತು. 1953ರಲ್ಲಿ ಬೀನಾ ರಾಯ್ ಮತ್ತು ಪ್ರದೀಪ್ ಕುಮಾರ್ ನಟಿಸಿದ 'ಅನಾರ್ಕಲಿ' ಚಿತ್ರದ ಬಗ್ಗೆ ನೀವು ಕೇಳಿರಬಹುದು. 'ಯೇ ಜಿಂದಗೀ ಉಸೀಕೀ ಹೈ, ಜೋ ಕಿಸೀಕಾ ಹೋಗಯಾ', 'ಮೊಹಬ್ಬತ್ ಐಸಿ ಧಡಕನ್ ಹೈ', 'ಜಿಂದಗಿ ಪ್ಯಾರಕಿ ದೊ ಚಾರ್ ಘಡಿ', 'ಆಜಾ ಅಬ್ ತೊ ಆಜಾ' ಮೊದಲಾದ 11 ಹಿಟ್ ಹಾಡುಗಳಿದ್ದ ಸಿನಿಮಾ ಅದು. ಕುಸಿಯುತ್ತಿದ್ದ ತನ್ನ ಅಸ್ತಿತ್ವವನ್ನು ಹಿಡಿದು ನಿಲ್ಲಿಸಲು ಆ ಚಿತ್ರದಲ್ಲಿ ನಾಯಕ ಸಲೀಂನ ತಾಯಿಯಾಗಿ ಪೋಷಕ ಪಾತ್ರದಲ್ಲಿ ಕಾಣಿಸಿಕೊಂಡಿದ್ದರೂ, ಮೂರನೆಯ ಅನಾರ್ಕಲಿ ಚಿತ್ರದಲ್ಲಿ ಕಾಣಿಸಿಕೊಂಡು ದಾಖಲೆ ಬರೆದಳು.

ಸುಮಾರು 5 ದಶಕಗಳ ಕಾಲ ಭಾರತೀಯ ಚಿತ್ರಪ್ರೇಮಿಗಳನ್ನು ರಂಜಿಸಿದ ಆ ನಟಿಯ ಅಂತ್ಯ ಮಾತ್ರ ದುರಂತ. 1983ರಲ್ಲಿ ಆಕೆ ಮುಂಬೈನ ಸಣ್ಣ ಫ್ಲ್ಯಾಟ್‌ನಲ್ಲಿ ಅನಾಥಳಾಗಿ ಕೊನೆಯುಸಿರೆಳೆದಳು. 76ರ ವಯೋವೃದ್ಧೆ ಕೊನೆಯುಸಿರೆಳೆಯುವಾಗ ಆಕೆಯ ಬಳಿ ಹಣವಿರಲಿಲ್ಲ, ಯಾವ ಆಸ್ತಿಯೂ ಇರಲಿಲ್ಲ, ಸುತ್ತಮುತ್ತ ತನ್ನವರೆಂದು ಯಾರೂ ಇರಲಿಲ್ಲ. ಕೊನೆ ಗಳಿಗೆಯಲ್ಲಿ ಇದ್ದದ್ದು ಬ್ಯಾಂಕ್‌ನಿಂದ ಪಡೆದ ಸಾಲ ಮಾತ್ರ. ಚಿತ್ರರಂಗದಲ್ಲಿ ಸೋಲರಿಯದೇ ಮೆರೆದ ತಾರೆ ಜೀವನದ ಕೊನೆಯ ಘಟ್ಟದಲ್ಲಿ ದಿಕ್ಕೆಟ್ಟು ಹೋದದ್ದು ಮಾತ್ರ ವಿಪರ್ಯಾಸ.

ನಾನು ತಿಳಿದಂತೆ, ಭಾರತದ ಚಿತ್ರರಂಗದ ಒಳಗಿದ್ದು ಅನೇಕ ಪ್ರಥಮಗಳಿಗೆ ಸಾಕ್ಷಿಯಾದ ಏಕೈಕ ಕಲಾವಿದೆ ಸುಲೋಚನಾ. ಮೂಕಿ ಚಿತ್ರಗಳಿಂದ ಆರಂಭಿಸಿ, ಮಾತನಾಡುವ, ವರ್ಣರಂಜಿತ ಚಿತ್ರಗಳನ್ನು ಕಂಡವಳು ಈಕೆ. ಅಷ್ಟೇ ಅಲ್ಲದೆ, ಮೊದಲ ಹಾಡು, ಚುಂಬನದ ದೃಶ್ಯ, ಕನಸಿನ ದೃಶ್ಯ, ವಿದೇಶದಲ್ಲಿ ಚಿತ್ರೀಕರಣ, ಕೃತಕ ಬೆಳಕಿನ ಅಳವಡಿಕೆ, 'ಎ' ಸರ್ಟಿಫಿಕೇಟ್ ಪಡೆದ ಚಿತ್ರ ಎಲ್ಲವನ್ನೂ ಕಂಡವಳು ಈಕೆ. ಚಲನಚಿತ್ರ ಕ್ಷೇತ್ರದಲ್ಲಿ ಜೀವಮಾನದ ಸಾಧನೆಗೆ ಒಬ್ಬ ವ್ಯಕ್ತಿಗೆ ನೀಡಬಹುದಾದ ಅತ್ಯುನ್ನತ ಗೌರವ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು 1973ರಲ್ಲಿ ಪಡೆದ ಏಕೈಕ ವಿದೇಶಿ ಕಲಾವಿದೆ. 2013ರಲ್ಲಿ ಭಾರತೀಯ ಚಿತ್ರರಂಗದ 100ನೇ ವರ್ಷಾಚರಣೆಯ ಸಂದರ್ಭದಲ್ಲಿ ಅನಾವರಣಗೊಂಡ ಅಂಚೆ ಚೀಟಿಯಲ್ಲಿ ಸುಲೋಚನಾಳ ಚಿತ್ರವನ್ನು ಮುದ್ರಿಸಲಾಗಿದೆ. ಭಾರತೀಯ ಸಾಂಸ್ಕೃತಿಕ ಮತ್ತು ಮನರಂಜನಾ ಉದ್ಯಮಕ್ಕೆ ಯಹೂದಿಗಳು ನೀಡಿದ ಕೊಡುಗೆಯನ್ನು ಪ್ರದರ್ಶಿಸಲು 2017ರಲ್ಲಿ ನಿರ್ಮಿಸಿದ ಸಾಕ್ಷ್ಯಚಿತ್ರ 'ಶಲೋಮ್ ಬಾಲಿವುಡ್'ನಲ್ಲಿ ಈಕೆಯ ವಿಶಿಷ್ಟತೆಯನ್ನು ಬಣ್ಣಿಸಲಾಗಿದೆ. ಭಾರತೀಯ ಚಿತ್ರರಂಗದಲ್ಲಿ ರಮೋಲಾ, ಪ್ರಮಿಳಾ, ನಾದಿರಾ, ಡೇವಿಡ್ ಮೊದಲಾದ ಅನೇಕ ಯಹೂದಿಗಳು ನಟಿಸಿ ಹೆಸರು ಮಾಡಿದ್ದರೂ, ಸುಲೋಚನಾ ಅವರೆಲ್ಲರಿಗಿಂತಲೂ ಹೆಚ್ಚು ಖ್ಯಾತಿ ಗಳಿಸಿದ್ದಳು. ಇಂಥ ಅನೇಕ ಪ್ರತಿಭೆಗಳು ನಮ್ಮಲ್ಲಿ ಆಗಿಹೋಗಿದ್ದಾರೆ. ಇಂದಿನ ಚಿತ್ರರಂಗಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ಅಸಾಮಾನ್ಯ ಪ್ರತಿಭೆಗಳ ಚಿತ್ರಗಳನ್ನು ಈಗ ಮತ್ತೊಮ್ಮೆ ನೋಡಿ, ಅಲ್ಪ ಸ್ವಲ್ಪವಾದರೂ ಅವರ ವಿಷಯ ತಿಳಿದುಕೊಂಡರೆ ಅದೇ ಅವರಿಗೆ ಸಲ್ಲಿಸುವ ಗೌರವವೂ ಆದೀತು.

ಜಾತಿಸೃಷ್ಟಿ, ಅಂಬೇಡ್ಕರ್ ಮತ್ತು ದಲಿತಪ್ರಜ್ಞೆಯ ವಿನ್ಯಾಸಗಳು

ದಲಿತರು ಆತ್ಮವಿಮರ್ಶೆಯೊಂದಿಗೆ ಅಂಬೇಡ್ಕರರನ್ನು ಮೆಚ್ಚಿ ಆರಾಧಿಸುವಾಗ ಅವರ ಚಿಂತನೆಗಳನ್ನು ಅಳವಡಿಸಿಕೊಂಡರೆ ಬಹುಪಾಲು ಸಮಸ್ಯೆಗೆ ಪರಿಹಾರ ಖಂಡಿತವಾಗಿ ಸಾಧ್ಯವೇನೋ! ಜಾತ್ಯತೀತ ರಾಷ್ಟ್ರವಾಗಿ ಜಾತಿಯನ್ನೇ ಪ್ರಬಲ ಅಸ್ತ್ರವಾಗಿ ಭಿನ್ನಾಭಿಪ್ರಾಯಗಳಿಗೆ, ಸಂಘರ್ಷಗಳಿಗೆ ಎರವಾಗದಂತೆ ಮಾಡಿಕೊಳ್ಳುವ ಸಾಮರ್ಥ್ಯ ಮತ್ತು ಚಿಂತನಾಶಕ್ತಿ ನಮ್ಮಲ್ಲಿದೆ. ಬಹುತ್ವದ ಭಾರತದಲ್ಲಿ ಯಾವಾಗಲೂ ಇರುತ್ತದೆ ಕೂಡ. ಇದು ದಲಿತರಿಗೆ ಮಾತ್ರವಲ್ಲ, ಎಲ್ಲ ಜಾತಿಯವರಿಗೂ ಅನ್ವಯಿಸುವ ಮಾತು.

ವಿಶ್ಲೇಷಣೆ
ಟಿ.ದೇವಿದಾಸ್
vveditoped@gmail.com

ಜಾತಿಯನ್ನು ಹುಟ್ಟು ಹಾಕಿದವನು ಬ್ರಾಹ್ಮಣ. ಮುಖ್ಯವಾಗಿ ಮನು. ಆದುದರಿಂದ ಮನುವನ್ನೂ, ಬ್ರಾಹ್ಮಣರನ್ನೂ, ಇವರಿಂದ ಹುಟ್ಟಿದ ಜಾತಿಯನ್ನೂ ಸರ್ವನಾಶ ಮಾಡಿದ ಹೊರತು ಯಾರೂ ಸುಖವಾಗಿ ಈ ಸಮಾಜದಲ್ಲಿ ಬದುಕಲು ಸಾಧ್ಯವಿಲ್ಲ'' ಎಂಬ ಸುಳ್ಳೊಂದು ಹಲವು ವರ್ಷಗಳಿಂದ ಪ್ರಚಾರಕ್ಕೆ ಬಂದು ಈಗ ತುರಿಯಾವಸ್ಥೆಯಲ್ಲಿದೆ. ದಲಿತರು ರಾಷ್ಟ್ರದ ಒಂದು ಭಾಗವಾಗಿ ತಾವೇನೇ ಮಾಡಿದರೂ ಅದು ತಮಗೇ ಹಾನಿಯನ್ನುಂಟು ಮಾಡುತ್ತದೆಂಬುದನ್ನೂ ಮರೆತು ತಮ್ಮ ಜಾತಿಯನ್ನು ಆಧರಿಸಿದ ಮೀಸಲಾತಿಗೆ ಒತ್ತುಕೊಟ್ಟು ಸಂಘರ್ಷಕ್ಕೆ ಇಳಿಯುತ್ತಲೇ ಇರುತ್ತಾರೆ. ಜಾತಿ ಹುಟ್ಟಿಕೊಂಡ ಬಗೆಗೆ ಅಂಬೇಡ್ಕರ್ ತುಂಬಾ ಚೆನ್ನಾಗಿ ಓದಿಕೊಂಡವರು ಮಾತ್ರವಲ್ಲ, ಜಾತಿಯ ಬಗ್ಗೆ ಮಾತಾಡಲು ಪೂರ್ಣಪ್ರಮಾಣದಲ್ಲಿ ನೈತಿಕತೆಯುಳ್ಳವರು. ಆದರೆ, ಎಲ್ಲ ದಲಿತರೂ ಅಂಬೇಡ್ಕರರಂತೆ ಯೋಚಿಸಲಾರರು; ಅಂಬೇಡ್ಕರರು ದಲಿತರಂತೆ ಯೋಚಿಸಿದವರಲ್ಲ. ಕರ್ಮದಲ್ಲಿ ಬ್ರಾಹ್ಮಣತ್ವ ಹೊಂದಿದ ದಲಿತರನ್ನು, ಕರ್ಮದಲ್ಲಿ ಶೂದ್ರತ್ವವನ್ನು ಹೊಂದಿದ ಬ್ರಾಹ್ಮಣರನ್ನು ಮನುಸ್ಮೃತಿ ಹೇಳುತ್ತದೆ. ಸಮಾಜದಲ್ಲಿ ಇದನ್ನು ಕಾಣಬಹುದು. ಜಾತಿಸೃಷ್ಟಿಯ ಬಗ್ಗೆ ಅಂಬೇಡ್ಕರ್ ಮಾತಿದು: ನಿಮ್ಮ ಮೇಲೆ ಒತ್ತಾಯದಿಂದ ನಾನು ದೃಢಪಟ್ಟು ಹೇಳಬಯಸುವುದೇನೆಂದರೆ, ಮನುವು ಜಾತಿ ನಿಯಮವನ್ನು ಸೃಷ್ಟಿಸಲೂ ಸಾಧ್ಯವಿಲ್ಲ; ಹಾಗೆ ಮಾಡಲು ಅವನಿಗೆ ಸಾಧ್ಯವೂ ಇರಲಿಲ್ಲ. ಮನುವಿಗಿಂತ ಬಹಳ ಹಿಂದೆಯೇ ಜಾತಿಪದ್ಧತಿಯಿತ್ತು! ಮನು ರೂಢಿಯಲ್ಲಿದ್ದ ಅದನ್ನು ಬರೀ ಎತ್ತಿಹಿಡಿದ, ಮತ್ತು ತಾತ್ತ್ವಿಕ ಚೌಕಟ್ಟನ್ನು ಮಾತ್ರ ಇಟ್ಟ. ಆದರೆ ಸತ್ಯವಾಗಿಯೂ, ಖಂಡಿತವಾಗಿಯೂ ಅವನು ಈಗಿರುವ ಹಿಂದೂ ಸಮಾಜ ವ್ಯವಸ್ಥೆಯನ್ನು ನಿರ್ಮಿಸಿದವನೂ ಅಲ್ಲ; ಹಾಗೆ ಮಾಡಲು ಅವನಿಗೆ ಶಕ್ಯವೂ ಇರಲಿಲ್ಲ... ಜಾತಿಯ ಹುಟ್ಟು, ಬೆಳವಣಿಗೆ, ಹಬ್ಬುವಿಕೆ ಎಂಬುದು ಒಬ್ಬ ವ್ಯಕ್ತಿಯ ಬುದ್ಧಿತನಕ್ಕೂ, ಒಂದು ವರ್ಗದ ಶಕ್ತಿಗೂ ಮೀರಿ ನಿಂತ ಮಹಾನ್ ವ್ಯವಸ್ಥೆ... ಹಾಗೆಯೇ ಬ್ರಾಹ್ಮಣನು ಈ ವ್ಯವಸ್ಥೆಯನ್ನು ಸೃಷ್ಟಿಮಾಡಿದನೆಂಬುದೂ ಸುಳ್ಳು. ಮನುವಿನ ಬಗ್ಗೆ ನಾನು ಹೇಳಿದ ಮೇಲೆ ಹೆಚ್ಚೇನೂ ಉಳಿದಿಲ್ಲ. ಈ ದುರ್ವಾದವೂ ಮೋಸದ್ದು, ಕಿಡಿಗೇಡಿತನದ್ದು. ತರ್ಕವಿಲ್ಲದ ಅವಿವೇಕ ಮತ್ತು ದುರುದ್ದೇಶದಿಂದ ಕೂಡಿದ್ದು ಎಂದಷ್ಟೇ ಹೇಳುವೆ. ಬ್ರಾಹ್ಮಣರು ಎಷ್ಟೋ ತಪ್ಪುಗಳನ್ನು ಮಾಡಿದ ಅಪರಾಧಿಗಳಿರಬಹುದು; ಇದ್ದಾರೆಂದೇ ಹೇಳಲು ನನಗೆ ಧೈರ್ಯವಿದೆ. ಆದರೆ ಜಾತಿಯನ್ನು ಅವರು ಬ್ರಾಹ್ಮಣೇತರ ಪ್ರಜಾವರ್ಗದ ಮೇಲೆ ಹೇರುವುದೆಂಬುದು ಬ್ರಾಹ್ಮಣರ ಶಕ್ತಿಗೆ ಮೀರಿದ್ದಾಗಿತ್ತು ('ಡಾ.ಅಂಬೇಡ್ಕರ್ ರೈಟಿಂಗ್ಸ್ ಆಂಡ್ ಸ್ಪೀಚಸ್'. ಭಾಷಾಂತರ: ಡಾ.ಕೆ.ಎಸ್.ನಾರಾಯಣಾಚಾರ್ಯ).

ಜಾತಿಯು ವೃತ್ತಿಗೆ ಸಂಬಂಧಿಸಿದ್ದು. ಕುಲ ಬೇರೆ. ಅನೇಕ ವೃತ್ತಿಗಳವರು ಒಂದೇ ಗುರುವಿನೆಡೆ ವಿದ್ಯಾರ್ಜನೆ ಮಾಡಿದ ವ್ಯವಸ್ಥೆಯನ್ನು ಗುರುಕುಲವೆಂದರು. ಆ ಗುರುವೇ ಕುಲಪತಿಯೆನಿಸಿದ. ಬ್ರಿಟಿಷರು ಬಂದಮೇಲೆ ನಮ್ಮ ವ್ಯವಸ್ಥೆಯನ್ನೂ, ಬುದ್ಧಿಯನ್ನೂ ಕೆಡಿಸಿ ಜಾತಿದ್ವೇಷ ಹಬ್ಬಿಸಿ ಬೆಳೆಸಿದರು. ಅಲ್ಲಿಂದೀಚೆಗೆ ಹುಟ್ಟಿದ ಕೆಲವು ರಾಜಕೀಯ ಪಕ್ಷಗಳ ಉದ್ದಿಶ್ಯವೇ ಬ್ರಾಹ್ಮಣ ದ್ವೇಷ, ಬ್ರಾಹ್ಮಣ ನಿರ್ನಾಮ, ಸಂಸ್ಕೃತ ದ್ವೇಷ, ದೇಗುಲಗಳ ನಾಶ. ಹೀಗೆ ದ್ವೇಷಪ್ರವಾಹವೇ ಮುಂದುವರಿಯುತ್ತಿದೆ. ಇವೆಲ್ಲ ಚರಿತ್ರೆಯುದ್ದಕ್ಕೂ ಹರಿದು ಬಂದ ಪ್ರವಾಹವಾಗಿ ವರ್ತಮಾನದಲ್ಲಿ ಈ ಬಿಕ್ಕಟ್ಟು ಸೃಜಿಸಿದ ಅನಾಹುತಗಳಿಂದ ನಾವು ಒಂದಾಗಲು ಸಾಧ್ಯವೇ ಇಲ್ಲವೇನೋ ಎಂಬ ಸ್ಥಿತಿಯನ್ನು ತಲುಪಿದ್ದೇವೆ. ಈ ಕಾರಣದಿಂದಾಗಿ ದಲಿತರು ಜಾತಿಯನ್ನು ಮುಂದುಮಾಡಿಕೊಂಡು ಮೀಸಲಾತಿಗೆ ಆಗ್ರಹಿಸಿ ಮುಖ್ಯವಾಹಿನಿಯಲ್ಲಿ ಬೆರೆಯಲು ಅಸಾಧ್ಯವಾಗುತ್ತಿದೆಯೇನೋ ಅನಿಸುತ್ತಿದೆ. ಶೂದ್ರರು ಯಾರು? ಎಂಬುದಕ್ಕೆ ಅಂಬೇಡ್ಕರ್ ಉತ್ತರವಿದು: ಸೂರ್ಯವಂಶದ ಗೌರವಾನ್ವಿತ ದೊರೆಗಳ ಆರ್ಯಕುಲದವರೇ ಈ ಶೂದ್ರರು. ಒಂದು ಕಾಲದಲ್ಲಿ ಮೂರೇ ವರ್ಣಗಳಿದ್ದವು. ಶೂದ್ರರು ಕ್ಷತ್ರಿಯರೇ ಆಗಿದ್ದರು. ಒಂದೊಮ್ಮೆ ಬ್ರಾಹ್ಮಣರಿಗೂ ಅವರಿಗೂ ದೀರ್ಘಕಾಲ ಮನಸ್ತಾಪವಾಗಿ, ಬ್ರಾಹ್ಮಣರಿಗೆ ಇವರು ನಾನಾ ಹಿಂಸೆ, ಕ್ರೌರ್ಯ, ಅಪಮಾನಗಳನ್ನು ನೀಡುತ್ತ ಬಂದ ಪ್ರಯುಕ್ತ, ಅವರ ಕಾಟ ತಡೆಯಲಾರದೆ ಬ್ರಾಹ್ಮಣರು ಅವರಿಗೆ ಉಪನಯನ, ಪೌರೋಹಿತ್ಯ, ಯಾಜನಗಳನ್ನು ನಿಲ್ಲಿಸಿ ಬಹಿಷ್ಕರಿಸಿದರು. ಹೀಗಾಗಿ ಈ ಕ್ಷತ್ರಿಯರು ಪತಿತರಾದರು. ವೈಶ್ಯರಿಗಿಂತ ಕೆಳಗಾದರು ('ಹು ವರ್ ದ ಶೂದ್ರಾಸ್?'ನಲ್ಲಿ ಉಲ್ಲೇಖಿತ).

ಅಂಬೇಡ್ಕರರಿಗಿದ್ದ ಸಂಸ್ಕೃತ ಪಾಂಡಿತ್ಯ ನೆಹರು, ಗಾಂಧಿ, ಇಂದಿರಾ, ರಾಜೀವ್ ಈ ಯಾರಿಗೂ ಇರಲಿಲ್ಲ. ದಲಿತರು ಹೇಗೆ ಆದರು? ಎಂಬುದಕ್ಕೆ ಅಂಬೇಡ್ಕರ್ ಐದಾರು ವಾದಗಳನ್ನು ಮಂಡಿಸುತ್ತಾರೆ: ಅವರು ವೀರಕ್ಷತ್ರಿಯರಾಗಿ, ಮುಸ್ಲಿಂ ಆಕ್ರಮಣಕಾರರೊಡನೆ ಹೋರಾಡಿ ಸೋತು ಬಂದ ವೀರರಾಗಿ, ಸೋತು ಬಂದವರನ್ನು ಸಮಾಜ ಒಳಸೇರಿಸದೇ, ಮೂಢನಂಬಿಕೆಯಿಂದ ಹೊರಗಿಟ್ಟ ಪರಿಣಾಮ, ಒಂದು. ಅಥವಾ ಸಾಮೂಹಿಕವಾಗಿ ಬೌದ್ಧಮತ ಅಂಗೀಕರಿಸಿ, ಬ್ರಾಹ್ಮಣರೊಡನೆ ಘರ್ಷಣೆಯಾಗಿಯೂ ಹಾಗಾಗಿರಬಹುದು. ಅಥವಾ ಮಾಂಸಾಹಾರ, ಗೋಭಕ್ಷಣಾದಿಗಳಿಂದ, ಬೌದ್ಧರಾಗಿಯೂ ಶೀಲ ಬದಲಾಗದೇ ಹಾಗಾಗಿರಲು ಸಾಕು- ಇತ್ಯಾದಿ (ಭಾಷಣಗಳು ಬರಹಗಳು ಮತ್ತು ಎ ಟ್ರ್ಯೂ ಆರ್ಯನ್, ಕಾನ್ರಾಡ್ ಎಲ್ಸ್ಟ್). ಮೊದಲು ಅಂಬೇಡ್ಕರರ ಕೃತಿಗಳ ಚರ್ಚೆಯಾಗಬೇಕು. ಅಂಬೇಡ್ಕರರ ಬರಹಗಳಲ್ಲಿ ಖಚಿತತೆಯೂ ಇದೆ, ಸಂದೇಹವಿದೆ, ಕೋಪ, ಆಕ್ರೋಶ, ಕಳಕಳಿ, ಪ್ರಾಮಾಣಿಕತೆ, ವಿದ್ವತ್ತು, ಸಮಾಜಪ್ರೀತಿ, ರಾಷ್ಟ್ರಪ್ರೇಮ- ಎಲ್ಲವೂ ಅನ್ಯಾನ್ಯ ಆಕೃತಿಗಳಲ್ಲಿವೆ. ಅದರಲ್ಲಿ ಬೇಕಾದುದನ್ನು ಮಾತ್ರ ಆಯ್ದುಕೊಳ್ಳುವವರಿಂದ ರಾಷ್ಟ್ರಹಿತ ಅಸಾಧ್ಯ!

ದಲಿತರು ಆತ್ಮವಿಮರ್ಶೆಯೊಂದಿಗೆ ಅಂಬೇಡ್ಕರರನ್ನು ಮೆಚ್ಚಿ ಆರಾಧಿಸುವಾಗ ಅವರ ಚಿಂತನೆಗಳನ್ನು ಅಳವಡಿಸಿಕೊಂಡರೆ ಬಹುಪಾಲು ಸಮಸ್ಯೆಗೆ ಪರಿಹಾರ ಖಂಡಿತವಾಗಿ ಸಾಧ್ಯವೇನೋ! ಆರ್ಥಿಕ ಸ್ಥಿರತೆ, ವೃತ್ತಿ ಖಾತರಿಗಳ ಅಭಯವನ್ನಿತ್ತು ನಿಜವಾಗಿ ಹಿಂದುಳಿದ ದಲಿತರನ್ನು ಮೇಲೆತ್ತಿ ಜಾತಿ ಅವರಿಗೆ ಮುಖ್ಯವಾಗದಂತೆ ವ್ಯವಸ್ಥೆಯನ್ನು ಸಮತೋಲನಗೊಳಿಸುವುದು ಸಾಧ್ಯವಿದೆಯೆಂದು ವಿವೇಕಾನಂದರು ಹೇಳುತ್ತಾರೆ. ಜಾತ್ಯತೀತ ರಾಷ್ಟ್ರವಾಗಿ ಜಾತಿಯನ್ನೇ ಪ್ರಬಲ ಅಸ್ತ್ರವಾಗಿ ಭಿನ್ನಾಭಿಪ್ರಾಯಗಳಿಗೆ, ಸಂಘರ್ಷಗಳಿಗೆ ಎರವಾಗದಂತೆ ಮಾಡಿಕೊಳ್ಳುವ ಸಾಮರ್ಥ್ಯ ಮತ್ತು ಚಿಂತನಾಶಕ್ತಿ ನಮ್ಮಲ್ಲಿದೆ. ಬಹುತ್ವದ ಭಾರತದಲ್ಲಿ ಯಾವಾಗಲೂ ಇರುತ್ತದೆ ಕೂಡ. ಇದು ದಲಿತರಿಗೆ ಮಾತ್ರವಲ್ಲ, ಎಲ್ಲ ಜಾತಿಯವರಿಗೂ ಅನ್ವಯಿಸುವ ಮಾತು. ಜಾತಿಯಿಂದ

ಹುಟ್ಟಬಹುದಾದ ದ್ವೇಷ ಯಾರನ್ನು ಉಳಿಯಗೊಟ್ಟಿದೆ? ದ್ವೇಷದಿಂದಲೇ ಅಲ್ಲವೆ ರಾಷ್ಟ್ರ ರಾಷ್ಟ್ರಗಳು ಉರಿಯುತ್ತಿರುವುದು. ಭೂಮಿಯ ಮೇಲಿಂದಲೇ ಯಹೂದ್ಯ ಸಂತಾನವನ್ನು ತೊಡೆದು ಬಿಡುವುದಾಗಿ ಘೋಷಿಸಿ, ಕೋಟ್ಯಂತರ ನಿರಪರಾಧಿಗಳನ್ನು ಹಿಟ್ಲರ್ ಸುಟ್ಟು ಸಾಯಿಸಿದ. ತಮ್ಮ ಮತಬಾಹಿರರ ಬಗ್ಗೆ ಕ್ರೈಸ್ತರು, ಮುಸ್ಲಿಮರದ್ದೂ ಇದೇ ಮನಃಸ್ಥಿತಿಯ ನಿಲುವು. ಕ್ರೈಸ್ತನಾಗಿದ್ದ ಹಿಟ್ಲರನಿಗೆ ಅಂದಿನ ಪೋಪರು, ಕ್ರೈಸ್ತ ಮುಖಂಡರು ಮಧ್ಯೆ ಪ್ರವೇಶಿಸಿ ಹಿತವಚನ ಹೇಳಿದ್ದರೆ ಅವನು ಕೇಳುತ್ತಿದ್ದನೋ?

ದಲಿತೋದ್ಧಾರಕ್ಕಾಗಿ ಗಾಂಧಿ, ಅಂಬೇಡ್ಕರ್ ಪ್ರಯತ್ನಿಸಿದರು ಎಂದ ಮಾತ್ರಕ್ಕೆ ಈ ರಾಷ್ಟ್ರ ಅವರನ್ನು ಗೌರವಾದರಿಸಿದ್ದಲ್ಲ. ಜಾತೀಯತೆಯ ಮೂಲೋತ್ಪಾಟನೆಗೆ ಅವರು ನಿರಂತರ ಶ್ರಮಿಸಿದರೆಂಬುದೇ ಮುಖ್ಯವಾಗಿ ಅವರ್ಯಾರೂ ಬ್ರಾಹ್ಮಣ ದ್ವೇಷ, ಸರಸ್ವತಿ ದ್ವೇಷ ಮಾಡಲಿಲ್ಲ. ಶ್ರೀರಾಮ-ಕೃಷ್ಣರು ಕ್ಷತ್ರಿಯರೇ ಆಗಿದ್ದರು. ಅವರನ್ನು ನಾವೆಲ್ಲ ಆರಾಧಿಸಿ ಪೂಜಿಸುತ್ತಿಲ್ಲವೆ? ಯಾರಿಗೂ ದ್ವೇಷವೇ ಒಂದು ಕ್ಯಾರೆಕ್ಟರ್ ಆಗಬಾರದು. ಅದು ತನ್ನನ್ನು ತಾನು ಸುಟ್ಟುಕೊಳ್ಳುತ್ತ ಸುತ್ತಮುತ್ತಲಿನ ವಾತಾವರಣವನ್ನೂ ಸುಡುತ್ತದೆ. ಈ ಸುಡುವ ಕ್ರಿಯೆ ಕೊನೆಗೊಳ್ಳುವುದು ಎಲ್ಲವೂ ಬೂದಿಯಾಗುವುದರೊಂದಿಗೆ. ಯಾರದ್ದೋ 'ಎಡ' ಚಿಂತನೆಗಳಿಗೆ ಮಾರುಹೋಗಿ ಬದುಕನ್ನು ನಿರಂತರ ಸಂಘರ್ಷದಲ್ಲಿ ಹಾಳುಮಾಡಿಕೊಳ್ಳುವುದೇಕೆ? ಬದುಕು ಎಲ್ಲದಕ್ಕಿಂತ ದೊಡ್ಡದು. ಜಾತಿಯೇ ಬದುಕಲ್ಲ; ಬದುಕು ಜಾತಿಯ ಮೇಲೂ ನಿಂತಿಲ್ಲ. ಅಂಬೇಡ್ಕರ್ ಬಯಸಿದ್ದು ಜಾತಿ ವಿಹೀನ ಬದುಕನ್ನು. ಬಸವಣ್ಣನ ಕ್ರಾಂತಿಯೂ ಇದೇ ಹಿನ್ನೆಲೆಯದ್ದು. ದಲಿತರ ಮೇಲಾಗುತ್ತಿರುವ ದೌರ್ಜನ್ಯಕ್ಕೆ ಬ್ರಾಹ್ಮಣರು ಹೇಗೆ ಕಾರಣರಾದಾರು? ವ್ಯವಸ್ಥಿತವಾಗಿ ನಮ್ಮನ್ನು ದಾರಿ ತಪ್ಪಿಸಿದವರ್ಯಾರು? ತಪ್ಪಿಸುತ್ತಿರುವವರ್ಯಾರು? ಇದೆಲ್ಲ ನಮ್ಮ ನಮ್ಮನ್ನು ಒಡೆಯುವ ಯಾರದ್ದೋ ಷಡ್ಯಂತ್ರವೆಂದು ಯೋಚಿಸಬೇಡವೆ? ಇದೆಲ್ಲ ರಾಷ್ಟ್ರೀಯ ಚರ್ಚೆಯ ವಿಷಯಾಂಶಗಳು. ಸಮಸ್ತ ಹಿಂದೂಗಳು ಒಂದಾಗಿ ಭಾರತೀಯ ಅಧ್ಯಾತ್ಮ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಔನ್ನತ್ಯಕ್ಕೊಯ್ಯಬೇಕಿದೆ. ಇದಕ್ಕೆ ಸರಕಾರಗಳು, ಮಾಧ್ಯಮಗಳು, ಭಾರತೀಯರೆಲ್ಲರೂ ಕೈಗೂಡಿಸಬೇಕಿದೆ. ಅಂಬೇಡ್ಕರರ ದಲಿತೋದ್ಧಾರದ ಕನಸು ಅಂಬೇಡ್ಕರ್ ಚಿಂತನೆಗಳಿಂದಲೇ ಆರಂಭವಾಗಬೇಕಿದೆ. ಬಹುಕಾಲದ ಹಿಂದೆಯೇ ವರ್ಣಗಳು ಮಿಶ್ರಿತವಾಗಿರುವುದರಿಂದ ಹೀಗೆಯೇ ಆಯಿತು ಅಂತ ನಿರ್ಣಯಿಸಲು ಸಾಧ್ಯವಾಗುವುದಿಲ್ಲ. ಸತ್ಯ, ದಾನ, ಕ್ಷಮೆ, ಶೀಲ, ಕರುಣೆ, ತಪಸ್ಸು, ದಾಕ್ಷಿಣ್ಯ ಇಂಥ ಗುಣಗಳು ಯಾವನಲ್ಲಿರುತ್ತದೋ ಅವನೇ ಬ್ರಾಹ್ಮಣನು, ಇಲ್ಲದವನು ಅಬ್ರಾಹ್ಮಣ. ಶೂದ್ರನಲ್ಲೂ ಇವು ಇರುವುದಾದರೆ ಅವನೇ ಬ್ರಾಹ್ಮಣ. ಬ್ರಾಹ್ಮಣನಲ್ಲಿ ಇಲ್ಲವಾದರೆ ಅವನೇ ಶೂದ್ರ. ಬ್ರಾಹ್ಮಣನು ತನ್ನ ಚಾರಿತ್ರ್ಯ ಪತನಕ್ಕೆ ಕಾರಣವಾದ ಅನ್ಯ ವೃತ್ತಿಗಳಲ್ಲಿ ಬಿದ್ದರೆ, ಡಂಭಾಚಾರಿಯಾದರೆ ಶೂದ್ರನಿಗಿಂತ ಕಡೆಯಾಗುತ್ತಾನೆ. ಇನ್ನೊಬ್ಬನು ಶೂದ್ರನಾಗಿ ಹುಟ್ಟಿಯೂ ಮನೋನಿಗ್ರಹ, ಇಂದ್ರಿಯ ನಿಗ್ರಹದೊಂದಿಗೆ, ಸತ್ಯ-ಧರ್ಮಗಳಲ್ಲಿ ಸದಾ ಇರುತ್ತಾನಾದರೆ ಅವನೇ ಬ್ರಾಹ್ಮಣನಾಗುತ್ತಾನೆ. ಅಂದರೆ ಬ್ರಾಹ್ಮಣ್ಯಕ್ಕೆ ಮೂಲ ಕಾರಣವೇ ಚಾರಿತ್ರ್ಯ ಎಂಬುದು ಸ್ಪಷ್ಟ. ಮಹಾಭಾರತದ ಧರ್ಮವ್ಯಾಧ, ರಾಮಾಯಣದ ಶಬರಿಯಂಥವರು ಇದಕ್ಕೆ ಜ್ವಲಂತ ನಿದರ್ಶನ. ಎಲ್ಲ ಶಬರರೂ ಶಬರಿಯಂಥಾಗಲಿಲ್ಲ, ಎಲ್ಲ ವ್ಯಾಧರೂ ಧರ್ಮವ್ಯಾಧರಾಗಲಿಲ್ಲ. ಒಂದು ಕಾಲದಲ್ಲಿ ಕ್ಷತ್ರಿಯರಾಗಿದ್ದು ಈಗ ದಲಿತರಾಗಿರುವವರು ಮತ್ತೆ ಏಕೆ ಕ್ಷತ್ರಿಯರಾಗಬಾರದು? ಅವರು ಸಂಕಲ್ಪ ಮಾಡುವವರಾದರೆ ಸಮಸ್ಯೆ ತೀರುತ್ತದೆ. ಕುರುಬರಾಗಿ ಹುಟ್ಟಿ, ಬಹಮನಿ ಅರಸರ ಸೇನೆಯಲ್ಲಿ, ಸೇವೆಯಲ್ಲಿ ಮುಸ್ಲಿಮರಾಗಿ ಮತಾಂತರಗೊಂಡಿದ್ದ ಹಕ್ಕಬುಕ್ಕರಿಗೆ ವಿದ್ಯಾರಣ್ಯರು ಕ್ಷಾತ್ರದೀಕ್ಷೆ ಕೊಟ್ಟು ಅರಸರನ್ನಾಗಿಸಿದಾಗ ಅಧ್ಯಾತ್ಮ ಅಡ್ಡಿಬರಲಿಲ್ಲ! ಈಗಲೂ ಅಷ್ಟೇ. ನಾಯಕರು, ಬೇಡರು, ರೆಡ್ಡಿಗಳು, ತಿಗಳರು, ನಾಯ್ಡುಗಳು, ಜಾಟರು, ಹೂಣರು, ಪಟೇಲರು ಮುಂತಾದ ದಲಿತವರ್ಗದವರು ಅಂಬೇಡ್ಕರರ ಚಿಂತನೆಯ ದಾರಿಯಲ್ಲಿ ಕ್ಷತ್ರಿಯರಾಗಬೇಕು. ಇವರನ್ನು ಸರಕಾರಿ ಜಾತಿಯಾಧಾರದ ಮೇಲೆ ಒಡೆದು ಮೀಸಲಾತಿಗೆ ಬಡಿದಾಡುವಂಥ ದುಃಸ್ಥಿತಿಗೆ ತಂದ ದುಷ್ಟ ರಾಜಕಾರಣ ಸಾಯಬೇಕು. ಜಾತ್ಯತೀತ ದೇಶದಲ್ಲಿ ಜಾತಿಗಣತಿ, ಜಾತಿಯಾಧಾರಿತ ರಾಜಕೀಯ ತೊಲಗಿದರೆ ಮಾತ್ರ ಬಹುತ್ವದ ಭಾರತ ಸದೃಢವಾದೀತು!

ನಮ್ಮ ಕಾಲದ ಎರಡು ಮಹಾನ್ ವ್ಯಕ್ತಿತ್ವವೆಂದರೆ, ಇರುವುದೆಲ್ಲವನ್ನೂ ಕಳಚಿಕೊಳ್ಳುತ್ತ ಲೌಕಿಕದ ನಂಟನ್ನು ಬಿಟ್ಟು ಮೇರು ಸದೃಶವಾದ ವ್ಯಕ್ತಿತ್ವವನ್ನು ತನ್ನ ರೂಪಕಗಳಿಂದಲೇ ಗಳಿಸಿದ ಗಾಂಧಿ ಹಾಗೂ ಇಲ್ಲದಿರುವುದನ್ನು ಒಟ್ಟುಗೂಡಿಸುತ್ತ ಮನುಷ್ಯ ಬದುಕಿನ ಔನ್ನತ್ಯವನ್ನು, ಉತ್ಕರ್ಷವನ್ನು ಅದರ ಆತ್ಯಂತಿಕವಾದ ನೆಲೆಯಲ್ಲಿ ಆರ್ಜಿಸಿದ ಮಹರ್ ಎಂಬ ದಲಿತ ಜನಾಂಗದ ಅಭಿಮಾನ ಮತ್ತು ಹೆಮ್ಮೆಯಾಗಿ ಭಾರತರತ್ನ ಎನಿಸಿದ ಡಾ.ಅಂಬೇಡ್ಕರ್. ಈರ್ವರೂ ಮನುಷ್ಯ ಜೀವಿತದಲ್ಲಿ ಏರಬಹುದಾದ ಎತ್ತರವನ್ನೂ ಏರಿ ಯಶಸ್ಸಿನ ಪರಮಗಮ್ಯವನ್ನು ಕಂಡವರು. ಈ ಎರಡೂ ಪರಿವರ್ತನೆಗಳಾದ ಕಾಲದಲ್ಲೇ ನಾವು ಬದುಕುತ್ತಿದ್ದೇವೆ. ಇವರುಗಳ ಬದುಕು ಮತ್ತು ಭಾವ ಮೇಲ್ಪಂಕ್ತಿಯಾಗಬೇಕು. ಈ ಅರಿವು ಹುಟ್ಟಿದರೆ ಬಹುತ್ವದ ಭಾರತ ಕಟ್ಟಲು ಸಾಧ್ಯವಿದೆಯೇ ಹೊರತು ಅಧಿಕಾರದ ರಾಜಕೀಯದ ಮೂಸೆಯಿಂದಲ್ಲ!

ನಮ್ಮ ನಮ್ಮ ಮಾನವೀಯತೆಯ ಅಸ್ಮಿತೆಗೆ ಸವಾಲಾಗಿ ರಾಜಕೀಯ, ಸಾಂಸ್ಕೃತಿಕ ಮತ್ತು ಸಾಮಾಜಿಕ ಅಸ್ಪೃಶ್ಯತೆಯು ಬೆಳೆದು ನಿಂತಿದೆ. ಸವರ್ಣೀಯರನ್ನು ಎದುರಿಸುವ ಸ್ವಾಭಿಮಾನ ಪ್ರಜ್ಞೆ ದಲಿತರಲ್ಲಿ ಹುಟ್ಟಿ ಅವರು ಅಂಬೇಡ್ಕರರಂತೆ ಎಲ್ಲವನ್ನೂ ಗಳಿಸುತ್ತಲೇ ಸಹನೀಯ ಬದುಕಿನ ಗತಿಯ ಎತ್ತರವನ್ನು ಮುಟ್ಟಬೇಕು. ಅದಕ್ಕೂ ಮೊದಲು ಜಾತಿಯ ಭೂತ ಸಾಯಬೇಕು. ಜಾತಿಯ ಬಗ್ಗೆ ಮಾತನಾಡುವುದನ್ನು ಬಿಟ್ಟಾಗಲೇ ಜಾತಿಯ ಭೂತ ಸಾಯುತ್ತದೆ. ಆಲೋಚಿಸಿ- ಸಾರ್ವಜನಿಕ ಸ್ಥಳಗಳಲ್ಲಿ ಯಾರಿಗೂ ಜಾತಿಪ್ರಜ್ಞೆ ಹುಟ್ಟುವುದೇ ಇಲ್ಲ. ಆಫ್ ಕೋರ್ಸ್ ಹುಟ್ಟಲು ಸಾಧ್ಯವೂ ಇಲ್ಲ. ನಾವೆಲ್ಲ ಮನುಷ್ಯರು ಎಂಬ ಭಾವದಲ್ಲಿ, ಆ ಅರಿವಲ್ಲಿ ಬದುಕನ್ನು ನೋಡಿದರೆ ಜಾತಿ ಮಾಯವಾಗುತ್ತದೆ. ಜಾತಿಯ ಭೂತ ಉಳಿದಿರುವುದು ವಿಧಾನಸೌಧದಲ್ಲಿ, ರಾಜಕಾರಣಿಗಳ ವಿಷ ತುಂಬಿದ ತಲೆಯಲ್ಲಿ ಮತ್ತು ಜಾತಿಯ ರಾಜಕೀಯವನ್ನೇ ಗುರಿಯಾಗಿಟ್ಟುಕೊಂಡ ಮಾಧ್ಯಮಗಳಲ್ಲಿ! ನಾನು ಮುಸ್ಲಿಮ್, ನಾನು ಕ್ರೈಸ್ತ, ನಾನು ಹಿಂದೂ, ನಾನು ಆ ಜಾತಿ, ಈ ಮತ, ಆ ಪಂಥ ಅಂದರೆ ಹೊಟ್ಟೆ ತುಂಬುವುದಿಲ್ಲ. ಇದೆಲ್ಲ ಹೊಟ್ಟೆ ತುಂಬಿದವರು ಅಮಾಯಕರನ್ನು ಪ್ರಚೋದಿಸಿ ಮಾಡುತ್ತಿರುವ ನೀಚ ರಾಜಕೀಯದ ಕುಕೃತ್ಯ. ಅಂಬೇಡ್ಕರರ ಚಿಂತನೆಯಲ್ಲಿ ದಲಿತರು ಸಮಕಾಲೀನ ಭಾರತವನ್ನು ಪ್ರತಿನಿಧಿಸಬೇಕು. ಅಂದಾಗ ರಾಷ್ಟ್ರಕ್ಕೂ ಹಿತ, ದಲಿತರಿಗೂ ಮುಖ್ಯವಾಹಿನಿಯಲ್ಲಿ ಸ್ಥಾನ ಮಾನ್ಯತೆ ಪ್ರಾಪ್ತಿ ಸಾಧ್ಯ. ದಲಿತ ಚಿಂತನೆ ಈ ದಿಸೆಯಲ್ಲಿ ಸಾಗುವುದಕ್ಕೆ ದಲಿತ ಚಿಂತಕರು, ಮುಖಂಡರು ಹೆಜ್ಜೆಯಿಡಬೇಕು. ಈ ಮಾತು ದಲಿತರಿಗಷ್ಟೇ ಅಲ್ಲ, ಅಲ್ಪಸಂಖ್ಯಾತರಿಗೂ ಅನ್ವಯಿಸುತ್ತದೆ. ಅಂಬೇಡ್ಕರ್ ಅನುಭವಿಸಿದ ಕಷ್ಟಗಳನ್ನು ಇಂದಿನ ದಲಿತರು ಅನುಭವಿಸುತ್ತಿಲ್ಲವೇನೋ! ಅಂಬೇಡ್ಕರ್ ತಂದೆ-ತಾಯಿಗಳು ಮಗನನ್ನು ವಿದ್ಯಾವಂತನನ್ನಾಗಿಸಬೇಕೆಂಬ ಹಂಬಲವನ್ನು ಬಹುವಾಗಿ ಹೊಂದಿದ್ದವರು. ಅಂಬೇಡ್ಕರರನ್ನು ಎತ್ತಿ ಮೆರೆಯಿಸಿ ಹೊಗಳಿ ಕೊಂಡಾಡುವ, ಮೀಸಲಾತಿ ಹೋರಾಟದಲ್ಲಿ ತಮ್ಮ ಜನಾಂಗಕ್ಕೆ ಅನುಕೂಲವಾಗಲೆಂದು ಬಯಸುವ ದಲಿತರು, ದಲಿತ ಚಿಂತಕರು, ದಲಿತ ಸಂಘಟನೆಗಳು ತಮ್ಮ ವರ್ಗದ ಮಕ್ಕಳನ್ನು ಕಲಿಕೆಯ ಕಡೆ ಗಮನ ಸೆಳೆಯುವಂತೆ ಬಹುದೊಡ್ಡ ಪ್ರಯತ್ನ ಮಾಡಬೇಕಿದೆ. ದಲಿತರ ಮುಖ್ಯಪಾತ್ರವಿರುವುದು ಅಂಬೇಡ್ಕರರ ಚಿಂತನೆಗಳನ್ನು ನಿಜಗೊಳಿಸುವುದರಲ್ಲಿ! ಬದುಕಿನ ಗತಿಬಿಂಬಕ್ಕೆ ಅವುಗಳನ್ನು ತಂದುಕೊಳ್ಳುವುದರಲ್ಲಿ! ಭಾರತದ ರತ್ನದಂತಿದ್ದ 'ಭಾರತರತ್ನ' ಡಾ. ಅಂಬೇಡ್ಕರ್ ಅಂಥ ಮಹಾನ್ ಮೇಧಾವಿ. ಕೇವಲ ಅನ್ಯಾಯ, ಪ್ರತಿಭಟನೆ, ಮುಷ್ಕರಗಳಲ್ಲಿ ಸಾಂಕೇತಿಕವಾಗಿ ಪಟದೊಂದಿಗೆ ನಮಗೆ ಬೇಕಾದಾಗ ಬೇಕಾದಂತೆ ಅಭಿವ್ಯಕ್ತಿಗೊಳ್ಳುವುದು ಭವ್ಯ ಭಾರತದ ಭವಿಷ್ಯದ ದೃಷ್ಟಿಯಿಂದ ಶ್ರೇಯಸ್ಕರವಲ್ಲ!

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 90

ಸಮಾಚಾರ ಸಣ್ಣದಲ್ಲ

ಮ್ಯಾನ್ಮಾರ್‌ನಲ್ಲಿ ಮತ್ತೆ ಭೂಕಂಪ

ಮೈಕ್‌ತಿಲಾ: ಮಾ.28ರಂದು ರಣಭೀಕರ ಭೂಕಂಪಕ್ಕೆ ತುತ್ತಾಗಿ 3649 ಜನರ ಮಾರಣಹೋಮವನ್ನು ಕಂಡು ತತ್ತರಿಸಿರುವ ಮ್ಯಾನ್ಮಾರ್ ದೇಶದಲ್ಲಿ ಭಾನುವಾರ ಬೆಳಗ್ಗೆ ಮತ್ತೆ ಭೂಮಿ ಕಂಪಿಸಿದೆ. ರಿಕ್ಟರ್ ಮಾಪಕದಲ್ಲಿ 7.7ರಷ್ಟು ತೀವ್ರತೆಯ ಭೂಕಂಪವನ್ನು ಕಂಡಿದ್ದ ದೇಶದಲ್ಲಿ ಬಹುತೇಕ ಭಾಗ ಹಾನಿಗೀಡಾಗಿದ್ದು, ಇನ್ನೂ ಸುಧಾರಿಸುವ ಹಂತದಲ್ಲಿರುವಾಗಲೇ ಮತ್ತೆ ಭೂಮಿ ನಡುಗಿದೆ. ಭಾನುವಾರ ರಿಕ್ಟರ್ ಮಾಪಕದಲ್ಲಿ 5.5ರಷ್ಟು ತೀವ್ರತೆಯ ಕಂಪನ ದಾಖಲಾಗಿದೆ. ಆದರೆ, ಯಾವುದೇ ಸಾವು-ನೋವು ವರದಿಯಾಗಿಲ್ಲ. ಕೇಂದ್ರ ಮ್ಯಾನ್ಮಾರ್ ಭಾಗದ ನಗರ ಮೈಕ್‌ತಿಲಾದಲ್ಲಿ ಭಾನುವಾರ ಸ್ಥಳೀಯ ಕಾಲಮಾನ ಬೆಳಗ್ಗೆ 8.25ರಲ್ಲಿ ಭೂಮಿ ಕಂಪಿಸಿದೆ. ಜನರನ್ನು ಮತ್ತೊಮ್ಮೆ ಆತಂಕಕ್ಕೆ ದೂಡಿದೆ. ಈ ಮೊದಲು ಭೂಕಂಪವಾಗಿದ್ದ ಮಾಂಡಲೇದಿಂದ ಅರ್ಧದಷ್ಟು ದೂರದಲ್ಲಿಯೇ ಈ ಬಾರಿಯ ಭೂಕಂಪನದ ಕೇಂದ್ರ ಬಿಂದು ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕನ್ನಯ್ಯ ವಿರುದ್ಧ ಬಿಜೆಪಿ ದೂರು

ಪಟನಾ: ಕಾಂಗ್ರೆಸ್ ಮುಖಂಡ ಕನ್ನಯ್ಯಾ ಕುಮಾರ್ ವಿರುದ್ಧ ಬಿಜೆಪಿ ಪಟನಾದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ. ಟಿವಿ ಸಂದರ್ಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಆರ್‌ಎಸ್‌ಎಸ್ ವಿರುದ್ಧ ನಿಂದನಾತ್ಮಕ ಪದಗಳನ್ನು ಬಳಸಿದ್ದಾರೆ ಎಂದು ಆರೋಪಿಸಿ ಬಿಜೆಪಿ ರಾಜ್ಯ ಮಾಧ್ಯಮ ಉಸ್ತುವಾರಿ ಡ್ಯಾನಿಶ್ ಇಕ್ಬಾಲ್, ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಶನಿವಾರ ದೂರು ನೀಡಿದ್ದು, ಕನ್ನಯ್ಯ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಒತ್ತಾಯಿಸಿದ್ದಾರೆ.

ಪುತ್ರ ಶಂಕರ್ ಕ್ಷೇಮ: ಪವನ್ ಕಲ್ಯಾಣ್

ಅಮರಾವತಿ: ಸಿಂಗಾಪುರದಲ್ಲಿನ ಬೇಸಿಗೆ ರಜೆ ಶಿಬಿರದಲ್ಲಿ ಏ.8ರಂದು ಬೆಂಕಿ ಅವಘಡದಲ್ಲಿ ಗಾಯಗೊಂಡಿರುವ ಕಿರಿಯ ಪುತ್ರ ಮಾರ್ಕ್ ಶಂಕರ್ ಈಗ ಚೇತರಿಸಿಕೊಳ್ಳುತ್ತಿದ್ದಾನೆ. ಅವನ ಆರೋಗ್ಯ ಸ್ಥಿರವಾಗಿದೆ ಎಂದು ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ, ನಟ ಪವನ್ ಕಲ್ಯಾಣ್ ಭಾನುವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ. ಈ ಬೆಂಕಿ ಅವಘಡದಲ್ಲಿ ಒಬ್ಬ ಬಾಲಕಿ ಮೃತಪಟ್ಟಳು. ಶಂಕರ್ ಸೇರಿದಂತೆ 20 ಮಕ್ಕಳು ಗಾಯಗೊಂಡರು.

ಪಟಾಕಿ ಕಾರ್ಖಾನೆಗೆ ಬೆಂಕಿ: 8 ಮಂದಿ ಬಲಿ

ಅಮರಾವತಿ: ಆಂಧ್ರಪ್ರದೇಶದ ಅನಕಪಲ್ಲಿಯಲ್ಲಿನ ಪಟಾಕಿ ಕಾರ್ಖಾನೆಯೊಂದರಲ್ಲಿ ಭಾನುವಾರ ಅಗ್ನಿ ಅವಘಡವಾಗಿದ್ದು, ಇಬ್ಬರು ಮಹಿಳಾ ಕಾರ್ಮಿಕರು ಸೇರಿದಂತೆ 8 ಮಂದಿ ಸಜೀವ ದಹನವಾಗಿದ್ದಾರೆ. 7 ಕಾರ್ಮಿಕರು ಗಾಯಗೊಂಡಿದ್ದಾರೆ. ಪಟಾಕಿ ಕಾರ್ಖಾನೆ ಬೆಂಕಿ ಅವಘಡಕ್ಕೆ ಕಾರಣವೇನು ಎಂಬುದು ನಿಖರವಾಗಿ ತಿಳಿದು ಬಂದಿಲ್ಲ ಎಂದು ರಾಜ್ಯದ ಗೃಹ ಸಚಿವೆ ವಿ.ಅನಿತಾ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಗುತ್ತಿದೆ. ಬೆಂಕಿ ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಹರಸಾಹಸ ಪಟ್ಟಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಬೆಂಕಿ ಅವಘಡದಲ್ಲಿ 8 ಜೀವಹಾನಿಯ ಸುದ್ದಿ ಕೇಳಿ ಆಘಾತವಾಗಿದೆ ಎಂದು ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೇಳಿದ್ದಾರೆ.

65 ಸಾವಿರ ಕೋಟಿ ರು. ವೆಚ್ಚದಲ್ಲಿ ಅಮರಾವತಿ!

ಅಮರಾವತಿ: ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ನೇತೃತ್ವದ ಆಂಧ್ರಪ್ರದೇಶ ಸರಕಾರ ರಾಜಧಾನಿಯಾಗಿ ಅಮರಾವತಿಯನ್ನು ವಿಶಿಷ್ಟ ರೀತಿಯಲ್ಲಿ ರೂಪಿಸಲು 65 ಸಾವಿರ ಕೋಟಿ ರು. ಮೊತ್ತದ ಯೋಜನೆಯನ್ನು ಮರಳಿ ಆರಂಭಿಸಿದೆ. ಕೃಷ್ಣಾ ನದಿ ದಂಡೆಯಲ್ಲಿ ಆಕರ್ಷಕ ಶೈಲಿಯಲ್ಲಿ ಭವ್ಯ ನಗರವನ್ನು ನಿರ್ಮಾಣ ಮಾಡಲು ಕಾಮಗಾರಿ ಆರಂಭಿಸಲಾಗಿದೆ. ಈ ರಾಜಧಾನಿ ನಗರ ನಿರ್ಮಾಣಗೊಂಡ ಬಳಿಕ ವಿಶ್ವದೆಲ್ಲೆಡೆಯ ವೃತ್ತಿಪರರು, ಉದ್ಯಮಿಗಳು, ಹೂಡಿಕೆದಾರರನ್ನು ಆಕರ್ಷಿಸಲಿದೆ ಎಂಬುದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ವಿಶ್ವಾಸವಾಗಿದೆ ಎಂದು ಅಧಿಕಾರಿಗಳು ಸುದ್ದಿಗಾರರಿಗೆ ತಿಳಿಸಿದ್ದಾರೆ. ಸಿಂಗಪುರ, ಟೋಕಿ ಯೊ, ಆಮ್‌ಸ್ಟರ್‌ಡ್ಯಾಮ್ ನಗರಗಳಂತೆಯೇ ವಿಶ್ವದರ್ಜೆಯ ಮಹಾನಗರವನ್ನು ನಿರ್ಮಿಸಬೇಕೆಂಬುದು ರಾಜ್ಯ ಸರಕಾರದ ಕನಸಾಗಿದೆ. ಅದಾಗಲೇ ಈ ದಿಶೆಯಲ್ಲಿ ಕಾಮಗಾರಿಗಳು ಆರಂಭಗೊಂಡಿವೆ. ನೂತನ ರಾಜಧಾನಿ ಅಮರಾವತಿ ನಗರದ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಲಾಗುವುದು ಎಂದೂ ಅಧಿಕಾರಿಗಳು ಹೇಳಿದ್ದಾರೆ. 2019ರಲ್ಲಿ ರೂಪತಳೆದ ಅಮ ರಾವತಿ ನಗರ ನಿರ್ಮಾಣದ ಪರಿಕಲ್ಪನೆ, ನಂತರದಲ್ಲಿ ನನೆಗುದಿಗೆ ಬಿದ್ದಿತ್ತು. 2024ರವರೆಗೂ ತೆರೆಮರೆಯಲ್ಲಿತ್ತು.

{ಯೋಗಿ ಆದಿತ್ಯನಾಥ್ } ಉತ್ತರ ಪ್ರದೇಶ ಸಿಎಂ

ವಕ್ಫ್ ತಿದ್ದುಪಡಿ ಕಾಯಿದೆ ವಿಷಯದಲ್ಲಿ ಪ್ರತಿಪಕ್ಷಗಳು ಜನರಿಗೆ ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸುತ್ತಿವೆ. ವಕ್ಫ್ ಹೆಸರಲ್ಲಿ ಲಕ್ಷಾಂತರ ಎಕರೆ ಭೂಮಿಯನ್ನು ಬಲವಂತವಾಗಿ ಆಕ್ರಮಿಸಿಕೊಂಡಿರುವ ರಾಜ್ಯ ಪಶ್ಚಿಮ ಬಂಗಾಳ. ಅವರ ಬಳಿ ಯಾವುದೇ ದಾಖಲೆಗಳಿಲ್ಲ. ಹಾಗಾಗಿ ವಕ್ಫ್ ಕಾಯಿದೆ ಜಾರಿ ವಿರೋಧಿಸಲಾಗುತ್ತಿದೆ. ಮುರ್ಷಿದಾಬಾದ್‌ನಲ್ಲಿ ಹಿಂಸಾಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ.

250 ಹೆಕ್ಟೇರ್ ವಿಸ್ತಾರದಲ್ಲಿ ಲಿಥಿಯಂ ನಿಕ್ಷೇಪ ಪತ್ತೆ-ಜಿಎಸ್‌ಐ ವರದಿ | 10 ಪಿಪಿಎಂನಿಂದ 2 ಸಾವಿರ ಪಿಪಿಎಂವರೆಗೆ ಲಿಥಿಯಂ ಅಂಶ ಗೋಚರ | ಛತ್ತೀಸ್‌ಗಢದ ಕೊರ್ಬಾ ಜಿಲ್ಲೆಯ ಕಟ್‌ಘೋರಾ ಪ್ರದೇಶದಲ್ಲಿ ಖನಿಜ

ಭಾರತ ಪ್ರಥಮ ಲಿಥಿಯಂ ಗಣಿ ಶೀಘ್ರ ಆರಂಭ

ಲಿಥಿಯಂ ಉಪಯೋಗ

- 'ಅಲ್ಕಲಿ' ಲೋಹ ಸಮೂಹಕ್ಕೆ ಸೇರಿದ ಲಿಥಿಯಂನಲ್ಲಿ ಕಬ್ಬಿಣದ ಅಂಶವಿಲ್ಲ. ಹಾಗಾಗಿ ಇದು ಸಹಜ ತುಕ್ಕು ನಿರೋಧಕ. ಆಯಸ್ಕಾಂತೀಯ ಗುಣವಿಲ್ಲ. ಹಗುರವಾಗಿರುವ ಲೋಹ. ಅಧಿಕ ವಿದ್ಯುತ್ಕಾಂತೀಯ ಶಕ್ತಿಯ ಲೋಹ.
- ಲಿಥಿಯಂಗೆ ಮುಖ್ಯವಾಗಿ ವಿದ್ಯುಚ್ಛಕ್ತಿಯನ್ನು ಅಧಿಕ ಪ್ರಮಾಣದಲ್ಲಿ ಸಂಗ್ರಹಿಸಿಟ್ಟುಕೊಳ್ಳುವ ಶಕ್ತಿಯಿದೆ. ಹಾಗಾಗಿ ವಿದ್ಯುತ್‌ಚಾಲಿತ ವಾಹನಗಳು, ಲ್ಯಾಪ್‌ಟಾಪ್, ಸ್ಮಾರ್ಟ್‌ಫೋನ್ ಮತ್ತು ಗಡಿಯಾರಗಳಿಗೆ ಬೇಕಾದ ಬ್ಯಾಟರಿಗಳ ತಯಾರಿಕೆಗೆ ಅತ್ಯಗತ್ಯ ಖನಿಜವಾಗಿದೆ.
- ವಿಮಾನಗಳು, ಜೆಟ್ ಫ್ಲೈಟ್‌ಗಳ ಕವಚಗಳಿಗೆ ಹಗುರ ಲೋಹ ಲಿಥಿಯಂ ಬಳಕೆ.
- ವೈದ್ಯಕೀಯ ರಂಗದಲ್ಲೂ ಚಿಕಿತ್ಸೆಗೆ ಬಳಕೆ. ಬೈಪೋಲಾರ್ ಡಿಸಾರ್ಡರ್ ರೋಗಿಗಳ ಚಿಕಿತ್ಸೆಗೆ ಲಿಥಿಯಂ ಅಗತ್ಯವಿದೆ. ಆಂಟಿಡಿಪ್ರೆಸೆಂಟ್‌ಗಾಗಿಯೂ ಈ ಅಪರೂಪದ ಖನಿಜವನ್ನು ಬಳಸಲಾಗುತ್ತದೆ.
- ಸದ್ಯ ಭಾರತ ಲಿಥಿಯಂ ಲೋಹವನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿದೆ. ಅದಕ್ಕಾಗಿ ಚೀನಾವನ್ನು ಆಶ್ರಯಿಸುವಂತಾಗಿದೆ.

ಮತ್ತೆಲ್ಲಿ ಲಿಥಿಯಂ ಇದೆ?

- ಕರ್ನಾಟಕದ ಮಂಡ್ಯ ಜಿಲ್ಲೆಯ ಮರ್ಲಗಲ್ಲದಲ್ಲಿ 1600 ಟನ್ ಲಿಥಿಯಂ ಖನಿಜ ಇರುವುದು ದೃಢಪಟ್ಟಿದೆ.
- ರಾಜಸ್ಥಾನದ ದೇಗಣಾ ಪ್ರದೇಶದಲ್ಲಿ ಲಿಥಿಯಂ ಖನಿಜವಿರುವುದಾಗಿ ತಿಳಿದುಬಂದಿದೆ.
- ಜಮ್ಮು-ಕಾಶ್ಮೀರದ ಸಲಾಲ್-ಹೈಮನಾ ಪ್ರದೇಶದಲ್ಲಿಯೂ ಲಿಥಿಯಂ ಪತ್ತೆಯಾಗಿದೆ.
- ಉಳಿದಂತೆ ರಾಜಸ್ಥಾನ, ಜಾರ್ಖಂಡ್, ಅರುಣಾಚಲ ಪ್ರದೇಶ, ಮೇಘಾಲಯ, ನಾಗಾಲ್ಯಾಂಡ್‌ನಲ್ಲೂ ಲಿಥಿಯಂ ನಿಕ್ಷೇಪವಿರು ವುದು ಜಿಎಸ್‌ಐ 2023ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಕಂಡುಬಂದಿದೆ.

ಭಾರತಕ್ಕೆ 5ನೇ ಸ್ಥಾನ

ವಿಶ್ವದಲ್ಲಿ ಭಾರತ ಸೇರಿದಂತೆ ಆರು ದೇಶಗಳಲ್ಲಿ ಗಣನೀಯ ಪ್ರಮಾಣದಲ್ಲಿ ಲಿಥಿಯಂ ಖನಿಜ ನಿಕ್ಷೇಪವಿರುವುದು ಪತ್ತೆಯಾಗಿದೆ. 3.90 ಕೋಟಿ ಟನ್‌ಗಳಷ್ಟು ಲಿಥಿಯಂ ಖನಿಜವನ್ನು ಹೊಂದಿರುವ ಬೊಲಿವಿಯ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದೆ. ಚಿಲಿಯಲ್ಲಿ 1.99 ಕೋಟಿ ಟನ್, ಆಸ್ಟ್ರೇಲಿಯದಲ್ಲಿ 77 ಲಕ್ಷ ಟನ್, ಚೀನಾದಲ್ಲಿ 67 ಲಕ್ಷ ಟನ್, ಭಾರತದಲ್ಲಿ 59 ಲಕ್ಷ ಟನ್, ಅರ್ಜೆಂಟೀನಾದಲ್ಲಿ 57 ಲಕ್ಷ ಟನ್ ಲಿಥಿಯಂ ನಿಕ್ಷೇಪವಿರುವುದು ಪ್ರಸ್ತುತ ಕಂಡುಬಂದಿದೆ.

ಉಗ್ರ ರಾಣಾ ಮಾಜಿ ಸಂಗಾತಿಗೆ ಹುಡುಕಾಟ

ದೆಹಲಿ: 2008ರ ನ.26ರ ಮುಂಬೈ ದಾಳಿ ಪ್ರಕರಣದ ಪ್ರಮುಖ ಸಂಚು ಕೋರ, ಪಾಕ್ ಮೂಲದ ಉಗ್ರ ತಹಾವುರ್ ಹುಸೇನ್ ರಾಣಾ ನ ವಿಚಾರಣೆ ನಡೆಸಿರುವ ರಾಷ್ಟ್ರೀಯ ತನಿಖಾ ದಳ (ಎನ್‌ಐಎ), ರಾಣಾನ ಮಾಜಿ ಸಂಗಾತಿಯ ಶೋಧ ಆರಂಭಿಸಿದೆ.



ಮುಂಬೈ ಸ್ಫೋಟ ಪ್ರಕರಣಕ್ಕೆ ರಾಣಾನೇ ಪ್ರಮುಖ ಸಂಚುಕೋರ ಎಂಬುದನ್ನು ದೃಢಪಡಿಸುವ ಸಾಕ್ಷ್ಯ ಕಲೆಹಾಕಲು ರಾಣಾನ ಮಾಜಿ ಸಂಗಾತಿಗಾಗಿ ಹುಡುಕಾಟ ನಡೆಸಲಾಗುತ್ತಿದೆ. ಈ ಹಿಂದೆ ರಾಣಾ ಭಾರತದಲ್ಲಿ ಇದ್ದಾಗ ಆತನ ಜತೆಗಿದ್ದ ಮಹಿಳೆಯನ್ನು ಪತ್ತೆ ಹಚ್ಚಲು ಎನ್‌ಐಎ ತನಿಖಾಧಿಕಾರಿಗಳ ತಂಡ ಮುಂದಾಗಿದೆ. ಆಕೆ ರಾಣಾ ನಡೆಸಿದ ಮುಂಬೈ ಸ್ಫೋಟ ಸಂಚಿನ ಭಾಗವಾಗಿರಬಹುದು ಅಥವಾ ರಾಣಾ ಸಂಚಿನಲ್ಲಿ ಭಾಗಿಯಾದವರ ಬಗ್ಗೆ ಮಾಹಿತಿ ಹೊಂದಿರಬಹುದು ಎಂಬುದು ಅಧಿಕಾರಿಗಳ ಅಂದಾಜಾಗಿದೆ. ರಾಣಾ ಭಾರತದಲ್ಲಿ ಇದ್ದಷ್ಟು ದಿನವೂ ಅವನ ಜತೆಗೇ ಇದ್ದ ಮಹಿಳೆ, ತಾನು ರಾಣಾ ಪತ್ನಿ ಎಂದೇ ಹೇಳಿಕೊಂಡಿದ್ದಳು. ಆಕೆ ಪತ್ತೆಯಾದರೆ ಪ್ರಮುಖ ಸಾಕ್ಷಿ ದೊರೆತಂತಾಗಲಿದೆ ಎಂಬುದು ತನಿಖಾಧಿಕಾರಿಗಳ ಬಲವಾದ ನಂಬಿಕೆಯಾಗಿದೆ.

ಮುಂದುವರಿದ ವಿಚಾರಣೆ

ಎನ್‌ಐಎ ಕಚೇರಿ ಕಟ್ಟಡದ ನೆಲಮಹಡಿ ಸೆಲ್‌ನಲ್ಲಿ ತಹಾವುರ್ ರಾಣಾ ವಿಚಾರಣೆ ನಡೆಸುತ್ತಿರುವ ಅಧಿಕಾರಿಗಳ ತಂಡ, ಮೊದಲ ಸುತ್ತಿನಲ್ಲಿ ರಾಣಾಗೆ 18 ಪ್ರಮುಖ ಪ್ರಶ್ನೆಗಳನ್ನ ಕೇಳಿ ಕೆಲವು ಮಾಹಿತಿಗಳನ್ನು ಸಂಗ್ರಹಿಸಿದೆ. ಪಾಕ್ ಗುಪ್ತಚರ ಸಂಸ್ಥೆ ಐಎಸ್‌ಐ ಮತ್ತು ಲಷ್ಕರ್-ಎ-ತಯ್ಯಬಾ ಮುಖ್ಯಸ್ಥ ಹಫೀಜ್ ಸಯೀದ್ ಬಗ್ಗೆ ಕೆಲವು ಮಹತ್ವದ ಸಂಗತಿಗಳನ್ನು ರಾಣಾ ಹೇಳಿದ್ದಾನೆ ಎಂದು ಉನ್ನತ ಮೂಲಗಳನ್ನು ಉಲ್ಲೇಖಿಸಿ ಮಾಧ್ಯಮಗಳು ವರದಿ ಮಾಡಿವೆ.

1990ರ ಕಾಶ್ಮೀರ ಹಿಂಸಾಚಾರ ನೆನಪಿಸುವಂತಹ ಘಟನೆ: ಬಿಜೆಪಿ

ಮುರ್ಷಿದಾಬಾದ್: ವಕ್ಫ್ ಕಾಯಿದೆ ವಿರೋಧಿಸಿ ಹಿಂಸೆ-150 ಜನರ ಸೆರೆ

ಕೋಲ್ಕತ್ತ: ವಕ್ಫ್ (ತಿದ್ದುಪಡಿ) ಕಾಯಿದೆ-2025 ಜಾರಿ ಮಾಡಬಾರದೆಂದು ಒತ್ತಾಯಿಸಿ ಪಶ್ಚಿಮ ಬಂಗಾಳದ ಮುರ್ಷಿದಾಬಾದ್‌ನಲ್ಲಿ ಶುಕ್ರವಾರ ಮಧ್ಯಾಹ್ನದ ಪ್ರಾರ್ಥನೆ ಬಳಿಕ ಮುಸ್ಲಿಮರ ದೊಡ್ಡ ಗುಂಪು ಹಿಂಸಾತ್ಮಕ ಪ್ರತಿಭಟನೆ ನಡೆಸಲಾರಂಭಿಸಿದ್ದು, ಮೂರು ದಿನಗಳಲ್ಲಿ ಅಪಾರ ಪ್ರಮಾಣದ ಆಸ್ತಿ ಹಾನಿಯಾಗಿದೆ. ನೂರಾರು ವಾಹನಗಳಿಗೆ, ಅಂಗಡಿ-ಮನೆಗಳಿಗೆ ಬೆಂಕಿ ಇಡಲಾಗಿದೆ. ಪ್ರತಿಭಟನಾ ಕಾರರಿಂದ ಇರಿತಕ್ಕೊಳಗಾಗಿ ತಂದೆ-ಮಗ ಸಾವಿಗೀಡಾಗಿದ್ದರೆ, ಪ್ರತಿಭಟ ನಾಕಾರರಲ್ಲೊಬ್ಬ ಗುಂಡೇಟಿನಿಂದ ಹತನಾಗಿದ್ದಾನೆ. ಹಿಂಸಾತ್ಮಕ ಪ್ರತಿಭಟನೆ ನಡೆಸಿದವರಲ್ಲಿ ಈವರೆಗೆ 150ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

- **ಹೈಕೋರ್ಟ್ ಆದೇಶದಂತೆ 300 ಬಿಎಸ್‌ಎಫ್ ಯೋಧರ ರವಾನೆ**
- **ಮನೆಗಳಿಗೆ ಬೆಂಕಿ ಹಾಕಿ 400 ಹಿಂದೂಗಳ ಬೆದರಿಸಿ ಓಡಿಸಲಾಗಿದೆ**

ಇನ್ನೊಂದೆಡೆ, ಕೋಲ್ಕತ್ತ ಹೈಕೋರ್ಟ್ ಕೂಡಾ, ಹಿಂಸಾತ್ಮಕ ಪ್ರತಿಭಟನೆ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ಇಷ್ಟೊಂದು ಹಿಂಸಾಚಾರ ನಡೆಯುತ್ತಿರುವಾಗ ನ್ಯಾಯಾಲಯ ಕಣ್ಣು ಮುಚ್ಚಿ ಕುಳಿತಿರಲು ಸಾಧ್ಯವಿಲ್ಲ ಎಂದಿರುವ ಹೈಕೋರ್ಟ್, ರಾಜ್ಯ ಪೊಲೀಸರ ನಿಷ್ಕ್ರಿಯೆಗೆ ಆಘಾತ ವ್ಯಕ್ತಪಡಿಸಿದೆ. ಅಲ್ಲದೇ, ತಕ್ಷಣವೇ ಕೇಂದ್ರ ಸರಕಾರ ಮಧ್ಯಪ್ರವೇಶಿಸಿ ಅರೆಸೇನಾಪಡೆಗಳನ್ನು ಹಿಂಸಾಗ್ರಸ್ತ ಮುರ್ಷಿದಾಬಾದ್‌ಗೆ ನಿಯೋಜಿಸುವಂತೆ ಸೂಚಿಸಿದೆ.

300 ಯೋಧರ ರವಾನೆ: ಹೈಕೋರ್ಟ್ ಸೂಚನೆಯಂತೆಯೇ ಗಡಿ ಭದ್ರತಾ ಪಡೆಯ(ಬಿಎಸ್‌ಎಫ್) ತಲಾ 60 ಯೋಧರ 5 ತುಕಡಿಗಳನ್ನು(ಒಟ್ಟು 300 ಯೋಧರನ್ನು) ಮುರ್ಷಿದಾಬಾದ್‌ಗೆ ಕಳುಹಿಸಿಕೊಡಲಾಗಿದೆ. ಅವರು ರಾಜ್ಯ ಪೊಲೀಸರ ಜತೆಗೂಡಿ ಹಿಂಸಾಚಾರವನ್ನು ಹತ್ತಿಕ್ಕಲಿದ್ದಾರೆ ಎಂದು ಬಿಎಸ್‌ಎಫ್ ಅಧಿಕಾರಿಗಳು ತಿಳಿಸಿದ್ದಾರೆ. ರಾಜ್ಯ ಪೊಲೀಸರು ಮತ್ತು ಅರೆಸೇನಾ ಪಡೆ ಯೋಧರು ಮುರ್ಷಿದಾಬಾದ್‌ನ ವಿವಿಧೆಡೆ ಗಸ್ತು ತಿರುಗುತ್ತಿದ್ದಾರೆ. ಸುತಿ, ಧುಲಿಯನ್, ಸಂಸರ್‌ಗಂಜ್ ಮತ್ತು ಜಂಗಿಪುರ ಪ್ರದೇಶಗಳಲ್ಲಿ ಹಿಂಸಾಚಾರ ತಗ್ಗುವಂತೆ ಮಾಡಿದ್ದಾರೆ.ಮುರ್ಷಿದಾಬಾದ್, ಮಾಲ್ಡಾ, ದಕ್ಷಿಣ 24 ಪರಗಣ ಮತ್ತು ಹೂಗ್ಲಿ ಜಿಲ್ಲೆಗಳಲ್ಲಿ ಪ್ರತಿಭಟನಾಕಾರರು ಹಿಂಸಾಚಾರ ವೇಳೆ ಹತ್ತಾರು ಪೊಲೀಸ್ ವಾಹನ ಸೇರಿದಂತೆ ರಸ್ತೆಬದಿ ನಿಲ್ಲಿಸಲಾಗಿದ್ದ ನೂರಾರು ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ತಡೆಯಲು ಬಂದ ಪೊಲೀಸರತ್ತ ಕಲ್ಲು ತೂರಿದ್ದಾರೆ.

ಶಾಲೆಯೊಂದರಲ್ಲಿ ಆಶ್ರಯ ಪಡೆದ 400 ಹಿಂದೂಗಳು

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪಶ್ಚಿಮ ಬಂಗಾಳ ರಾಜ್ಯವನ್ನು ಜಿಹಾದಿಗಳ ವಶಕ್ಕೆ ಒಪ್ಪಿಸಿ ಸುಮ್ಮನೆ ಕುಳಿತಿದ್ದಾರೆ. ಮಮತಾ ಆಧುನಿಕ ಜಿನ್ನಾ ರೀತಿ ವರ್ತಿಸುತ್ತಿದ್ದಾರೆ ಎಂದು ಬಿಜೆಪಿ ಪಶ್ಚಿಮ ಬಂಗಾಳ ನಾಯಕ ಸುವೇಂದು ಅಧಿಕಾರಿ ಟೀಕಿಸಿದ್ದಾರೆ.

ರಾಜ್ಯದಲ್ಲಿ ಹಿಂದೂಗಳು ಸುರಕ್ಷಿತವಾಗಿಲ್ಲ. ಮುರ್ಷಿದಾಬಾದ್‌ನಲ್ಲಿ ಒಂದೆಡೆ ಹಿಂದೂಗಳ ಮನೆಗಳಿಗೆ ನುಗ್ಗಿರುವ ಮುಸ್ಲಿಮರ ಗುಂಪು, ಕೈಗೆ ಸಿಕ್ಕಿದ್ದನ್ನು ದೋಚಿದೆ. ಅಡ್ಡ ಬಂದ ತಂದೆ-ಮಗನನ್ನು ಇರಿದುಕೊಂದಿದೆ. ಬಳಿಕ ಮನೆಗಳಿಗೆ ಬೆಂಕಿ ಹಚ್ಚಿದೆ. ಪರಿಣಾಮ, ಜೀವಭಯದಲ್ಲಿ 400 ಹಿಂದೂಗಳು ಮನೆ ತೊರೆದು ಓಡಿಹೋಗಿದ್ದಾರೆ. ನದಿ ದಾಟಿ ಪಾರಾಗಿರುವ ಮಹಿಳೆಯರು, ಮಕ್ಕಳನ್ನು ಒಳಗೊಂಡ 400 ಹಿಂದೂಗಳ ಗುಂಪು ಶಾಲೆಯೊಂದರಲ್ಲಿ ಆಶ್ರಯ ಪಡೆದಿದೆ. ಸದ್ಯದ ಪರಿಸ್ಥಿತಿ ನೋಡಿದರೆ 1990ರಲ್ಲಿ ಕಾಶ್ಮೀರದಲ್ಲಿನ ಹಿಂಸಾಚಾರ ಇಲ್ಲಿಯೂ ನಡೆಯುತ್ತಿರುವಂತೆ ಕಾಣುತ್ತಿದೆ ಎಂದು ಬಿಜೆಪಿ ನಾಯಕರು ಆತಂಕ ವ್ಯಕ್ತಪಡಿಸಿದ್ದಾರೆ.

6.3 ಕೆಜಿ ಚಿನ್ನ ಕಳ್ಳಸಾಗಣೆ: ಮುಂಬೈನಲ್ಲಿ ಇಬ್ಬರ ಸೆರೆ

ಮುಂಬೈ: ಶೂನಲ್ಲಿ ಚಿನ್ನ ಅಡಗಿಸಿಟ್ಟುಕೊಂಡು ಮುಂಬೈ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಪ್ರಯಾಣಿಕನೊಬ್ಬನನ್ನು ಕಂದಾಯ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು ಭಾನುವಾರ ಬಂಧಿಸಿದ್ದಾರೆ. ಆತನ ಶೂ ಸೇರಿದಂತೆ ದೇಹದ ವಿವಿಧೆಡೆ 6.3 ಕೋಟಿ ರು. ಮೌಲ್ಯದ ಚಿನ್ನವನ್ನು ಅಡಗಿಸಿಟ್ಟುಕೊಂಡು ಬಂದಿದ್ದ. ಆತನನ್ನು ತಪಾಸಣೆಗೊಳಪಡಿಸಿದಾಗ ಚಿನ್ನ ಕಳ್ಳಸಾಗಣೆ ಪ್ರಕರಣ ಬಯಲಿಗೆ ಬಂದಿತು. ಪ್ರಯಾಣಿಕನ ದೇಹದಲ್ಲಿ ಒಟ್ಟು 6.7 ಕಿಲೋ ಚಿನ್ನ ವಿವಿಧ ರೂಪದಲ್ಲಿ ಪತ್ತೆಯಾಯಿತು. ಈತನಿಂದ ಚಿನ್ನ ಪಡೆದುಕೊಳ್ಳಲು ವಿಮಾನ ನಿಲ್ದಾಣದಲ್ಲಿ ಕಾಯುತ್ತಿದ್ದ ಮತ್ತೊಬ್ಬ ವ್ಯಕ್ತಿಯನ್ನೂ ಬಂಧಿಸಲಾಗಿದೆ. ಈತ ಚಿನ್ನ ಕಳ್ಳಸಾಗಣೆ ಸಿಂಡಿಕೇಟ್ ಸದಸ್ಯನಾಗಿದ್ದಾನೆ ಎಂದು ಪ್ರಾಥಮಿಕ ತನಿಖೆ ವೇಳೆ ತಿಳಿದುಬಂದಿದೆ ಎಂದು ಅಧಿಕಾರಿಗಳು ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

ಪ್ರಯಾಣಿಕ ಬ್ಯಾಂಕಾಕ್‌ನಿಂದ ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನೇರವಾಗಿ ಪ್ರಯಾಣ ಮಾಡಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯದಲ್ಲೇ ನಿರ್ಮಾಣಗೊಳ್ಳಲಿದೆ... ದಕ್ಷಿಣ ಭಾರತದ ಅತಿ ಉದ್ದ ರೋಪ್ ವೇ!

ಎಲ್ಲಿ?
» ಕೇರಳದ ವಯನಾಡು-ಕೋಯಿಕ್ಕೋಡ್ ಜಿಲ್ಲೆ.

ಎಲ್ಲಿಂದ ಎಲ್ಲಿಗೆ?
» ಲಕ್ಕಿಡಿಯಿಂದ ಆದಿವಾರಂ ಸಂಪರ್ಕ ಕೇಬಲ್ ಮಾರ್ಗ

ಎಷ್ಟು ದೂರ?
ಸರಿಯಾಗಿ 3.675 ಕಿಲೋಮೀಟರ್

ನಿರ್ಮಾಣ ಹೇಗೆ?
- ಲಕ್ಕಿಡಿ-ಆದಿವಾರಂ ಮಧ್ಯೆ 40 ಗೋಪುರ
- ಗೋಪುರಗಳ ತುದಿಗೆ ಕೇಬಲ್ ಜೋಡಣೆ

ಯಾವ ಮಾರ್ಗದಲ್ಲಿ?
» ಪ್ರಿಸ್ಟೈನ್ ಅರಣ್ಯ ಪ್ರದೇಶದ 2 ಹೆಕ್ಟೇರ್ ಪ್ರದೇಶ ಹಾದುಹೋಗುತ್ತದೆ.

ಪ್ರಯಾಣ ಅವಧಿ?
» ಲಕ್ಕಿಡಿ-ಆದಿವಾರಂ ಪಯಣ ಕೇವಲ 15 ನಿಮಿಷ
» ಸದ್ಯ ರಸ್ತೆ ಮಾರ್ಗದಲ್ಲಿ 40 ನಿಮಿಷಗಳ ಸಂಚಾರ

ಕೇಬಲ್ ಕಾರ್ ವೈಶಿಷ್ಟ್ಯ
» ಏರ್ ಕಂಡೀಷನ್ಡ್ ಕೇಬಲ ಕಾರ್
» ಪ್ರತಿ ಕೇಬಲ್ ಕಾರ್‌ನಲ್ಲಿ 6 ಜನರಿಗೆ ಅವಕಾಶ
» 1 ಗಂಟೆಗೆ ಕನಿಷ್ಠ 400 ಜನರ ಸಂಚಾರ ಸಾಧ್ಯ

ಕೇಬಲ್ ಕಾರ್‌ಕೇಂದ್ರಗಳ ಸಂಪರ್ಕ ಕೊಂಡಿ?
» ಬತೇರಿಯಿಂದ ಲಕ್ಕಿಡಿಕಿಗೆ
» ಕೋಯಿಕ್ಕೋಡ್‌ನಿಂದ ಆದಿವಾರಂಗೆ
» ವಿಶೇಷ ಸಂಪರ್ಕ ಬಸ್ ಸೌಲಭ್ಯ

ಮತ್ತೇನು ವಿಶೇಷ?
» ಲಕ್ಕಿಡಿ ಮತ್ತು ಆದಿವಾರಂ ಎರಡೂ ಸ್ಥಳಗಳಲ್ಲಿ ಪ್ರವಾಸಿಗರಿಗೆ ಹೆಚ್ಚಿನ ಸೌಲಭ್ಯ
» ಮನರಂಜನಾ ಉದ್ಯಾನ, ಸ್ಟಾರ್ ಹೋಟೆಲ್ಸ್, ಕೆಫೆಟೇರಿಯ, ಆಂಪಿ ಥಿಯೇಟರ್, ಆಡಿಟೋರಿಯಂ.



ಅತ್ಯಾಚಾರ: ಐಪಿಎಸ್ ಅಧಿಕಾರಿ ವಿರುದ್ಧ ವೈದ್ಯೆ ದೂರು

ಮುಂಬೈ: ಮದುವೆಯಾಗುವುದಾಗಿ ವಚನ ನೀಡಿ ವೈದ್ಯೆ ಮೇಲೆ ಅತ್ಯಾಚಾರ ನಡೆಸಿದ ಆರೋಪದಡಿ ಮಹಾರಾಷ್ಟ್ರದ ನಾಗಪುರದಲ್ಲಿನ 30 ವರ್ಷದ ಐಪಿಎಸ್ ಅಧಿಕಾರಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ವೃತ್ತಿಯಲ್ಲಿ ವೈದ್ಯೆಯಾಗಿರುವ ಮಹಿಳೆ ನಾಗಪುರದ ಇಮಾಮ್ ವಾಡಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ವೈದ್ಯೆ ಮತ್ತು ಐಪಿಎಸ್ ಅಧಿಕಾರಿ ವರ್ಷಗಳ ಹಿಂದೆ 'ಇನ್‌ಸ್ಟಾಗ್ರಾಂ'ನಲ್ಲಿ ಪರಿಚಿತರಾದರು. ಆಗ ಆರೋಪಿ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದರೆ, ಯುವತಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದರು. ಮದುವೆಯಾಗುವುದಾಗಿ ಭರವಸೆ ನೀಡಿದ ಆರೋಪಿ, ಭಾವೀ ವೈದ್ಯೆ ಜತೆ ದೈಹಿಕ ಸಂಬಂಧ ಬೆಳೆಸಿದರು. ಐಪಿಎಸ್ ಅಧಿಕಾರಿಯಾದ ನಂತರ ವೈದ್ಯೆಯನ್ನು ಮದುವೆಯಾಗಲು ನಿರಾಕರಿಸಿದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ ಎಂದು ಪೊಲೀಸರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಐಪಿಎಸ್ ಯುವ ಅಧಿಕಾರಿ ವಿರುದ್ಧ ಅತ್ಯಾಚಾರ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ. ತನಿಖೆ ನಡೆಸಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ವಲಸಿಗರು ಸದಾ ವೀಸಾ ಇಟ್ಟುಕೊಂಡಿರಿ: ಅಮೆರಿಕ

ವಾಷಿಂಗ್ಟನ್: ಭಾರತೀಯರು ಸೇರಿದಂತೆ ಅಮೆರಿಕದಲ್ಲಿರುವ ವಿದೇಶಿಯರೆಲ್ಲರೂ ಸದಾಕಾಲವೂ ವೀಸಾ, ಗ್ರೀನ್ ಕಾರ್ಡ್ ದಾಖಲೆಗಳನ್ನು ಜತೆಗೇ ಇಟ್ಟುಕೊಂಡಿರಬೇಕು. ಅಮೆರಿಕ ಸರಕಾರದ ಅಧಿಕಾರಿಗಳು ಯಾವುದೇ ಸಮಯದಲ್ಲಿ, ಎಲ್ಲಿಯೇ ಆದರೂ ತಪಾಸಣೆ ಮಾಡಬಹುದಾಗಿದೆ. ಆಗ ದಾಖಲೆಗಳನ್ನು ತೋರಿಸಲೇಬೇಕು ಎಂದು ಅಮೆರಿಕದ ಗೃಹ ಸಚಿವಾಲಯ ಹೇಳಿದೆ.

ಏ.11ರಿಂದಲೇ ಈ ನಿಯಮ ಜಾರಿಗೆ ಬಂದಿದೆ. ಅಕ್ರಮ ವಲಸಿಗರನ್ನು ದೇಶದಿಂದ ಹೊರದೂಡಬೇಕೆಂಬ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 'ಪ್ರೊಟೆಕ್ಟಿಂಗ್ ದಿ ಅಮೆರಿಕನ್ ಪೀಪಲ್ ಎಗೆನೆಸ್ಟ್ ಇನ್ವೇಷನ್' ಎಂಬ ಪರಿಕಲ್ಪನೆಯಡಿ ಈ ನಿಯಮ ಜಾರಿಗೆ ತರಲಾಗಿದೆ. ಇದಕ್ಕೆ ನ್ಯಾಯಾಲಯದ ಅನುಮತಿಯೂ ಇದೆ ಎಂದು ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

ಈ ನಿಯಮದ ಪ್ರಕಾರ ನೋಂದಣಿ ಆಗಿರುವ ವಿದೇಶಿ ಪ್ರಜೆಗಳು, ವಲಸಿಗರು 10 ದಿನದೊಳಗೆ ಸಂಬಂಧಿಸಿದ ಇಲಾಖೆಗೆ ದಾಖಲೆಗಳನ್ನು ತೋರಿಸಿ ಮರುನೋಂದಣಿ ಮಾಡಿಕೊಳ್ಳಬೇಕು. ವಲಸಿಗರ ಮಕ್ಕಳಿಗೆ 14 ವರ್ಷ ತುಂಬಿದ ಬಳಿಕ 30 ದಿನದೊಳಗೆ ಸರಕಾರಕ್ಕೆ ಮತ್ತೊಮ್ಮೆ ಬೆರಳಚ್ಚು ನೀಡಿ ನವೀಕರಿಸಿಕೊಳ್ಳಬೇಕು. ಒಂದು ವೇಳೆ ನಿಯಮ ಮೀರಿದ್ರೆ, ದಂಡ ಅಥವಾ ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂದು ವರದಿಗಳು ತಿಳಿಸಿವೆ.

ಪುಲ್ವಾಮಾ ಹುತಾತ್ಮ ಯೋಧನ ಪುತ್ರಿ ಮದುವೆ ನಡೆಸಿಕೊಟ್ಟ ಓಂ ಬಿರ್ಲಾ

ದೆಹಲಿ: ಜಮ್ಮು-ಕಾಶ್ಮೀರದ ಪುಲ್ವಾಮಾದಲ್ಲಿ ಪಾಕ್ ಮೂಲದ ಉಗ್ರರ ಗುಂಡಿಗೆ ಬಲಿಯಾದ ಕೇಂದ್ರ ಮೀಸಲು ಪೊಲೀಸ್ ಪಡೆಯ ಹುತಾತ್ಮ ಯೋಧ ಹೇಮರಾರ್ ಮೀನಾ ಅವರ ಪುತ್ರಿಯ ವಿವಾಹ ಮಹೋತ್ಸವದಲ್ಲಿ ಭಾಗಿಯಾದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು, 6 ವರ್ಷಗಳ ಹಿಂದೆ ಮಾತುಕೊಟ್ಟಿದ್ದಂತೆಯೇ ಮದುವೆಯ ಶಾಸ್ತ್ರಗಳನ್ನೂ ನಡೆಸಿಕೊಟ್ಟರು.

ರಾಜಸ್ಥಾನದ ಕೋಟಾ-ಬುಂಡಿ ಲೋಕಸಭಾ ಕ್ಷೇತ್ರದ ಪ್ರತಿನಿಧಿಯೂ ಆಗಿರುವ ಓಂ ಬಿರ್ಲಾ ಅವರು ಕೋಟಾದ ಸಂಗೋದ್ ಪ್ರದೇಶದಲ್ಲಿ ನಡೆದ ಪುಲ್ವಾಮಾ ಕಾರ್ಯಾಚರಣೆಯ ಹುತಾತ್ಮ ಯೋಧ ಹೇಮರಾಜ್ ಮೀನಾ ಅವರ ಪುತ್ರಿ ರೀನಾ(25) ಮದುವೆಗೆ ತೆರಳಿದ್ದಷ್ಟೇ ಅಲ್ಲದೇ, ವಧುವಿನ ಸೋದರ ಮಾವ ನಡೆಸಿಕೊಡಬೇಕಾದ ಸಂಪ್ರದಾಯಗಳನ್ನು ನಡೆಸಿಕೊಟ್ಟರು. ವಧು ರೀನಾಳ ತಾಯಿ ಮಧುಬಾಲಾ ಅವರಿಗೆ ಅಣ್ಣನಾಗಿ ಸೀರೆಯನ್ನು ಉಡುಗೊರೆಯಾಗಿ ನೀಡಿದರು. ಸಂಸದರ ಈ ನಡವಳಿಕೆ ಜನಮೆಚ್ಚುಗೆಗೆ ಪಾತ್ರವಾಯಿತು.



ಸಂಗೋದ್ ಜಿಲ್ಲೆಯ ವಿನೋದ್ ಕಲನ್ ಗ್ರಾಮದ ನಿವಾಸಿಯಾದ ಹೇಮರಾಜ್, ಸಿಆರ್‌ಪಿಎಫ್‌ನಲ್ಲಿ ಹೆಡ್ ಕಾನ್‌ಸ್ಟೆಬಲ್ ಆಗಿದ್ದು 2019ರಲ್ಲಿ ಪುಲ್ವಾಮಾ ಕಾರ್ಯಾಚರಣೆಯಲ್ಲಿ ಉಗ್ರರ ಗುಂಡಿಗೆ ಬಲಿಯಾದರು. ಆ ಬಳಿಕ ಓಂ ಬಿರ್ಲಾ ಅವರು ಹುತಾತ್ಮ ಯೋಧನ ಕುಟುಂಬಕ್ಕೆ ಆಸರೆಯಾದರು. ಮಗಳ ಮದುವೆ ನಡೆಸಿಕೊಡುವ ಭರವಸೆ ನೀಡಿದ್ದರು.

1.6 ಕೆಜಿ ಆರ್‌ಡಿಎಕ್ಸ್ ಸಹಿತ 2 ಉಗ್ರರ ಸೆರೆ

ಚಂಡೀಗಢ: ಪಂಜಾಬ್‌ನ ಚಂಡೀಗಢದಲ್ಲಿ ಆರ್‌ಡಿಎಕ್ಸ್ ಮತ್ತು ಕಚ್ಚಾಬಾಂಬ್ ಅಡಗಿಸಿಟ್ಟುಕೊಂಡಿದ್ದ ಇಬ್ಬರು ಉಗ್ರರನ್ನು ಬಂಧಿಸಲಾಗಿದೆ. ಬಂಧಿತರಿಂದ 1.6 ಕೆಜಿ ಆರ್‌ಡಿಎಕ್ಸ್ ಮತ್ತು ರಿಮೋಟ್ ಕಂಟ್ರೋಲ್ ಒಳಗೊಂಡ 2.8 ಕೆಜಿ ಕಚ್ಚಾಬಾಂಬ್ ವಶಪಡಿಸಿಕೊಳ್ಳಲಾಗಿದೆ ಎಂದು ಪಂಜಾಬ್ ಪೊಲೀಸ್ ಮಹಾ ನಿರ್ದೇಶಕ (ಡಿಜಿಪಿ) ಗೌರವ್ ಯಾದವ್ ಸುದ್ದಿಗಾರರಿಗೆ ಭಾನುವಾರ ತಿಳಿಸಿದ್ದಾರೆ.

ಗೋಲ್ಡಿ ಬ್ರಾರ್ -ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ನಿಕಟವರ್ತಿ, ಜರ್ಮನಿ ಮೂಲದ ಗುರುಪ್ರೀತ್ ಸಿಂಗ್ ಅಲಿಯಾಸ್ ಗೋಲ್ಡಿ ದಿಲ್ಲೋನ್ ನೇತೃತ್ವದ ಉಗ್ರ ಸಂಘಟನೆಗೆ ಸೇರಿದ ಜಗ್ಗಾ ಸಿಂಗ್ ಮತ್ತು ಮಜಿಂದರ್ ಸಿಂಗ್ ಎಂಬವರನ್ನು ಸ್ಫೋಟಕಗಳ ಸಹಿತ ಬಂಧಿಸಲಾಗಿದೆ ಎಂದು ಡಿಜಿಪಿ ವಿವರಿಸಿದ್ದಾರೆ. ಈ ಪ್ರದೇಶದಲ್ಲಿ ಪಾಕಿಸ್ತಾನದ ಐಎಸ್‌ಐ ಯೋಜನೆಗಳನ್ನು ಜಾರಿಗೊಳಿಸಿ ಶಾಂತಿ, ಕಾನೂನು ಸುವ್ಯವಸ್ಥೆ ಹದಗೆಡಿಸುವುದೇ ಇವರ ಸಂಚಿನ ಭಾಗವಾಗಿತ್ತು ಎಂದು ತಿಳಿದುಬಂದಿದೆ, ಈ ಬಗ್ಗೆ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಡಿಜಿಪಿ ತಿಳಿಸಿದ್ದಾರೆ.

ಉಗ್ರ ಸಂಘಟನೆ ಮುಖಂಡ ದಿಲ್ಲೋನ್ ತಲೆಗೆ 10 ಲಕ್ಷ ರು. ಬಹುಮಾನ ಘೋಷಿಸಲಾಗಿದೆ. ಆತನ ಬಂಧನಕ್ಕೆ ನೆರವಾದವರಿಗೆ ಈ ಹಣ ಸಿಗಲಿದೆ ಎಂದೂ ಡಿಜಿಪಿ ಪ್ರಕಟಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಮೂರು ಸಭೆಗೆ ಗೈರಾದರೆ ಕಸಾಪ ಸದಸ್ಯತ್ವ ರದ್ದು

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರೀಯ ಕಾರ್ಯಕಾರಿ ಸಮಿತಿಯ ಸಭೆಗಳಿಗೆ ಮೂರು ಬಾರಿ ಸತತವಾಗಿ ಗೈರಾದರೆ ಸದಸ್ಯತ್ವವನ್ನೇ ರದ್ದು ಪಡಿಸುವ ಮಹತ್ವದ ತೀರ್ಮಾನವನ್ನು ಕೈಗೊಳ್ಳಲು ಕನ್ನಡ ಸಾಹಿತ್ಯ ಪರಿಷತ್ ಸಜ್ಜಾಗಿದೆ. ಏ.27ರಂದು ಬಳ್ಳಾರಿಯಲ್ಲಿ ನಡೆಯಲಿರುವ ಕಸಾಪ ವಿಶೇಷ ಸಾಮಾನ್ಯ ಸಭೆಯಲ್ಲಿ ಈ ವಿಷಯವನ್ನು ಮಂಡಿಸಿ ಬೈಲಾಕ್ಕೆ ತಿದ್ದುಪಡಿ ತರಲಾಗುವುದು. ಈ ಹಿಂದೆ ಕಾರ್ಯಕಾರಿ ಸಭೆಗೆ ಗೈರಾದರೂ ಯಾವುದೇ ಕ್ರಮ ತೆಗೆದುಕೊಳ್ಳಲು ಅವಕಾಶವಿರಲಿಲ್ಲ. ಇದರಿಂದ ಅನೇಕರು ಸಭೆಗಳಿಗೆ ಗೈರಾಗುತ್ತಿದ್ದರು. ಆದ್ದರಿಂದ ಇದೀಗ ಈ ನಿಯಮವನ್ನು ಬದಲಾಯಿಸಲು ಮುಂದಾಗಿರುವ ಕಸಾಪ, ಸತತ ಮೂರು ಬಾರಿ ಗೈರಾದರೆ ಸದಸ್ಯತ್ವ ರದ್ದು ಮಾಡಲು ತೀರ್ಮಾನಿಸಿದೆ. ಈ ನಿಯಮ ನಾಮನಿರ್ದೇಶಿತ ಸದಸ್ಯರಿಗೆ ಮಾತ್ರವಲ್ಲದೆ, ಚುನಾಯಿತ ಜಿಲ್ಲಾಧ್ಯಕ್ಷರಿಗೂ ಅನ್ವಯವಾಗಲಿದೆ. ಯಾರದೇ ಸದಸ್ಯತ್ವ ರದ್ದಾದಲ್ಲಿ ಅಂತಹ ಸದಸ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರ ಕಸಾಪದ ರಾಜ್ಯಾಧ್ಯಕ್ಷರಿಗೆ ಮಾತ್ರ ಇರಲಿದೆ ಎನ್ನಲಾಗಿದೆ.

ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾಗಿ ರಘುನಾಥ್

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಭಾನು ಪ್ರಕಾಶ್ ಶರ್ಮ ಅವರನ್ನು ಮಣಿಸಿ, ಅಧ್ಯಕ್ಷರಾಗಿ ಎಸ್. ರಘುನಾಥ ಆಯ್ಕೆಯಾಗಿದ್ದಾರೆ. ಭಾನುವಾರ ರಾಜ್ಯಾದ್ಯಂತ ನಡೆದ ಚುನಾವಣೆಯಲ್ಲಿ ಭಾನುಪ್ರಕಾಶ ಶರ್ಮ ಅವರ ವಿರುದ್ಧ 2,164 ಮತಗಳಿಂದ ಗೆಲುವು ಸಾಧಿಸಿದ್ದಾರೆ. ಭಾನುಪ್ರಕಾಶ್ ಶರ್ಮ ಅವರಿಗೆ 11,235 ಮತಗಳು ಬಿದ್ದರೆ, ಎಸ್ . ರಘುನಾಥ್ ಅವರಿಗೆ 13,399 ಮತಗಳು ಲಭಿಸಿವೆ. ಈ ಹಿಂದಿನ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರು ಭಾನುಪ್ರಕಾಶ್ ಅವರಿಗೆ ಬೆಂಬಲಿಸಿದ್ದರು. ಇದೀಗ ಹಾರನಹಳ್ಳಿ ಗುಂಪಿಗೆ ಹಿನ್ನಡೆಯಾಗಿದೆ. ರಾಜ್ಯದಲ್ಲಿ 66ಸಾವಿರ ಮತದಾರರು, ಬೆಂಗಳೂರು ನಗರ ಪ್ರದೇಶದಲ್ಲಿ 34ಸಾವಿರ ಮತದಾರರು ಇದ್ದಾರೆ. ಬೆಳಗ್ಗೆ 8ರಿಂದ 4ಗಂಟೆಗೆ ವರೆಗೆ ಮತದಾನ ನಂತರ ಮತ ಎಣಿಕೆ ಕಾರ್ಯ ಜರುಗಿತು.

ಅರ್ಜಿ ಆಹ್ವಾನ

ಬೆಂಗಳೂರು: ಮಾಜಿ ಸೈನಿಕರ ಕೊಡುಗೆಯ ಆರೋಗ್ಯ ಯೋಜನೆ ಅಡಿಯಲ್ಲಿ ಮೆಡಿಕಲ್ ಆಫೀಸರ್, ಡೆಂಟಲ್ ಅಸಿಸ್ಟಂಟ್, ಡೆಂಟಲ್ ಹೈಜೆನಿಸ್ಟ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಮೆಡಿಕಲ್ ಆಫೀಸರ್ ಹುದ್ದೆಗೆ ಎಂಬಿಬಿಎಸ್ ಪಾಸಾಗಿರಬೇಕು. ಕನಿಷ್ಟ ಐದು ವರ್ಷ ಕಾರ್ಯಾನುಭವ ಹೊಂದಿರಬೇಕು. ಮಾಜಿ ಸೈನಿಕರಿಗೆ ಶೇ.60 ರಷ್ಟು ಮೀಸಲಾತಿ ಇದೆ. ಡೆಂಟಲ್ ಹೈಜೆನಿಸ್ಟ್, ಡೆಂಟಲ್ ಅಸಿಸ್ಟಂಟ್ ಹುದ್ದೆಗೆ ಡೆಂಟಲ್ ಕ್ಲಾಸ್ -1, ಡಿಹೆಚ್ ಡಿಹೆಚ್‌ಆರ್ಎ ಕೋರ್ಸ್ ಸಶಸ್ತ್ರ ಪಡೆಗಳಲ್ಲಿ ಕನಿಷ್ಟ ಐದು ವರ್ಷ ಕಾರ್ಯಾನುಭವವಿರಬೇಕು, ಮಾಜಿ ಸೈನಿಕರಿಗೆ ಶೇ.70 ರಷ್ಟು ಮೀಸಲಾತಿ ಇದೆ. ಏ.25 ರ ಒಳಗೆ ಓಐಸಿ, ಇಸಿಎಚ್‌ಎಸ್ ಸೆಲ್, ಐಎನ್‌ಎಸ್ ಕದಂಬ ನೇವಲ್ ಬೇಸ್ ಕಾರವಾರ ಪೊ- ಅರ್ಗಾ ಕಾರವಾರ - 581308 ವಿಳಾಸಕ್ಕೆ ಅರ್ಜಿ ನಮೂನೆ ಭರ್ತಿ ಮಾಡಿ, ಸ್ವಯಂ ದೃಢೀಕೃತ ದಾಖಲೆಗಳು, ಕಾರ್ಯಾನುಭವ ದಾಖಲೆಗಳನ್ನು ಸಲ್ಲಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅತ್ಯಾಚಾರ ಆರೋಪ: ಬಿ ರಿಪೋರ್ಟ್ ಸಲ್ಲಿಕೆ

ಬೆಂಗಳೂರು: ಸ್ಯಾಂಡಲ್ ವುಡ್‌ನ ಖಳನಟ ಶೇಷಗಿರಿ ಬಸವರಾಜು ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಪ್ರಕರಣದ ತನಿಖೆ ನಡೆಸಿ ಕೋರ್ಟ್‌ಗೆ ಬಿ ರಿಪೋರ್ಟ್ ಸಲ್ಲಿಕೆ ಮಾಡಲಾಗಿದೆ. 2014ರಲ್ಲಿ ಸಂತ್ರಸ್ತ ಮಹಿಳೆಯ ಪರಿಚಯವಾಗಿತ್ತು, ಪರಿಚಯ ಸ್ನೇಹಕ್ಕೆ ತಿರುಗಿತ್ತು. ಒಂದು ದಿನ ಮಹಿಳೆಗೆ ಪ್ರಜ್ಞೆ ತಪ್ಪುವ ಮಾತ್ರೆ ನೀಡಿ ಅತ್ಯಾಚಾರ ಮಾಡಲಾಗಿದೆ. ನಂತರ ವಿಡಿಯೊ ಫೋಟೊಗಳನ್ನು ತೆಗೆದುಕೊಂಡು ಬೆದರಿಕೆ ಹಾಕಲಾಗಿದೆ ಅಂತ ಮಹಿಳೆ ಶೇಷಗಿರಿ ವಿರುದ್ಧ ಸುಬ್ರಹ್ಮಣ್ಯ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ಪ್ರಕರಣದ ತನಿಖೆ ನಡೆಸಿದ ಪೊಲೀಸರಿಗೆ ಸಂತ್ರಸ್ತ ಮಹಿಳೆಯ ವೈದ್ಯಕೀಯ ಪರೀಕ್ಷೆಯಲ್ಲಿ ದೈಹಿಕ ಸಂಪರ್ಕ ನಡೆದಿಲ್ಲ ಎಂದು ವರದಿ ಬಂದಿತ್ತು. ಬಳಿಕ ಆರೋಪದ ಬಗ್ಗೆ ಯಾವುದೇ ಸಾಕ್ಷಿಗಳು ಕೂಡ ಇರಲಿಲ್ಲ. ಹೀಗಾಗಿ ಈ ಪ್ರಕರಣ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ್ದು, ಸಾಕ್ಷ್ಯಧಾರಗಳ ಕೊರತೆಯಿಂದ ಕೂಡಿದೆ ಎಂದು ಪೊಲೀಸರು ಬಿ ರಿಪೋರ್ಟ್ ಸಲ್ಲಿಕೆ ಮಾಡಿದ್ದಾರೆ.

{ ವಿ.ಸೋಮಣ್ಣ } ಕೇಂದ್ರ ಸಚಿವ

ಜಾತಿ ಜನಗಣತಿ ವರದಿ ಕಾಗಕ್ಕ ಗೂಬಕ್ಕ ಕತೆ ಥರ ಇದೆ. ಈ ವರದಿ ಸಿದ್ದರಾಮಯ್ಯಗೇ ಮರಣ ಶಾಸನ ಆಗಬಹುದು. ಅವರ ಪಕ್ಷದವರೇ ಅವರನ್ನು ರಾಜಕೀಯವಾಗಿ ಕಾಲೆಳೆಯಲು ಪಿತೂರಿ ಮಾಡ್ತಿದ್ದಾರೆ. ಈ ವರದಿ ಜಾರಿಯಾದರೆ ಸಿದ್ದರಾಮಯ್ಯ ರಾಜ್ಯ ರಾಜಕೀಯ ಇತಿಹಾಸದಲ್ಲಿ ಒಬ್ಬ ಖಳನಾಯಕ ಆಗ್ತಾರೆ . ಸಿದ್ದರಾಮಯ್ಯ ಅವರಿಗೆ ಪೂರ್ಣ ಸತ್ಯ ಗೊತ್ತಿದೆ. ಆದ್ರೆ ಅವರು ಅವರ ಕುರ್ಚಿ ಉಳಿಸಿಕೊಳ್ಳಲು ವರದಿ ಜಾರಿಗೆ ಮುಂದಾಗಿದ್ದಾರೆ.

ಆನೇಕಲ್ಲಿನ ಪ್ರಖ್ಯಾತ ಹಸಿ ಕರಗವನ್ನು ಅರ್ಚಕ ರಮೇಶ್ ಹೊತ್ತು ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದರು. ರಸ್ತೆಯ ಇಕ್ಕೆಲಗಳಲ್ಲಿ ನಿಂತ ಭಕ್ತರು ಮಲ್ಲಿಗೆ ಹೂ ಎರೆದು ಭಕ್ತಿ ಸಮರ್ಪಿಸಿದರು.

ಬೆಂಗಳೂರಿನ ಕಬ್ಬನ್ ಪಾರ್ಕ್ ವಾಕರ್ಸ್ ಅಸೋಸಿಯೇಷನ್ ಮತ್ತು ಚಕ್ಮಾ ಸ್ಟೂಡೆಂಟ್ಸ್ ಅಸೋಸಿಯೇಷನ್ ಆಯೋಜಿಸಿದ್ದ ಬಿಜು ಹಬ್ಬ (ಯುಗಾದಿ ಹಬ್ಬ) ಆಚರಿಸಲು ಯುವಕರು ತಮ್ಮ ಸಾಂಪ್ರದಾಯಿಕ ಉಡುಗೆಗಳನ್ನು ಧರಿಸಿ ನೃತ್ಯ ಪ್ರದರ್ಶಿಸಿದರು. ಬಿಜು ಹಬ್ಬವು ತ್ರಿಪುರಾದ ಚಕ್ಮಾ ಜನರು ಆಚರಿಸುವ ಸಾಂಸ್ಕೃತಿಕ ಮತ್ತು ಧಾರ್ಮಿಕ ಹಬ್ಬವಾಗಿದೆ.

ತಾಲೂಕು, ಜಿಲ್ಲಾ ಮಟ್ಟದಲ್ಲಿ ಸೇವಾದಳದವರಿಗೂ ಅಧಿಕಾರ ನೀಡುವ ಆಲೋಚನೆ: ಡಿ.ಕೆ ಶಿವಕುಮಾರ್

ಸೇವಾದಳ ಕಾಂಗ್ರೆಸ್‌ನ ಆಧಾರಸ್ತಂಭ

ಬೆಂಗಳೂರು: ಸೇವಾದಳ ಕಾಂಗ್ರೆಸ್ ಪಕ್ಷದ ಆಧಾರಸ್ತಂಭ. ಪಕ್ಷದಲ್ಲಿ ನೀವು ಎಲ್ಲರಿಗಿಂತ ಕೊನೆ ಎಂಬ ಭಾವನೆ ಬೇಡ. ತಾಲೂಕು, ಜಿಲ್ಲಾ ಮಟ್ಟದಲ್ಲಿ ಸೇವಾದಳದವರಿಗೂ ಅಧಿಕಾರ ನೀಡುವ ಆಲೋಚನೆ ಮಾಡಲಾಗುತ್ತಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಭಾರತ್ ಜೋಡೋ ಭವನದಲ್ಲಿ ಭಾನುವಾರ ನಡೆದ ಭಾರತೀಯ ಸೇವಾದಳದ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ಸಮಾಜ ಸೇವೆ ಮಾಡುವವರನ್ನು ಹೆಚ್ಚು ಗುರುತಿಸುತ್ತದೆ. ಹೀಗಾಗಿ ನಮ್ಮ ಸಮಾಜದಲ್ಲಿ ರಾಮನ ತಂದೆ ದಶರಥ ಮಹಾರಾಜನಿಗಿಂತ, ರಾಮನ ಭಂಟ ಹನುಮಂತನ ದೇವಾಲಯಗಳು ಹೆಚ್ಚಾಗಿವೆ. ಅದೇ ರೀತಿ ನೀವು ಕಾಂಗ್ರೆಸ್ ಪಕ್ಷಕ್ಕೆ ಆಧಾರಸ್ತಂಭ. ಇದನ್ನು ಸೇವಾದಳದ ಎಲ್ಲಾ ಕಾರ್ಯಕರ್ತರು ತಲೆಯಲ್ಲಿಟ್ಟುಕೊಳ್ಳಬೇಕು ಎಂದು ಹೇಳಿದರು.

ದೇಶದ ಭದ್ರತೆ ಉದ್ದೇಶದಿಂದ ಸ್ಥಾಪನೆಯಾದ ವಿಭಾಗ ಸೇವಾದಳ. ನೆಹರೂ ಅವರ ಅವಧಿಯಲ್ಲಿ ಪ್ರಾರಂಭವಾಗಿ ಈಗ ಮಲ್ಲಿಕಾರ್ಜುನ ಖರ್ಗೆ ಅವರ ಅವಧಿವರೆಗೆ ನಡೆದುಕೊಂಡು ಬಂದಿದೆ. ಸೇವಾದಳ ಕಾಂಗ್ರೆಸ್ ಪಕ್ಷದ ಕಡೆಯ ಅಂಗ, ನಮ್ಮನ್ನು ಗುರುತಿಸುವುದಿಲ್ಲ ಎಂಬ ಆಲೋಚನೆಯನ್ನು ನಿಮ್ಮ ತಲೆಯಿಂದ ಕಿತ್ತೊಗೆಯಬೇಕು. ನಿಮ್ಮಲ್ಲಿ ನಾಯಕತ್ವದ ಗುಣ ಇದೆ ಎಂದು ನೆಹರೂ ಹಾಗೂ ಇಂದಿರಾ ಗಾಂಧಿ ಅವರೇ ಸೇವಾದಳದ ಅಧ್ಯಕ್ಷ ಸ್ಥಾನ ವಹಿಸಿದ್ದರು ಎಂದರು.

ಸೇವಾದಳದವರು ಹಾಕುವ ಗಾಂಧಿ ಟೋಪಿಯನ್ನು ಎಲ್ಲಾ ನಾಯಕರು ಹಾಕುತ್ತಾರೆ. ಬೆಳಗಾವಿ ಅಧಿವೇಶನ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಎಲ್ಲಾ ನಾಯಕರೂ ಇದನ್ನು ಧರಿಸಿದ್ದರು. ಬೇರೆ ನಾಯಕರ ಜತೆಗೆ ನೀವು ಸರಿಸಮಾನರು. ಬಿ.ಕೆ. ಹರಿಪ್ರಸಾದ್ ಅವರು ರಾಷ್ಟ್ರೀಯ ಸೇವಾದಳದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಸಂಸತ್ ಸದಸ್ಯರಾಗಿದ್ದಾರೆ. ಇನ್ನು ಅನೇಕರು ಸೇವಾದಳದಲ್ಲಿ ಕೆಲಸ ಮಾಡಿದ್ದಾರೆ. ಅವರು ಶಾಸಕರು, ಮಂತ್ರಿಗಳಾಗಿ ದೊಡ್ಡ ನಾಯಕರಾಗಿ ಬೆಳೆದಿದ್ದಾರೆ ಎಂದು ತಿಳಿಸಿದರು.

ಸಮಾಜಕ್ಕೆ ಏನಾದರೂ ಮಾಡಬೇಕು: ನಾವು ಹುಟ್ಟಿದ ಮೇಲೆ ಸಮಾಜಕ್ಕೆ ಏನಾದರೂ ಸೇವೆ ಮಾಡಬೇಕು. ನನ್ನಿಂದ ಏನೂ ಸಾಧ್ಯವಿಲ್ಲ ಎಂಬ ಆಲೋಚನೆ ಮಾಡಬಾರದು. ನೀವು ಶಾಸಕರು, ಮಂತ್ರಿ, ಮುಖ್ಯಮಂತ್ರಿ ಆಗಬಹುದು. ನೀವು ನಿಮ್ಮ ಆತ್ಮವಿಶ್ವಾಸ ಕಳೆದುಕೊಳ್ಳಬೇಡಿ. ಒಳ್ಳೆಯ ಕಾಲ ಬರುತ್ತಿದೆ. ಬ್ಲಾಕ್ ಅಧ್ಯಕ್ಷರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರು ಇಂದು ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ. ಅವರು ಹಾಗೂ ರಾಹುಲ್ ಗಾಂಧಿ ಅವರು ಜಿಲ್ಲಾ ಕಾಂಗ್ರೆಸ್‌ಗೆ ಹೊಸ ಸ್ವರೂಪ ನೀಡಲು ಪ್ರಯತ್ನಿಸುತ್ತಿದ್ದಾರೆ ಎಂದರು.

ನಾವು ಈಗ ಬುದ್ಧಿ ಕಲಿತು ನಮ್ಮ ಆಧಾರಸ್ತಂಭಗಳನ್ನು ಹೇಗೆ ಬೆಳಸಬೇಕು ಎಂದು ಆಲೋಚಿಸುತ್ತಿದ್ದೇವೆ. ಮುಂದಿನದಿನಗಳಲ್ಲಿ ಪ್ರತಿ ವಿಚಾರದಲ್ಲೂ ಜಿಲ್ಲಾ ಕಾಂಗ್ರೆಸ್ ಅಭಿಪ್ರಾಯ ಸಂಗ್ರಹಿಸಲು, ಅವರನ್ನು ಚುನಾವಣಾ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಲು ಮುಂದಾಗಿದ್ದಾರೆ. ಅವರೇ ರಾಜ್ಯಕ್ಕೆ ಬಂದು ಜಿಲ್ಲಾಧ್ಯಕ್ಷರ ಜತೆ ನೇರವಾಗಿ ಚರ್ಚೆ ಮಾಡಲಿದ್ದಾರೆ. ಸೇವಾದಳದವರು ಒಂದು ತಂಡ ರಚನೆ ಮಾಡಿ ಪ್ರತಿ ಜಿಲ್ಲೆಗೆ ಹೋಗಿ ಅಲ್ಲಿ ಸೇವಾದಳ ಹೊರತಾದ ಕಾಂಗ್ರೆಸ್ ಕಾರ್ಯಕರ್ತರಿಗೆ ಪಕ್ಷದ ಧ್ವಜಾರೋಹಣ, ರಾಷ್ಟ್ರಗೀತೆ, ವಂದೇ ಮಾತರಂ ಗೀತೆ ಗಾಯನ ಸೇರಿದಂತೆ ಇತರೆ ಅಂಶಗಳ ತರಬೇತಿ ನೀಡಬೇಕು ಎಂದು ಸೇವಾದಳದ ಅಧ್ಯಕ್ಷರಾದ ರಾಮಚಂದ್ರಪ್ಪ ಅವರಿಗೆ ಸೂಚಿಸುತ್ತೇನೆ. ಈ ರೀತಿ ಮಾಡಿದಾಗ ಬೇರೆ ಕಾರ್ಯಕರ್ತರು ಸೇವಾದಳದ ಜತೆ ಬೆರೆಯುತ್ತಾರೆ ಎಂದರು.

ಭಾರತ್ ಜೋಡೋ ಭವನದಲ್ಲಿ ಭಾನುವಾರ ನಡೆದ ಭಾರತೀಯ ಸೇವಾದಳದ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪಾಲ್ಗೊಂಡಿದ್ದರು.

ಶಾಶ್ವತ ಕಾಂಗ್ರೆಸ್ ತರಬೇತಿ ಕೇಂದ್ರ ಸ್ಥಾಪನೆ

ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಆಯ್ಕೆ ಸಮಿತಿಯು ಸೇವಾದಳ ಸೇರಿದಂತೆ ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್ ಅಭಿಪ್ರಾಯ ಸ್ವೀಕರಿಸುವ ಕೆಲಸ ಮಾಡಲಿದೆ. ನಿಮ್ಮ ಸೇವೆಯನ್ನು ನಾವು ಗಮನದಲ್ಲಿಟ್ಟುಕೊಂಡಿದ್ದೇವೆ. ಸೇವಾದಳದಲ್ಲಿ ಹೊಸಬರಿಗೆ ಅವಕಾಶ ಕಲ್ಪಿಸಬೇಕು. ಭಾರತ ಜೋಡೋ ಸಂದರ್ಭದಲ್ಲಿ ನಾವು ಅನೇಕ ಜಾಗಗಳನ್ನು ಗುರುತಿಸಿದ್ದು, ಶಾಶ್ವತ ಕಾಂಗ್ರೆಸ್ ತರಬೇತಿ ಕೇಂದ್ರ ಸ್ಥಾಪಿಸಲಾಗುವುದು. ಮಂಗಳೂರಿನಲ್ಲೂ ಜಾಗ ನೋಡಿದ್ದೇವೆ. ಇದರ ಜವಾಬ್ದಾರಿಯನ್ನು ಸೇವಾದಳದವರಿಗೂ ವಹಿಸಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ನೀವು ಮಾನಸಿಕವಾಗಿ ಗಟ್ಟಿಯಾಗಿರಬೇಕು. ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಸೇವಾದಳದವರಿಗೆ ಎಷ್ಟು ಸಾಧ್ಯವೋ ಅಷ್ಟು ಅಧಿಕಾರ ನೀಡಲಾಗುವುದು. ಕೆಲವು ನಾಯಕರು ನಿಮ್ಮನ್ನು ಅಗೌರವವಾಗಿ ನಡೆಸಿಕೊಳ್ಳುವುದನ್ನು ನೋಡಿದ್ದೇವೆ. ಸೂಕ್ತ ಕಾಲದಲ್ಲಿ ಅವರಿಗೆ ಸೂಕ್ತ ಸಂದೇಶ ರವಾನಿಸಲಾಗುವುದು. ಸೇವಾದಳದಲ್ಲೂ ಬೂತ್ ಮಟ್ಟದಲ್ಲಿ ಪ್ರತಿನಿಧಿಗಳನ್ನು ಹೊಂದಿರಬೇಕು. ನಮ್ಮ ಸರಕಾರ ಪ್ರತಿ ಬಡ ಕುಟುಂಬದ ಆರ್ಥಿಕ ಅಭಿವೃದ್ಧಿಗೆ ಗ್ಯಾರಂಟಿ ಯೋಜನೆಗಳ ಮೂಲಕ ವರ್ಷಕ್ಕೆ 52 ಸಾವಿರ ಕೋಟಿ ಒದಗಿಸಲಾಗಿದೆ. ಯಾರು ಏನೇ ಕೂಗಾಡಲಿ ರಾಜ್ಯದಲ್ಲಿ ಮತ್ತೆ ನಿಮ್ಮ ಸರಕಾರ ಅಧಿಕಾರಕ್ಕೆ ಬರುತ್ತದೆ.

- **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ತುಷ್ಟೀಕರಣದಿಂದ ರಾಜ್ಯದಲ್ಲಿ ಪ.ಬಂಗಾಳದ ಪರಿಸ್ಥಿತಿ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಮುಸ್ಲಿಂ ತುಷ್ಟೀಕರಣಕ್ಕೆ ಮುಂದಾಗಿರುವುದು ಮುಂದೊಂದು ದಿನ ಪಶ್ಚಿಮ ಬಂಗಾಳದಂತಹ ಪರಿಸ್ಥಿತಿಗೆ ಕಾರಣ ವಾಗಬಹುದು ಎಂದು ಸಂಸದ ಪಿ.ಸಿ.ಮೋಹನ್ ಅಭಿಪ್ರಾಯಪಟ್ಟಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ವಕ್ಫ್ ಕಾಯ್ದೆ ವಿರೋಧಿಸಿ ನಡೆದ ಹಿಂಸಾತ್ಮಕ ಪ್ರತಿಭಟನೆಯಿಂದಾಗಿ ಜನರು ತಮ್ಮ ಕುಟುಂಬಗಳು ಮತ್ತು ವಸ್ತುಗಳೊಂದಿಗೆ ಮುರ್ಷಿ ದಾಬಾದ್‌ನಿಂದ ಪಲಾಯನ ಮಾಡುತ್ತಿರುವ ವಿಡಿಯೋ ಹಂಚಿಕೊಂಡು ತಮ್ಮ ಎಕ್ಸ್ ಖಾತೆಯಲ್ಲಿ ಟ್ವೀಟ್ ಮಾಡಿರುವ ಅವರು, ಮುರ್ಷಿದಾಬಾದ್‌ನಲ್ಲಿ ನಡೆಯುತ್ತಿರುವ ಘಟನೆಗಳು ಪಶ್ಚಿಮ ಬಂಗಾಳ ರಾಜ್ಯ ಸರಕಾರದ ಅಪಾಯಕಾರಿ ತುಷ್ಟೀಕರಣ ರಾಜಕೀಯದ ನೇರ ಪರಿಣಾಮವಾಗಿದ್ದು, ಹಿಂದೂಗಳು ಪಲಾಯನ ಮಾಡುವಂತೆ ಒತ್ತಾಯಿಸುತ್ತಿದೆ. ಕರ್ನಾಟಕದಲ್ಲೂ ಕಾಂಗ್ರೆಸ್ ಸರಕಾರ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡುವ ಮೂಲಕ ಮುಸ್ಲಿಂ ಓಲೈಕೆಗೆ ಮುಂದಾಗಿದ್ದು ಇಲ್ಲಿಯೂ ಪಶ್ಚಿಮ ಬಂಗಾಳದಂಹ ಪರಿಸ್ಥಿತಿ ಉಂಟಾಗಬಹುದು, ರಾಜ್ಯದ ಹಿಂದೂಗಳು ಎಚ್ಚರಗೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಗಾಂಧೀಜಿ ಚಿಂತನೆ ಇಂದಿಗೂ ಪ್ರಸ್ತುತ: ವಿಶುಕುಮಾರ್

ಬೆಂಗಳೂರು: ಪತ್ರಿಕೆಗಳ ಮೂರು ಪ್ರಮುಖ ಉದ್ದೇಶಗಳನ್ನು ಗಾಂಧೀಜಿ ಅವರು ವಿವರಿಸುತ್ತಾ, ಜನರಿಗೆ ಇಷ್ಟವಾಗುವ ಚಿಂತನೆ ಅಭಿವೃದ್ಧಿಗೊಳಿಸಬೇಕು, ರಾಷ್ಟ್ರೀಯ, ಐತಿಹಾಸಿಕ ಆಧ್ಯಾತ್ಮಿಕ ಭಾವನೆಗಳನ್ನು ಉತ್ತೇಜನಗೊಳಿಸಬೇಕು, ತಪ್ಪುಗಳ ಬಗ್ಗೆ ನಿರ್ಭೀತಿಯಿಂದ ಬರೆಯಬೇಕು ಎಂಬ ಅವರ ಚಿಂತನೆಗಳು ಇಂದಿಗೂ ಪ್ರಸ್ತುತ ಎಂದು ಸಾರ್ವಜನಿಕ ಸಂಪರ್ಕ ಇಲಾಖೆ ವಿಶ್ರಾಂತ ನಿರ್ದೇಶಕ ಎನ್.ಆರ್.ವಿಶುಕುಮಾರ್ ಹೇಳಿದರು.

ನಗರದ ಆನಂದರಾವ್ ವೃತ್ತದ ಬಳಿ ಇರುವ ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದ ಆಶ್ರಯದಲ್ಲಿ 'ಪತ್ರಕರ್ತರಾಗಿ ಗಾಂಧೀಜಿ' ಎಂಬ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದ ಅವರು, ಗಾಂಧಿಯವರು ಚೌರಿ ಚೌರಾದಲ್ಲಿ ನಡೆದ ಸತ್ಯಾಗ್ರಹ ಹಿಂಸೆಗೆ ತಿರುಗಿದ್ದರ ಕುರಿತು, ಅದಕ್ಕೆ ತಾನೇ ನೈತಿಕ ಜವಾಬ್ದಾರಿ ಹೊತ್ತು ತನಗೆ ಶಿಕ್ಷೆ ನೀಡಿ ಎಂದು ನ್ಯಾಯಾಧೀಶರಲ್ಲಿ ವಿನಂತಿಸಿಕೊಂಡಿದ್ದು ಉಲ್ಲೇಖನೀಯ. ಅವರು ನವ ಜೀವನ, ಯಂಗ್ ಇಂಡಿಯಾ, ಹರಿಜನ ಪತ್ರಿಕೆಯ ಮೂಲಕ ದೇಶಾದ್ಯಂತ ಮನೆ ಮಾತಾಗಿದ್ದರು. ಆ ಕಾಲದಲ್ಲಿಯೇ ಹರಿಜನ ಪತ್ರಿಕೆಯ ಪ್ರಸಾರ ಸಂಖ್ಯೆ 5 ಲಕ್ಷ ಇರುವುದು ಗಮನಾರ್ಹ ಸಂಗತಿಯಾಗಿತ್ತು. ದೇಶದ ಎಲ್ಲ ಪತ್ರಿಕೆಗಳಿಗೂ ಗಾಂಧೀಜಿ ಬರಹಗಳೇ ಮೂಲ ಸರಕಾಗಿದ್ದವು ಎಂದರು.

ಕಾರ್ಯಕ್ರಮದಲ್ಲಿ ಕುಮಾರಿ ನೇಹಾ ಕುರ್ಸೆ ಅವರ ಭರತನಾಟ್ಯ ಹಾಗೂ ಯೋಗ ನೃತ್ಯಹಾಗೂ ಕೆ.ಆರ್.ಸ್ವಾಮಿ ಅವರ ವ್ಯಂಗ್ಯ ಚಿತ್ರಕಲಾ ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಕೆ.ಆರ್. ಸ್ವಾಮಿ ಹಾಗೂ ಕೆ.ಪ್ರಭಾಕರನ್ ಅವರನ್ನು ಸನ್ಮಾನಿಸಲಾಯಿತು. ಸಾಹಿತಿಗಳಾದ ಜಿ. ಮೃತ್ಯುಂಜಯ, ಸಿದ್ದಣ್ಣ ಸೊನ್ನದ, ಚಿಕ್ಕಲಿಂಗೇಗೌಡ, ಪುರುಷೋತ್ತಮ್ ದಾಸ್ ಹೆಗ್ಗಡೆ, ಪ್ರಭಾಕರ್ ಗಂಗೊಳ್ಳಿ, ಲೆಕ್ಕಾಧಿಕಾರಿಗಳ ಸಂಘದ ಕೆಂಪೇಗೌಡ, ಉಲಿಗೆ ಸ್ವಾಮಿ, ಬಿ. ಸತ್ಯನಾರಾಯಣ, ಸುಧಾ, ನಿತ್ಯಾನಂದಪ್ಪ, ನಿವೃತ್ತ ಮುಖ್ಯ ಎಂಜಿನಿಯರ್ ಎಸ್.ಶಂಕರ್, ಸುಚೇತನ.ಬಿ.ಎಸ್., ವಾಸುದೇವ ಕಾರಂತ್, ಪ್ರಕಾಶ್ ಪೂರ್ಣಮಠ, ರಾಜೇಶ್ವರಿ ಅಜ್ಜಿಬಾಳ್, ಗೀತಾ ಸಭಾಹಿತ, ಶ್ರೀವಾಣಿ, ನಿವೃತ್ತರ ಸಂಘದ ಶ್ಯಾಮರಾವ್ ಉಪಸ್ಥಿತರಿದ್ದರು.

ನಗರದ ಆನಂದರಾವ್ ವೃತ್ತದ ಬಳಿ ಇರುವ ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದ ಆಶ್ರಯದಲ್ಲಿ 'ಪತ್ರಕರ್ತರಾಗಿ ಗಾಂಧೀಜಿ' ಎಂಬ ವಿಶೇಷ ಉಪನ್ಯಾಸದಲ್ಲಿ ಸಾರ್ವಜನಿಕ ಸಂಪರ್ಕ ಇಲಾಖೆ ವಿಶ್ರಾಂತ ನಿರ್ದೇಶಕ ಎನ್.ಆರ್.ವಿಶುಕುಮಾರ್ ಮಾತನಾಡಿದರು.

ಲಂಚ ಪ್ರಕರಣ: ಮಾಡಾಳ್ ಪುತ್ರಗೆ ಲೋಕಾ ಕ್ಲೀನ್‌ಚಿಟ್

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮ ನಿಯಮಿತ (ಕೆಎಸ್‌ಡಿಎಲ್) ಟೆಂಡರ್ ಪ್ರಕ್ರಿಯೆಯಲ್ಲಿ ಲಂಚ ಪಡೆದ ಆರೋಪದಲ್ಲಿ ಸಿಲುಕಿದ್ದ ನಿಗಮದ ಮಾಜಿ ಅಧ್ಯಕ್ಷ ಮಾಡಾಳ್ ವಿರೂಪಾಕ್ಷಪ್ಪ ಪುತ್ರ ಪ್ರಶಾಂತ್ ಮಾಡಾಳ್ ಅವರನ್ನು ಲೋಕಾಯುಕ್ತ ವಿಶೇಷ ನ್ಯಾಯಾಲಯವು ದೋಷಮುಕ್ತಗೊಳಿಸಿದೆ. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮ ನಿಯಮಿತ (ಕೆಎಸ್‌ಡಿಎಲ್) ಟೆಂಡರ್ ಪ್ರಕ್ರಿಯೆಯಲ್ಲಿ ಲಂಚ ಪಡೆದ ಆರೋಪದಲ್ಲಿ ಸಿಲುಕಿದ್ದ ನಿಗಮದ ಮಾಜಿ ಅಧ್ಯಕ್ಷ ಮಾಡಾಳ್ ವಿರೂಪಾಕ್ಷಪ್ಪ ಪುತ್ರ ಪ್ರಶಾಂತ್ ಮಾಡಾಳ್ ಅವರನ್ನು ಲೋಕಾಯುಕ್ತ ವಿಶೇಷ ನ್ಯಾಯಾ ಲಯ ದೋಷಮುಕ್ತಗೊಳಿಸಿದೆ. ಪ್ರಶಾಂತ್ ಮಾಡಾಳ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ ಈ ಆದೇಶ ಮಾಡಿದೆ.

ಬೆಂಗಳೂರು ಜಲಮಂಡಳಿ(ಬಿಡಬ್ಲ್ಯುಎಸ್ ಎಸ್‌ಬಿ)ಯಲ್ಲಿ ಹಣಕಾಸು ಸಲಹೆಗಾರರಾಗಿದ್ದ ಪ್ರಶಾಂತ್ ಮಾಡಾಳ್, ಕೆಎಸ್‌ಡಿಎಲ್‌ಗೆ ಸುಗಂಧ ದ್ರವ್ಯ ಸಾಮಾಗ್ರಿಗಳನ್ನು ಪೂರೈಸುವವರಿಂದ 40 ಲಕ್ಷ ರು. ಲಂಚ ಪಡೆದಿದ್ದಾರೆಂಬ ಆರೋಪ ಎದುರಿಸುತ್ತಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯ, ಪ್ರಶಾಂತ್ ಅವರು ಲಂಚದ ಹಣವನ್ನು ಸ್ವೀಕರಿಸಿದ್ದಾರೆ ಎಂಬ ವಾದವನ್ನು ಒಪ್ಪಬಹುದಾದರೂ, ಹಣಕ್ಕಾಗಿ ಬೇಡಿಕೆ ಇಟ್ಟಿರುವ ಬಗ್ಗೆ ಯಾವುದೇ ಸಾಕ್ಷ್ಯ ಇಲ್ಲ. ಕೇವಲ ಹಣ ವಶಪಡಿಸಿಕೊಂಡಿರುವ ಆಧಾರದಲ್ಲಿಯೇ ಲಂಚದ ಆರೋಪ ಹೊರಿಸುವುದು ಸರಿಯಲ್ಲ. ಅರ್ಜಿದಾರರ ವಿರುದ್ಧ ಆರೋಪ ಹೊರಿಸಲು ಯಾವುದೇ ಆಧಾರವಿಲ್ಲ ಎಂದು ಅಭಿಪ್ರಾಯಪಟ್ಟು ಆರೋಪ ಮುಕ್ತಗೊಳಿಸಿದೆ.

ಅಂಬೇಡ್ಕರ್ ಜಯಂತಿ ಅಂಗವಾಗಿ ವೈಟ್‌ಫೀಲ್ಡ್‌ನ ಅಂಬೇಡ್ಕರ್ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಸಮುದಾಯದ ಮುಖಂಡರು, ಹಿರಿಯರನ್ನು ಮಾಜಿ ಸಚಿವ ಅರವಿಂದ ಲಿಂಬಾವಳಿ ಸನ್ಮಾನಿಸಿದರು.

ಅಂಬೇಡ್ಕರ್ ಜಯಂತಿ ಅಂಗವಾಗಿ ಅಂಬೇಡ್ಕರ್ ಪುತ್ಥಳಿ ಅನಾವರಣ

ವಿಶ್ವದ ಶ್ರೇಷ್ಠ ನಾಯಕ ಅಂಬೇಡ್ಕರ್

ಮಹದೇವಪುರ: ವಿಶ್ವಕಂಡ ಶ್ರೇಷ್ಠ ನಾಯಕ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಅಭಿಪ್ರಾಯಪಟ್ಟರು.

ಅಂಬೇಡ್ಕರ್ ಜಯಂತಿ ಅಂಗವಾಗಿ ವೈಟ್‌ಫೀಲ್ಡ್‌ನ ಅಂಬೇಡ್ಕರ್ ಪುತ್ಥಳಿ ಅನಾವರಣಗೊಳಿಸಿ ಅವರು ಮಾತನಾಡಿ, ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದಿಂದ ಪ್ರತಿಯೊಬ್ಬರೂ ನೆಮ್ಮದಿಯಿಂದ ಬದುಕುವಂತಾಗಿದೆ. ಇವರ ಸಂವಿಧಾನವನ್ನು ವಿಶ್ವವೇ ಕೊಂಡಾಡಿದೆ ಎಂದರು.

ಅಂಬೇಡ್ಕರ್‌ರವರು ನಿಧನರಾದಾಗ ದೆಹಲಿಯಲ್ಲಿ ಅವರ ಅಂತ್ಯಕ್ರಿಯೆ ಮಾಡಲು ಆರಡಿ ಮೂರಡಿ ಜಾಗ ಸಹ ಕಾಂಗ್ರೆಸ್ ನೀಡಲಿಲ್ಲ, ಮೋದಿಯವರು ಪ್ರಧಾನಿಯಾದ ಬಳಿಕ ಅಂಬೇಡ್ಕರ್ ರವರ ಹುಟ್ಟೂರು, ಓದಿದ ಜಾಗ ಅಂತ್ಯಕ್ರಿಯೆ ಜಾಗ ಸೇರಿದಂತೆ ಐದು ಸ್ಥಳಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ಅಂಬೇಡ್ಕರ್ ಗುಟ್ಟದಲ್ಲಿ ಅಂಬೇಡ್ಕರ್ ಪ್ರತಿಮೆ ಇರಲಿಲ್ಲ ಸ್ಥಳೀಯರ ಒತ್ತಾಯ ಹಾಗೂ ಮುಖಂಡರ ಸಲಹೆ ಮೇರೆಗೆ ಪುತ್ಥಳಿ ತೆರೆದು ಸುತ್ತಮುತ್ತಲ ಜನರಿಗೆ ಸಮರ್ಪಣೆ ಮಾಡಲಾಗಿದೆ ಎಂದರು.

ಈ ಹಿಂದೆ ತಾರತಮ್ಯ ಹೆಚ್ಚಾಗಿತ್ತು. ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಕಾಂಗ್ರೆಸ್ಸಿಗರು ಈ ಬಗ್ಗೆ ಜನರು ಅರಿತುಕೊಳ್ಳಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಮುದಾಯದ ಮುಖಂಡರು, ಹಿರಿಯರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಾಸಕರಾದ ಮಂಜುಳಾ ಅರವಿಂದ ಲಿಂಬಾವಳಿ , ಗ್ರಾಮಾಂತರ ಅಧ್ಯಕ್ಷಪಿಳ್ಳಪ್ಪ, ಮಂಡಲಅಧ್ಯಕ್ಷ ಶ್ರೀಧರ್ ರೆಡ್ಡಿ, ದೊಡ್ಡಗುಬ್ಬಿ ಪಂಚಾಯಿತಿ ಅಧ್ಯಕ್ಷೆ ಮಾಲಾ ಮಾರುತಿಕುಮಾರ್ , ಮುಖಂಡರಾದ ಮನೋಹರ ರೆಡ್ಡಿ ಮಾರಪ್ಪ, ವೇಣು, ಬಿದರಹಳ್ಳಿ ರಾಜೇಶ್, ಕೆ.ವಿ.ನಾಗರಾಜ್, ಮಹೇಂದ್ರ ಮೋದಿ, ಆದೂರು ಮುನಿರಾಜು ಮತ್ತಿತರರಿದ್ದರು.

ಜೀವಾ ಆತ್ಮಹತ್ಯೆ: ಡಿವೈಎಸ್‌ಪಿಯಿಂದ ವಕೀಲೆಗೆ ದೈಹಿಕ, ಮಾನಸಿಕ ಕಿರುಕುಳ!

ಹೈಕೋರ್ಟ್‌ಗೆ 2,300 ಪುಟಗಳ ಅಂತಿಮ ವರದಿ ಸಲ್ಲಿಕೆ | ಡೆತ್ ನೋಟ್‌ನಲ್ಲಿದ್ದ ಬಹುತೇಕ ಆರೋಪಗಳು ಸಾಬೀತು

ಬೆಂಗಳೂರು: ಭೋವಿ ನಿಗಮದಲ್ಲಿ ನಡೆದ ಅಕ್ರಮದ ತನಿಖೆ ಎದುರಿಸಿದ್ದ ವಕೀಲೆ ಹಾಗೂ ಉದ್ಯಮಿ ಜೀವಾ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ 90 ದಿನಗಳ ಕಾಲ ತನಿಖೆ ನಡೆಸಿದ್ದ ವಿಶೇಷ ತನಿಖಾ ತಂಡ 2,300 ಪುಟಗಳ ಅಂತಿಮ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಿದೆ.

ಕೋರ್ಟ್‌ಗೆ ಸಲ್ಲಿಸಿದ ಅಂತಿಮ ವರದಿಯಲ್ಲಿ ಮೃತ ಜೀವಾ ಡೆತ್ ನೋಟ್‌ನಲ್ಲಿದ್ದ ಬಹುತೇಕ ಆರೋಪಗಳು ಸಾಬೀತಾಗಿದೆ. ಅಲ್ಲದೇ ಡಿವೈಎಸ್ಪಿ ಕನಕಲಕ್ಷ್ಮಿ ಅವರು ದೈಹಿಕ, ಮಾನಸಿಕ ಕಿರುಕುಳ ನೀಡಿರುವುದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ ಇದೆಲ್ಲರ ದಾಖಲೆಗಳನ್ನು ಕೋರ್ಟ್‌ಗೆ ಸಲ್ಲಿಸಲಾಗಿದೆ. ಅಲ್ಲದೇ ವಿಧಿವಿಜ್ಞಾನ ಪ್ರಯೋಗಾಲಯ ವರದಿಗಳು, ಮರಣೋತ್ತರ ಪರೀಕ್ಷಾ ವರದಿ, ಡೆತ್ ನೋಟ್ ಫಾರೆನ್ಸಿಕ್ ರಿಪೋರ್ಟ್‌ಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸಲು ಮೂವರು ಐಪಿಎಸ್ ಅಧಿಕಾರಿಗಳನ್ನೊಳಗೊಂಡ ಎಸ್‌ಐಟಿ ತಂಡವನ್ನ ರಚಿಸಲಾಗಿತ್ತು. ಇದರಲ್ಲಿ ಸಿಸಿಬಿ ಡಿಸಿಪಿ ಹಕಾಯ್ ಅಕ್ಷಯ್ ಮಚೀಂದ್ರ, ಎಸ್ಪಿ ನಿಶಾ ಜೇಮ್ಸ್, ಸಿಬಿಐ ಎಸ್ಪಿ ವಿನಾಯಕ್ ವರ್ಮ ಅವರನ್ನೊಳಗೊಂಡ ಎಸ್‌ಐಟಿ ತಂಡ 90 ದಿನಗಳ ಕಾಲ ಸುದೀರ್ಘ ತನಿಖೆ ನಡೆಸಿತ್ತು. ಸದ್ಯ ತನಿಖೆ ಪೂರ್ಣಗೊಳಿಸಿರುವ ತಂಡ ಹೈಕೋರ್ಟ್‌ಗೆ ಅಂತಿಮ ವರದಿ ಸಲ್ಲಿಸಿದೆ.

ಸಿಐಡಿ ಅಧಿಕಾರಿಗಳ ವಿರುದ್ಧ ಪ್ರಕರಣ: ಜೀವಾ ಅವರ ಕಿರಿಯ ಸಹೋದರಿ ಸಂಗೀತಾ ಅವರು ನೀಡಿದ ದೂರಿನಲ್ಲಿ ವಿಚಾರಣೆ ನೆಪದಲ್ಲಿ ಸಿಐಡಿ ಅಧಿಕಾರಿಗಳು ತನ್ನ ಅಕ್ಕ ಜೀವಾಗೆ ಅವಮಾನ ಮಾಡಿದ್ದಾರೆ. ಅಂತೆಯೇ ಹಣಕ್ಕೆ ಬೇಡಿಕೆ ಇರಿಸಿದ್ದಾರೆ ಎಂದು ಆರೋಪಿಸಿದ್ದರು. ಈ ದೂರಿನ ಮೇರೆಗೆ ಬನಶಂಕರಿ ಠಾಣೆ ಪೊಲೀಸರು ಸಿಐಡಿ ಅಧಿಕಾರಿಗಳ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಮತ್ತು ಭ್ರಷ್ಟಾಚಾರ ತಡೆ ಕಾಯಿದೆಯಡಿ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದ್ದರು.

ಅಲ್ಲದೇ ಜೀವಾ ಆತ್ಮಹತ್ಯೆಗೂ ಮುನ್ನ ಮಹಿಳಾ ಉದ್ಯಮಿ ಜೀವಾ 13 ಪುಟಗಳ ಮರಣಪತ್ರ ಬರೆದಿದ್ದರು. ಅದರಲ್ಲಿ ಭೋವಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣ ಸಂಬಂಧ ಸಿಐಡಿ ಅಧಿಕಾರಿಗಳ ವಿಚಾರಣೆ ವಿಚಾರ ಪ್ರಸ್ತಾಪಿಸಿದ್ದರು. ಸಿಐಡಿ ವಿಚಾರಣೆಯಿಂದ ನನಗೆ ಅವಮಾನವಾಗಿದ್ದು, ಮಾನಸಿಕವಾಗಿ ನೊಂದಿದ್ದೇನೆ ಎಂದು ಉಲ್ಲೇಖಿಸಿದ್ದರು.

ಏನಿದು ಪ್ರಕರಣ?

ಭೋವಿ ನಿಗಮ ಅಕ್ರಮ ಸಂಬಂಧ ಜೀವಾರನ್ನು ಸಿಐಡಿ ವಿಚಾರಣೆಗೆ ಒಳಪಡಿಸಿತ್ತು. ಆದರೆ ಕಿರುಕುಳದ ಆರೋಪ ಮಾಡಿ ಜೀವಾ ಆತ್ಮಹತ್ಯೆ ಮಾಡಿಕೊಂಡಿದ್ದರು. ಭೋವಿ ನಿಗಮದಲ್ಲಿ ಒಟ್ಟು 34 ಕೋಟಿ ರು. ಅಕ್ರಮ ಹಣ ವರ್ಗಾವಣೆಯಾಗಿದೆ. ಇದರಲ್ಲಿ ಜೀವಾ ಮಾಲೀಕತ್ವದ ಸಂಸ್ಥೆ ಅನ್ನಿಕಾ ಎಂಟರ್‌ಪ್ರೈಸಸ್‌ಗೆ 7.16 ಕೋಟಿ ರು., ಅವರ ಸಹೋದರಿ ಹೆಸರಲ್ಲಿರುವ ಹರ್ನಿತಾ ಕ್ರಿಯೇಷನ್ಸ್‌ಗೆ 3.79 ಕೋಟಿ ರು. ವರ್ಗಾವಣೆ ಆಗಿತ್ತು. ಇನ್ನುಳಿದ ಹಣ ಮಾಜಿ ಎಂಡಿಗಳ ಆಪ್ತರ ಪಾಲುದಾರಿಕೆಯ ಸಂಸ್ಥೆಗಳಿಗೆ ವರ್ಗವಾಗಿತ್ತು. ಈ ಪ್ರಕರಣದ ಬಗ್ಗೆ ಆಂತರಿಕ ತನಿಖೆ ನಡೆಸಲು ಗೃಹ ಇಲಾಖೆ ಮುಂದಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೋಟಿಸ್ ಕೊಡದೇ ತಮ್ಮನ್ನ ವಿಚಾರಣೆಗೆ ಕರೆದು ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಜೀವಾ ಆರೋಪಿಸಿ ಬನಶಂಕರಿಯಲ್ಲಿರುವ ತಮ್ಮ ಮನೆಯಲ್ಲಿ ಜೀವಾ ಆತ್ಮಹತ್ಯೆಗೆ ಶರಣಾಗಿದ್ದರು.

ಪತ್ನಿಯ ಕಿರುಕುಳ: ಪತಿ ಆತ್ಮಹತ್ಯೆ ಯತ್ನ

ಬೆಂಗಳೂರು: ಪತ್ನಿಯ ಕಿರುಕುಳಕ್ಕೆ ಬೇಸತ್ತು ರಾಜಭವನದ ಎದುರು ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದ ವ್ಯಕ್ತಿಯನ್ನು ಸ್ಥಳೀಯರು ರಕ್ಷಿಸಿದ್ದಾರೆ.

ಆತ್ನಹತ್ಯೆಗೆ ಯತ್ನಿಸಿದ ವ್ಯಕ್ತಿ ಮೂಲತಃ ನಗರದ ಆರ್.ಟಿ. ನಗರದ ನಿವಾಸಿ. ಪತ್ನಿ ಕಿರುಕುಳ ನೀಡುತ್ತಿರುವ ಬಗ್ಗೆ ಪೊಲೀಸರು ದೂರು ಸ್ವೀಕರಿಸಿಲ್ಲ ಎಂದು ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿ ಆರೋಪಿಸಿದ್ದಾರೆ.

ನನ್ನ ಮೇಲೆ ಕೊಲೆ ಯತ್ನ ನಡೆದಿದೆ. ನನಗೆ ಬದುಕಲು ದಾರಿ ಇಲ್ಲ, ಸಾಯುವುದೊಂದೇ ದಾರಿ ಎಂದು ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿ ದ್ದರು. ವಿಧಾನಸೌಧ ಠಾಣೆಯ ಪೊಲೀಸರು ವ್ಯಕ್ತಿಯನ್ನು ಕರೆದೊಯ್ದರು. ಆತ್ಮಹತ್ಯೆಗೂ ಮುನ್ನ ಪುಟಗಟ್ಟಲೆ ಡೆತ್ ನೋಟ್ ಬರೆದಿದ್ದಾರೆ.

ಸಮಾಚಾರ ಸಣ್ಣದಲ್ಲ

ವಿಚ್ಛೇದನಕ್ಕೂ ಮುನ್ನ ಮಧ್ಯಸ್ಥಿಕೆ ಕಡ್ಡಾಯವಾಗಲಿ

ಬೆಂಗಳೂರು: ಕೌಟುಂಬಿಕ ನ್ಯಾಯಾಲಯದಲ್ಲಿ ವಿಚ್ಛೇದನ ಪ್ರಕರಣ ದಾಖಲಿಸುವುದಕ್ಕೂ ಮುನ್ನ ದಾವೆ ಪೂರ್ವ ಮಧ್ಯಸ್ಥಿಕೆ ಪ್ರಕ್ರಿಯೆ ಕಡ್ಡಾಯಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಸಲಹೆ ನೀಡಿದ್ದಾರೆ. ಕರ್ನಾಟಕ ನ್ಯಾಯಾಂಗ ಅಕಾಡೆಮಿಯಲ್ಲಿ ಸುಪ್ರೀಂ ಕೋರ್ಟ್‌ನ ಕೌಟುಂಬಿಕ ನ್ಯಾಯಾಲಯಗಳ ಸಮಿತಿ ಮತ್ತು ಕರ್ನಾಟಕ ಹೈಕೋರ್ಟ್ ಸಹಯೋಗದಲ್ಲಿ ಕುಟುಂಬ ಭಾರತೀಯ ಸಮಾಜದ ತಳಹದಿ ಎಂಬ ವಿಷಯದ ಕುರಿತಾದ ಎರಡು ದಿನಗಳ ದಕ್ಷಿಣ ವಲಯ ಪ್ರಾದೇಶಿಕ ಸಮಾವೇಶ ಉದ್ಘಾಟಿಸಿ ಮಾತನಾಡಿ, ವಿವಾದವು ಕೌಟುಂಬಿಕ ನ್ಯಾಯಾಲಯದ ಮುಂದೆ ಹೋಗುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಕೌಟುಂಬಿಕ ನ್ಯಾಯಾಲಯಗಳಲ್ಲಿ ತರಬೇತು ಗೊಂಡಿರುವ ಮಧ್ಯಸ್ಥಿಕೆದಾರರು ಅಥವಾ ನಿವೃತ್ತ ನ್ಯಾಯಾಧೀಶರನ್ನು ಮಧ್ಯಸ್ಥಿಕೆದಾರರನ್ನಾಗಿಸಬೇಕು ಎಂದರು. ಎಲ್ಲಾ ಸಂದರ್ಭದಲ್ಲೂ ಸಂಗಾತಿಯ ಹಿತಾಸಕ್ತಿಯನ್ನು ಮತ್ತೊಬ್ಬರು ಪರಿಗಣಿಸಬೇಕು. ಸಂಗಾತಿ ಮಾಡುತ್ತಿರುವುದು ತನ್ನ ದೃಷ್ಟಿಯಲ್ಲಿ ಸಮಸ್ಯಾತ್ಮಕ ಎನಿಸಿದರೆ ಆ ಸಂಗಾತಿಯ ಸ್ಥಾನದಲ್ಲಿ ನಿಂತು ಯೋಚಿಸಬೇಕು. ಇದು ವಿವಾದ ಉಲ್ಬಣಿಸುವುದಕ್ಕೆ ಬದಲಾಗಿ ಪರಸ್ಪರ ಅರಿಯುವುದಕ್ಕೆ ದಾರಿ ಮಾಡಿಕೊಡು ತ್ತದೆ. ಮದುವೆಯ ಬಂಧನದಲ್ಲಿರುವ ಸಂಗಾತಿಗಳಲ್ಲಿ ಈ ನಡೆ ಬೆಳೆಯುತ್ತಾ ಹೋದಂತೆ ಮಹಿಳೆಯ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಇಂಥ ಸಮಸ್ಯೆಗೆ ಕಾರಣವಲ್ಲ ಎಂಬುದು ದೃಢವಾಗುತ್ತದೆ ಎಂದು ತಿಳಿಸಿದರು.

ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ದೂರು ದಾಖಲಿಸಿ ತನಿಖೆಗೆ ಒಳಪಡಿಸಲು ಮನವಿ

ಡಿಕೆಶಿ ವಿರುದ್ಧ ರಾಜ್ಯಪಾಲರಿಗೆ ದೂರು ಪ್ರಾಸಿಕ್ಯೂಷನ್‌ಗೆ ಮುನಿರತ್ನ ಮನವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುತ್ತಿರುವ ಎರಡು ಸಾವಿರ ಕೋಟಿ ರು. ವೆಚ್ಚದ ವಿವಿಧ ಕಾಮಗಾರಿಗಳಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶೇ.15ರಷ್ಟು ಕಮಿಷನ್ ಪಡೆದಿದ್ದಾರೆ ಎಂದು ಆರೋಪಿಸಿ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರು ಪ್ರಾಸಿಕ್ಯೂಷನ್ ನಡೆಸಲು ಅನುಮತಿ ನೀಡುವಂತೆ ಕೋರಿ ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದಾರೆ.

ಭಾನುವಾರ ರಾಜಭವನಕ್ಕೆ ತೆರಳಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಖುದ್ದಾಗಿ ಭೇಟಿ ಮಾಡಿದ ಮುನಿರತ್ನ ಅವರು, ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಕೆಲವು ದಾಖಲೆಗಳನ್ನು ಸಲ್ಲಿಸಿ ವಿಚಾರಣೆ ನಡೆಸಲು ಅನುಮತಿ ನೀಡುವಂತೆ ಮನವಿ ಮಾಡಿದ್ದಾರೆ. ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ದೂರು ದಾಖಲಿಸಿ ಅವರನ್ನು ತನಿಖೆಗೆ ಒಳಪಡಿಸಬೇಕು. ಇದೊಂದು ಬೃಹತ್ ಭ್ರಷ್ಟಾಚಾರದ ಪ್ರಕರಣವಾಗಿರುವುದರಿಂದ ತನಿಖೆಯ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ.

ವಿವಿಧ ಕಾಮಗಾರಿಗಳ ಗುತ್ತಿಗೆ ನೀಡಲು ಟೆಂಡರ್ ಕರೆಯದೆ, ಪ್ರಕ್ರಿಯೆ ನಡೆಸಲಾಗುತ್ತಿದೆ. ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರ ಸಂಬಂಧಿಗಳಿಗೆ ಗುತ್ತಿಗೆ ನೀಡಲು ಮುಂದಾಗಿದ್ದು, ಡಿ.ಕೆ. ಶಿವಕುಮಾರ್ ಅವರ ಪರವಾಗಿ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ಗುತ್ತಿಗೆದಾರರಿಂದ ಶೇ.15ರಷ್ಟು ಕಮಿಷನ್ ಈಗಾಗಲೇ ಪಡೆದಿದ್ದಾರೆ ಎಂದು ದೂರಿದ್ದಾರೆ.

ಕೆಲವು ಅಧಿಕಾರಿ ವರ್ಗದವರನ್ನು ಅನುಕೂಲಕ್ಕೆ ತಕ್ಕಂತೆ ಬಳಕೆ ಮಾಡಿಕೊಂಡು ತಾವೇ ಕೆಲವು ಗುತ್ತಿಗೆದಾರರನ್ನು ಟೆಂಡರ್‌ನಲ್ಲಿ ಭಾಗವಹಿಸುವಂತೆ ಸೂಚಿಸಿ, ತಮಗೆ ಬೇಕಾದ ಹೊರರಾಜ್ಯದ ಗುತ್ತಿಗೆದಾರರಿಗೆ ಕಾರ್ಯದೇಶವನ್ನು ನೀಡಲು ಸಂಚು ಮಾಡಿದ್ದು, ಈ ಎಲ್ಲಾ ಅವ್ಯವಹಾರಗಳು ಮುಖ್ಯಮಂತ್ರಿಗಳ ಗಮನಕ್ಕೆ ಬರದಂತೆ ನೋಡಿಕೊಂಡಿರುತ್ತಾರೆ. ಈ ಅಕ್ರಮಕ್ಕೆ ಯಾವುದೇ ಕಾಂಗ್ರೆಸ್ ಮತ್ತು ಬಿಜೆಪಿ ಶಾಸಕರ ಪಾತ್ರ ಇರುವುದಿಲ್ಲ. ಇದನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ನೇರವಾಗಿ ನಿರ್ವಹಣೆಯನ್ನು ಮಾಡುತ್ತಿದ್ದಾರೆ.



ಬಿಬಿಎಂಪಿ ಆಯುಕ್ತರ ಹೆಸರು ಪ್ರಸ್ತಾಪ

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸಹ ಇದರಲ್ಲಿ ನೇರವಾಗಿ ಭಾಗಿಯಾಗಿದ್ದಾರೆ. ರಾಜ್ಯದ ಗುತ್ತಿಗೆದಾರರ ಬಿಡ್‌ಗಳನ್ನು ಅನಗತ್ಯವಾಗಿ ತಿರಸ್ಕರಿಸುತ್ತಿದ್ದಾರೆ. ಕೆಲವು ಕಾಮಗಾರಿಗಳಲ್ಲಿ ತಮ್ಮದೇ ಬೇನಾಮಿ ಕಂಪನಿಗಳ ಮೂಲಕ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದು, ಗುತ್ತಿಗೆ ಪಡೆದಿದ್ದಾರೆ ಎಂದು ಆರೋಪಿಸಿದ್ದಾರೆ. ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದ ಸ್ಟಾರ್ ಚಂದ್ರು ಅವರ ಸ್ಟಾರ್ ಬಿಲ್ಡರ್ಸ್‌ಗೆ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ 232 ಕೋಟಿ ರು. ಮೊತ್ತದ ಕಾಮಗಾರಿಗಳ ಗುತ್ತಿಗೆ ನೀಡಿದ್ದಾರೆ. ಈ ಎಲ್ಲ ಅಕ್ರಮಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಬೇಕು ಎಂದು ಕೋರಿದ್ದಾರೆ.

ಕೆಟಿಟಿಪಿ ಕಾಯಿದೆ ಉಲ್ಲಂಘನೆ ಆರೋಪ

ಬೆಂಗಳೂರಿನಲ್ಲಿ ಒಟ್ಟು 16 ಟೆಂಡರ್‌ಗಳಿಗೆ ಕಾರ್ಯಾದೇಶ ಕೊಟ್ಟಿದ್ದಾರೆ .ನಮ್ಮ ಕ್ಷೇತ್ರದಲ್ಲಿ 216 ಕೋಟಿ ಮೊತ್ತದ ಕಾಮಗಾರಿಗಳನ್ನು ಬಿಎಸ್‌ಆರ್ ಕಂಪನಿಗೆ ಟೆಂಡರ್ ನೀಡಿದ್ದಾರೆ. ವರ್ಲ್ಡ್ ಬ್ಯಾಂಕ್‌ನಿಂದ ರಾಜಾಕಾಲುವೆ ಕಾಮಗಾರಿಗಳಿಗೆ ಅಂತ 2 ಸಾವಿರ ಕೋಟಿ ಸಾಲ ತಂದಿದ್ದಾರೆ ಎಂದು ಹೇಳಿದರು. ಇದರ ಟೆಂಡರ್ ಅನ್ನು ಅನರ್ಹ ಕಂಪೆನಿಗಳಿಗೆ ಕೊಡುತ್ತಿದ್ದಾರೆ. ಇದರಲ್ಲಿ 400 ಕೋಟಿ ರು. ಕಮೀಷನ್ ಹೊಡೆಯಲಾಗಿದೆ. ಟೆಂಡರ್ ನಿಯಮಗಳನ್ನು ಬದಲಾಯಿಸಿ, ಕೆಟಿಟಿಪಿ ಕಾಯ್ದೆ ಉಲ್ಲಂಘಿಸಿದ್ದಾರೆ. ಮುಕ್ತವಾಗಿ ಟೆಂಡರ್ ಕರೆದು ಕಾಮಗಾರಿಗಳನ್ನು ಕೊಡುತ್ತಿಲ್ಲ. ನಿರ್ದಿಷ್ಟ ಗುತ್ತಿಗೆದಾರ ಕಂಪೆನಿಗಳಿಗೆ ಮಾತ್ರ ಕಮೀಷನ್ ಹೊಡೆಯಲು ಟೆಂಡರ್ ಕೊಡುತ್ತಿದ್ದಾರೆ.ಇದರಲ್ಲಿ ಕೆಟಿಪಿಪಿ ಕಾಯಿದೆಯ ನಿಯಮಗಳನ್ನು ಉಲ್ಲಂಘಿಸಿ ರಾಜಕಾಲುವೆಗಳ ಟೆಂಡರ್ ಕೊಟ್ಟಿದ್ದಾರೆ. ಗ್ಲೋಬಲ್ ಟೆಂಡರ್ ಕರೆಯದೇ ಅಕ್ರಮ ಎಸಗಲಾಗಿದೆ. ಇದನ್ನು ತಡೆಗಟ್ಟಿದರೆ ಸರಕಾರಕ್ಕೆ 400 ಕೋಟಿ ಉಳಿಯಲಿದೆ ಎಂದು ಶಾಸಕ ಮುನಿರತ್ನ ಅವರು ಆರೋಪಿಸಿದ್ದಾರೆ.

ಇದರೊಂದಿಗೆ ಕೂಡಲೇ ಟೆಂಡರ್ ಪಡೆಯಲು ಶೇ.15 ರಷ್ಟು ಹಣವನ್ನು ಸಂದಾಯ ಮಾಡಿಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಸುಮಾರು 20 ನಿಮಿಷಗಳ ಕಾಲ ದೂರು ಆಲಿಸಿರುವ ರಾಜ್ಯಪಾಲರು ಕಾನೂನು ತಜ್ಞರು ಹಾಗೂ ಸಂಬಂಧಪಟ್ಟವರಿಂದ ಅಭಿಪ್ರಾಯ ಪಡೆದು ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಭರವಸೆ ನೀಡಿದ್ದಾರೆ.

ಬಡವರ ಸಹಾಯಕ್ಕೆ ಸಮುದಾಯ ಭವನ

ನಾಯಂಡಹಳ್ಳಿಯಲ್ಲಿ ಸಮುದಾಯಭವನಕ್ಕೆ, ಐಟಿಐ ಲೇಔಟ್ ವಾರ್ಡ್ 131ರಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಕಾಮಗಾರಿಗೆ ಗೋವಿಂದರಾಜ ನಗರ ಶಾಸಕ ಪ್ರಿಯಾಕೃಷ್ಣ ಶಂಕುಸ್ಥಾಪನೆ ನೆರವೇರಿಸಿದರು.

ಬೆಂಗಳೂರು: ಬಡವರು ಹಾಗೂ ಮಧ್ಯಮವರ್ಗದವರಿಗೆ ನೆರವಾಗಲಿ ಎನ್ನುವ ಕಾರಣಕ್ಕೆ ಸಮುದಾಯ ಭವನ ವನ್ನು ನಿರ್ಮಿಸಲಾಗುತ್ತಿದೆ ಎಂದು ಗೋವಿಂದರಾಜ ನಗರ ಶಾಸಕ ಪ್ರಿಯಾಕೃಷ್ಣ ಹೇಳಿದರು.

ನಾಯಂಡಹಳ್ಳಿಯಲ್ಲಿ ಸಮುದಾಯಭವನಕ್ಕೆ, ಐಟಿಐ ಲೇಔಟ್ ವಾರ್ಡ್ 131ರಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿ ಸಲಾಯಿತು. ಬಳಿಕ ಮಾತನಾಡಿ, ಬಡವರು, ಮಧ್ಯಮವರ್ಗದವರ ಅನುಕೂಲಕ್ಕಾಗಿ ಸಮುದಾಯ ಭವನ ನಿರ್ಮಿಸಲಾಗುತ್ತಿದೆ. ಬೆಂಗಳೂರು ನಗರದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಮತ್ತು ಸಣ್ಣ ಸಮುದಾಯಗಳ ಕಲ್ಯಾಣಕ್ಕೆ ನೆರವು ನೀಡಲೂ ಸದಾ ಸಿದ್ಧ ಎಂದರು. ಇದು ಬಡ, ಮಧ್ಯಮವರ್ಗದವರಿಗೆ ಅನುಕೂಲವಾಗಲಿದೆ. ಸಮುದಾಯ ಭವನ ನಿರ್ಮಾಣದಿಂದ ಬಡ ಮಧ್ಯಮ ವರ್ಗದ ಜನರಿಗೆ ಇದರಿಂದ ಅನುಕೂಲವಾಗಲಿದೆ. ಆದಷ್ಟು ಶೀಘ್ರ ಸಮುದಾಯ ಭವನ ಸಾರ್ವಜನಿಕ ಬಳಕೆಗೆ ಸಿಗಲಿದೆ. ಮುಂದಿನ ದಿನಗಳಲ್ಲಿ ಕನಕ ಭವನ, ಅಂಬೇಡ್ಕರ್ ಭವನ, ರಂಗಮಂದಿರ, ವಿ. ರೆಫರಲ್ ಆಸ್ಪತ್ರೆ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದರು. ಈ ವೇಳೆ ಮುಖಂಡರಾದ ವೆಂಕಟಪ್ಪ,ರಾಜು ಎಂ., ಸತೀಶ್, ದಿನೇಶ್, ದಯಾನಂದ, ಶ್ರೀರಾಮಲು, ವೆಂಕಟೇಶ್ ರಾವ್, ಸುಭಾಷ್, ಬಸವರಾಜ್, ಉಪಸ್ಥಿತರಿದ್ದರು.

ಪತಿ ಅಕ್ರಮ ಸಂಬಂಧ: ಪತ್ನಿ ಆತ್ಮಹತ್ಯೆ

ಬೆಂಗಳೂರು: ಹಳೇ ಪ್ರಿಯತಮೆಯೊಂದಿಗೆ ಅಕ್ರಮ ಸಂಬಂಧವೇ ತನ್ನ ಪತ್ನಿ ಆತ್ಮಹತ್ಯೆಗೆ ಕಾರಣ ಎಂದು ಟೆಕ್ಕಿ ಬಶೀರ್ ಉಲ್ಲಾ ಕೊನೆಗೂ ಪೊಲೀಸರ ಎದುರು ಸತ್ಯ ಒಪ್ಪಿಕೊಂಡಿದ್ದಾರೆ.

ಇತ್ತೀಚೆಗಷ್ಟೇ ತನ್ನ ಪತಿ ಅಕ್ರಮ ಸಂಬಂಧ ಹೊಂದಿರುವುದಾಗಿ ಆರೋಪಿಸಿ ಗೃಹಿಣಿ ಅಸ್ಮಾ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಮಹಿಳೆಯ ಪೋಷಕರು ಟೆಕ್ಕಿ ಪತಿ ಬಶೀರ್ ಉಲ್ಲಾ ಮಗಳನ್ನು ಕೊಲೆ ಮಾಡಿ ಆತ್ಮಹತ್ಯೆ ಎಂದು ಬಿಂಬಿಸುತ್ತಿದ್ದಾನೆಂದು ಆರೋಪಿಸಿದ್ದರು.

ಪೊಲೀಸರು, ಟೆಕ್ಕಿ ಬಶೀರ್ ಉಲ್ಲಾ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಆರೋಪದ ಮೇಲೆ ಎಫ್‌ಐಆರ್ ದಾಖಲಿಸಿಕೊಂಡು ಬಂಧನ ಮಾಡಿ ತನಿಖೆಗೆ ಒಳಪಡಿಸಿದ್ದರು. ಅಸ್ಮಾ ಆತ್ಮಹತ್ಯೆಗೆ ಪ್ರೇರಣೆ ನೀಡಿದ್ದ ಆರೋಪದ ಮೇಲೆ ಆರೋಪಿ ಟೆಕ್ಕಿ ಬಶೀರ್ ಉಲ್ಲಾನನ್ನ ವಿಚಾರಣೆ ಮಾಡಿದಾಗ ಮಾಜಿ ಪ್ರಿಯತಮೆಯೊಂದಿಗೆ ಅಕ್ರಮ ಸಂಬಂಧ ಇದ್ದ ಬಗ್ಗೆ ಪೊಲೀಸರ ಮುಂದೆ ಒಪ್ಪಿಕೊಂಡಿದ್ದಾನೆ. ನನಗೆ ಅಕ್ರಮ ಸಂಬಂಧ ಇತ್ತು. ಅದನ್ನು ಅವಳಿಗೆ ಸಹಿಸಿಕೊಳ್ಳಲು ಆಗುತ್ತಿರಲಿಲ್ಲ. ಹಾಗಾಗಿ ನಿತ್ಯ ನನ್ನ ಜತೆ ಗಲಾಟೆಗೆ ಮುಂದಾಗುತ್ತಾ ಇದ್ದಳು. ಆಕೆಯ ಗಲಾಟೆಗೆ ನಾನು ಕೇರ್ ಮಾಡದೇ ಇದ್ದುದ್ದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಆರೋಪಿ ಟೆಕ್ಕಿ ಬಶೀರ್ ಉಲ್ಲಾ ಪೊಲೀಸರ ಮುಂದೆ ತಪ್ಪೊಪ್ಪಿಕೊಂಡಿದ್ದಾನೆಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ.

ಆರ್‌ಟಿ ನಗರ ತರಳಬಾಳು ಕೇಂದ್ರದಲ್ಲಿ ಭಾನುವಾರ ಶಿವರಾಮ ಕಾರಂತ ವೇದಿಕೆ ಏರ್ಪಡಿಸಿದ್ದ ಸಮಾರಂಭದಲ್ಲಿ ಲೇಖಕ ಡಾ.ರಾಧಾಕೃಷ್ಣ ರಾವ್ ಪಾಂಗಾಳ ಅವರನ್ನು ಸನ್ಮಾನಿಸಲಾಯಿತು. ಕಲಾವಿದ ಗಿರಿಧರ ಕಾರ್ಕಳ, ವೇದಿಕೆ ಅಧ್ಯಕ್ಷೆ ದೀಪಾ ಫಡ್ಕೆ, ವಿಮರ್ಶಕ ಎಸ್.ಆರ್. ವಿಜಯಶಂಕರ, 'ಪಾಂಗಾಳ ಡಾಕ್ಟ್ರು' ಕೃತಿ ಸಂಪಾದಕ ಪಾ.ಚಂದ್ರಶೇಖರ ಚಡಗ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಉಪಸ್ಥಿತರಿದ್ದರು.

ವೀರಣ್ಣ ಪಾಳ್ಯ: ಅಗ್ನಿ ಅವಘಡ 20ಕ್ಕೂ ಹೆಚ್ಚು ಶೆಡ್‌ಗಳು ಭಸ್ಮ

ಬೆಂಗಳೂರು: ಆಕಸ್ಮಿಕವಾಗಿ ಅಗ್ನಿ ಅವಘಡ ಸಂಭವಿಸಿ ಕೂಲಿ ಕಾರ್ಮಿಕರು ವಾಸವಿದ್ದ 20ಕ್ಕೂ ಹೆಚ್ಚು ಶೆಡ್‌ಗಳು ಬೆಂಕಿಗಾಹುತಿ ಆಗಿರುವಂತಹ ಘಟನೆ ನಗರದ ವೀರಣ್ಣ ಪಾಳ್ಯ ಮುಖ್ಯ ರಸ್ತೆಯ ಬಳಿ ನಡೆದಿದೆ.

ಬೆಂಕಿ ಅವಘಡದಿಂದ ಆಟಿಕೆ ಫ್ಯಾಕ್ಟರಿಯ ಕಾರ್ಮಿಕರಿಗಾಗಿ ನಿರ್ಮಿಸಲಾಗಿದ್ದ 50 ಪೈಕಿ 20 ಶೆಡ್‌ಗಳು ಬೆಂಕಿಗಾಹುತಿ ಆಗಿವೆ. ಶೆಡ್‌ನಲ್ಲಿದ್ದ ಸಾಮಗ್ರಿಗಳು ಸಂಪೂರ್ಣ ಸುಟ್ಟುಹೋಗಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸಿದ್ದಾರೆ. ಗೋವಿಂದಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಆಟಿಕೆ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಜನರಿಗಾಗಿ ವೀರನಪಾಳ್ಯ ಮುಖ್ಯ ರಸ್ತೆಯ ಖಾಸಗಿ ಶಾಲೆ ಪಕ್ಕದಲ್ಲಿದ್ದ ಶೆಡ್‌ಗಳನ್ನು ನಿರ್ಮಿಸಲಾಗಿದೆ. ಮೊದಲಿಗೆ ಒಂದು ಶೆಡ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಬಳಿಕ ಇತರೆ ಶೆಡ್‌ಗಳಿಗೂ ಹಬ್ಬಿದೆ. ಬೆಂಕಿ ಕಾಣಿಸಿಕೊಂಡ ತಕ್ಷಣ ಜನರು ಹೊರಗೆ ಓಡಿ ಬಂದಿದ್ದಾರೆ. ಸದ್ಯ ಬೆಂಕಿ ಅವಘಡದಿಂದ ರಾಯಚೂರು ಮೂಲದ ಕೂಲಿ ಕಾರ್ಮಿಕರ ಜೀವನ ಬೀದಿಗೆ ಬಂದಿದೆ.

ಅನೇಕ ವರ್ಷಗಳಿಂದ ಮಕ್ಕಳು, ಮಹಿಳೆಯರು ಚಿಕ್ಕ ಚಿಕ್ಕ ಶೆಡ್‌ಗಳಲ್ಲಿ 100ಕ್ಕೂ ಹೆಚ್ಚು ಜನರು ಇಲ್ಲೇ ವಾಸವಿದ್ದರು. ಬೆಂಕಿಯ ಜ್ವಾಲೆಗೆ ಶೆಡ್‌ಗಳು ಬೆಂಕಿಗಾಹುತಿ ಹಿನ್ನಲೆ ರಾತ್ರಿಯಿಡಿ ದೇಗುಲದ ಅಂಗಳದಲ್ಲಿ ಮಲಗಿದ್ದಾರೆ. ಇತ್ತ ಭಾನುವಾರ ಬೆಳಗ್ಗೆ ಜಾಗದ ಮಾಲೀಕ ಸ್ಥಳಕ್ಕೆ ಬಂದು ಇತರೆ ಶೆಡ್‌ಗಳಲ್ಲಿರುವ ಜನರಿಗೆ ಆದಷ್ಟು ಬೇಗ ಎಲ್ಲರೂ ಮನೆ ಖಾಲಿ ಮಾಡಲು ಸೂಚಿಸಿದ್ದು, ಮಾಲೀಕನ ಮಾತು ಕೇಳಿ ಬಡ ಜನರು ತಬ್ಬಿಬ್ಬಾಗಿದ್ದಾರೆ.

ಅಂಬೇಡ್ಕರ್ ಎಂಬ ಮಹಾಚೇತನ

ಆನಂದ ಎಸ್. ಖೋತ

ಒಂದು ಮಹಾನ್ ಕಾರ್ಯವಾಗಬೇಕಾದರೆ, ಒಂದು ಮಹಾನ್ ಚೇತನ ಉದಯಿಸಬೇಕು ಎಂಬ ಮಾತಿದೆ. ಅಸಾಧಾರಣವಾದುದನ್ನು ಸಾಧಿಸಿ ಚರಿತ್ರೆಯ ಪುಟದಲ್ಲಿ ಅಜರಾಮರರಾಗಿರುವ ಅಂಥದೊಂದು ಮಹಾನ್ ಚೇತನವೇ ಡಾ.ಬಿ.ಆರ್. ಅಂಬೇಡ್ಕರ್. ಇಂದು (ಏ.14) ಅವರ ಜನ್ಮದಿನ. ಇಂಥ ಮಹನೀಯರ ಕುರಿತು 'ಜನಿಸಿದರು' ಎಂದರೆ ಬಹಳ ಸಣ್ಣ ಶಬ್ದವಾದೀತು. ಏಕೆಂದರೆ, ತಾವು ನೊಂದು-ಬೆಂದು, ಉರಿದು ಬೆಳಕಾಗಿ, ಕತ್ತಲೆಯಲ್ಲಿದ್ದವರನ್ನು ಬೆಳಕಿನೆಡೆಗೆ ತಂದು ನಿಲ್ಲಿಸಿದವರನ್ನು 'ಜನಿಸಿದರು' ಎನ್ನುವುದಕ್ಕಿಂತ 'ಉದಯಿಸಿದರು' ಎನ್ನುವುದೇ ಸೂಕ್ತ.

1776ರಲ್ಲಿ ಅಮೆರಿಕ ಸ್ವತಂತ್ರವಾಯಿತು, 1787ರಲ್ಲಿ ಅದರ ಸಂವಿಧಾನ ರಚಿಸಲ್ಪಟ್ಟಿತು. ಆದರೂ ಅಮೆರಿಕದ ಗುಲಾಮರಿಗೆ ಸ್ವತಂತ್ರವಾಗಲು 90 ವರ್ಷ ಬೇಕಾಯಿತು. ಒಂದೊಮ್ಮೆ ಅಬ್ರಹಾಂ ಲಿಂಕನ್ ಅಮೆರಿಕದ ಅಧ್ಯಕ್ಷರಾಗದೆ ಇದ್ದಿದ್ದರೆ, ನಾವೀಗ ನೋಡುತ್ತಿರುವ ಅಮೆರಿಕ ಇರುತ್ತಿರಲಿಲ್ಲವೇನೋ? ಲಿಂಕನ್‌ರ ಆಗ್ರಹದಿಂದಾಗಿ ಅಮೆರಿಕದ ಸಂವಿಧಾನದಲ್ಲಿ ಬದಲಾವಣೆ ತಂದು, ಅಲ್ಲಿನ ಗುಲಾಮರಿಗೆ ಹಕ್ಕುಗಳನ್ನು ನೀಡಲಾಯಿತು. ಪರಿಣಾಮ, ಲಿಂಕನ್ ಅಮೆರಿಕದಲ್ಲಿ ಸಮಾನತೆಯ ಹರಿಕಾರರಾದರು. ಹಾಗೆಯೇ ಭಾರತದಲ್ಲಿ, ''ನಿಮ್ಮ ಹಕ್ಕುಗಳಿಗಾಗಿ ನೀವು ಹೋರಾಡದಿದ್ದರೆ, ಅವನ್ನು ನಿಮಗೆ ನೀಡಲು ಯಾರೂ ಮುಂದೆ ಬರುವುದಿಲ್ಲ'' ಎಂಬ ಧೈರ್ಯದ ಮಾತುಗಳನ್ನು ಹೇಳುತ್ತಾ, ದಮನಿತರ ದನಿ, ಕಣ್ಣು, ಶಕ್ತಿ, ಬುದ್ಧಿಯಾದವರು ಅಂಬೇಡ್ಕರ್. ಅವರು ಭಾರತವು ಕಂಡ ಒಬ್ಬ ಮಹಾಚೇತನ.

ಅಂಬೇಡ್ಕರ್‌ರ ಜೀವನಕ್ಕೆ ಸಂಬಂಧಿಸಿದ 5 ಪ್ರಮುಖ ಸ್ಥಳಗಳನ್ನು 'ಪಂಚತೀರ್ಥ' ಎನ್ನಲಾಗುತ್ತದೆ ಮತ್ತು ಇವು ಅವರ ಬದುಕಿನ ವಿವಿಧ ಹಂತಗಳನ್ನು, ಅವರ ಮಹತ್ಕಾರ್ಯಗಳನ್ನು ಪ್ರತಿನಿಧಿಸುತ್ತವೆ:

1. **ಜನ್ಮಭೂಮಿ:** ಮಧ್ಯ ಪ್ರದೇಶದ ಮಹೌ. 1891 ಏಪ್ರಿಲ್ 14ರಂದು ಅಂಬೇಡ್ಕರ್ ಜನಿಸಿದ ಸ್ಥಳವಿದು. ಇದನ್ನು ಈಗ 'ಡಾ.ಅಂಬೇಡ್ಕರ್ ನಗರ' ಎನ್ನಲಾಗುತ್ತದೆ. ಅವರು ವಾಸಿಸುತ್ತಿದ್ದ ಮನೆಯನ್ನು ಮಹಾರಾಷ್ಟ್ರ ಸರಕಾರವು ಖರೀದಿಸಿ ಸ್ಮಾರಕವಾಗಿ ಅಭಿವೃದ್ಧಿಪಡಿಸಿದೆ.
2. **ಶಿಕ್ಷಾಭೂಮಿ:** ಲಂಡನ್. ಅಂಬೇಡ್ಕರ್ ಅವರು 'ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್'ನಲ್ಲಿ ಉನ್ನತ ವ್ಯಾಸಂಗ ಮಾಡಿದ ಸ್ಥಳ.
3. **ದೀಕ್ಷಾಭೂಮಿ:** ಮಹಾರಾಷ್ಟ್ರದ ನಾಗ್ಪುರ. ಅಂಬೇಡ್ಕರ್ ಅವರು 1956ರ ಅಕ್ಟೋಬರ್ 14ರಂದು, ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧ ಧರ್ಮವನ್ನು ಸ್ವೀಕರಿಸಿದ ಐತಿಹಾಸಿಕ ಸ್ಥಳವಿದು. ಇಲ್ಲಿ ಭವ್ಯವಾದ ಸ್ತೂಪವನ್ನು ನಿರ್ಮಿಸಲಾಗಿದೆ.
4. **ಮಹಾಪರಿನಿರ್ವಾಣ ಭೂಮಿ:** ದೆಹಲಿ. ಅಂಬೇಡ್ಕರ್ ಅವರು 1956ರ ಡಿಸೆಂಬರ್ 6ರಂದು ನಿಧನರಾದ ಸ್ಥಳ. ಇಲ್ಲಿ ಅವರ ನೆನಪಿಗಾಗಿ ರಾಷ್ಟ್ರೀಯ ಸ್ಮಾರಕವನ್ನು ಸ್ಥಾಪಿಸಲಾಗಿದೆ.
5. **ಚೈತ್ಯಭೂಮಿ:** ಮಹಾರಾಷ್ಟ್ರದ ಮುಂಬೈ. ಅಂಬೇಡ್ಕರ್ ಅವರ ಅಂತ್ಯಕ್ರಿಯೆ ನಡೆದ ಸ್ಥಳ. ಅಂಬೇಡ್ಕರ್‌ರ ಅನುಯಾಯಿಗಳಿಗೆ ಪವಿತ್ರ ಸ್ಥಳವಾಗಿರುವ ಇಲ್ಲಿ ಅವರ ಸ್ಮಾರಕ ಸ್ತೂಪವಿದೆ.

ಅಂಬೇಡ್ಕರ್‌ರನ್ನು ಮಹಾಚೇತನವೆನ್ನಲು ಹಲವು ಕಾರಣಗಳಿವೆ. ಅವರನ್ನು 1947ರ ಆಗಸ್ಟ್ 29ರಂದು, ಸಂವಿಧಾನ ರಚನಾ ಸಭೆಯ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ವಿವಿಧ ದೇಶಗಳ ಸಂವಿಧಾನಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದ ಅಂಬೇಡ್ಕರ್, ಭಾರತದ ಅಗತ್ಯಗಳಿಗೆ ಅನುಗುಣವಾಗಿ ಅವನ್ನು ಅಳವಡಿಸಿಕೊಂಡು ನಮ್ಮ ಸಂವಿಧಾನದ ರೂಪುರೇಷೆಯನ್ನು ತಯಾರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಹುಟ್ಟಿನಿಂದಲೇ ತೀವ್ರ ಜಾತಿ-ತಾರತಮ್ಯ ಮತ್ತು ಅಸ್ಪೃಶ್ಯತೆಯನ್ನು ಅನುಭವಿಸಿದ ಅಂಬೇಡ್ಕರ್, ಈ ಅನ್ಯಾಯದ ವಿರುದ್ಧ ಬದುಕಿನುದ್ದಕ್ಕೂ ಹೋರಾಡಿದರು. ಅನೇಕ ಅಡೆತಡೆಗಳಿದ್ದರೂ ಅರ್ಥಶಾಸ್ತ್ರ, ಕಾನೂನು ಮತ್ತು ರಾಜ್ಯಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಗಳನ್ನು ಪಡೆದರು. ಅವರ ಜ್ಞಾನ ಮತ್ತು ವಿದ್ವತ್ತು ಅಸಾಧಾರಣವಾದುದಾಗಿತ್ತು.

ಅಂಬೇಡ್ಕರ್ ಮತ್ತು ಗಾಂಧೀಜಿಯ ನಡುವಿನ ಸಂಬಂಧವು ಸಂಕೀರ್ಣವಾದುದು. ಇಬ್ಬರೂ ಭಾರತೀಯ ಸಮಾಜದ ಸುಧಾರಣೆಗಾಗಿ ಶ್ರಮಿಸಿದ ಮಹಾಚೇತನಗಳಾದರೂ, ಅವರ ದೃಷ್ಟಿಕೋನಗಳು ಮತ್ತು ಕಾರ್ಯತಂತ್ರಗಳಲ್ಲಿ ಒಂದಷ್ಟು ವ್ಯತ್ಯಾಸಗಳಿದ್ದವು. ಒಮ್ಮತದ ಅಂಶಗಳನ್ನು ಪರಿಗಣಿಸುವುದಾದರೆ, ಇಬ್ಬರೂ ಭಾರತೀಯ ಸಮಾಜದಲ್ಲಿದ್ದ ಅಸ್ಪೃಶ್ಯತೆ ಮತ್ತು ತಾರತಮ್ಯವನ್ನು ವಿರೋಧಿಸಿದರು, ದುರ್ಬಲ ವರ್ಗಗಳ ಏಳಿಗೆಯನ್ನು ಬಯಸಿದರು ಮತ್ತು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಿದರು.

ಭಿನ್ನಾಭಿಪ್ರಾಯದ ಅಂಶಗಳನ್ನು ನೋಡುವುದಾದರೆ, ಜಾತಿ ವ್ಯವಸ್ಥೆಯ ಮೂಲಸ್ವರೂಪವನ್ನು ಸಮರ್ಥಿಸಿಕೊಂಡ ಗಾಂಧೀಜಿ, 'ವರ್ಣಾಶ್ರಮ ಧರ್ಮ'ವನ್ನು ನೈಸರ್ಗಿಕ ಮತ್ತು ಅವಶ್ಯಕವೆಂದು ಪರಿಗಣಿಸಿದರು. ಆದರೆ, ಕಾಲಾನಂತರದಲ್ಲಿ ಜಾತಿ ವ್ಯವಸ್ಥೆಯಲ್ಲಿ ಹುಟ್ಟಿಕೊಂಡಿದ್ದ ಅಸ್ಪೃಶ್ಯತೆ ಮತ್ತು ತಾರತಮ್ಯವನ್ನು ಅವರು ತೀವ್ರವಾಗಿ ವಿರೋಧಿಸಿದರು, ಅಸ್ಪೃಶ್ಯರನ್ನು 'ಹರಿಜನ' ಎಂದು ಕರೆದು ಅವರ ಉದ್ಧಾರಕ್ಕಾಗಿ ಶ್ರಮಿಸಿದರು. ಜಾತಿ ವ್ಯವಸ್ಥೆಯನ್ನು ಒಳಗಿನಿಂದಲೇ ಸುಧಾರಿಸಬಹುದೆಂದು ಗಾಂಧೀಜಿ ನಂಬಿದ್ದರು. ಆದರೆ, ಜಾತಿ ವ್ಯವಸ್ಥೆಯನ್ನೇ ಸಂಪೂರ್ಣವಾಗಿ ತಿರಸ್ಕರಿಸಿದ ಅಂಬೇಡ್ಕರ್, ಇದು ಅಸಮಾನತೆ-ತಾರತಮ್ಯ-ಶೋಷಣೆಯ ಮೂಲ ಎಂದು ವಾದಿಸಿದರು. ಜಾತಿ ವ್ಯವಸ್ಥೆಯು ವ್ಯಕ್ತಿಯ ಅರ್ಹತೆ ಮತ್ತು ಸಾಮರ್ಥ್ಯಗಳನ್ನು ಕಡೆಗಣಿಸುತ್ತದೆ, ಸಮಾಜವನ್ನು ವಿಭಜಿಸುತ್ತದೆ ಎಂದು ಅವರು ನಂಬಿದ್ದರು ಹಾಗೂ ಜಾತಿ ವ್ಯವಸ್ಥೆಯ ನಿರ್ಮೂಲನೆಯೇ ದಲಿತರ ವಿಮೋಚನೆಗೆ ಏಕೈಕ ಮಾರ್ಗವೆಂದು ಪ್ರತಿಪಾದಿಸಿದರು.

ದಲಿತರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವ ವಿಷಯದಲ್ಲೂ ಇವರಿಬ್ಬರ ನಡುವೆ ಭಿನ್ನಾಭಿಪ್ರಾಯವಿತ್ತು. 'ದಲಿತರಿಗೆ ರಾಜಕೀಯ ಅಧಿಕಾರ ಮತ್ತು ಪ್ರಾತಿನಿಧ್ಯದ ಖಾತ್ರಿಗೆ ಪ್ರತ್ಯೇಕ ಮತಕ್ಷೇತ್ರಗಳು ಅವಶ್ಯ' ಎಂದು ಅಂಬೇಡ್ಕರ್ ವಾದಿಸಿದರೆ, 'ಪ್ರತ್ಯೇಕ ಮತಕ್ಷೇತ್ರಗಳು ಹಿಂದೂ ಸಮಾಜವನ್ನು ಮತ್ತಷ್ಟು ವಿಭಜಿಸುತ್ತವೆ' ಎಂದು ನಂಬಿದ್ದ ಗಾಂಧೀಜಿಯವರು ಅಂಬೇಡ್ಕರ್‌ರ ವಾದವನ್ನು ವಿರೋಧಿಸಿದರು. 1932ರಲ್ಲಿ ನಡೆದ ಪೂನಾ ಒಪ್ಪಂದವು ಈ ಭಿನ್ನಾಭಿಪ್ರಾಯದ ಫಲಿತಾಂಶವಾಗಿತ್ತು; ಇದರಲ್ಲಿ ಪ್ರತ್ಯೇಕ ಮತಕ್ಷೇತ್ರಗಳ ಬದಲಿಗೆ ಸಾಮಾನ್ಯ ಮತಕ್ಷೇತ್ರಗಳಲ್ಲಿ ದಲಿತರಿಗೆ ಮೀಸಲು ಸ್ಥಾನಗಳನ್ನು ಒದಗಿಸಲಾಯಿತು. ಮೇಲ್ಜಾತಿಗಳ ಮನಃಪರಿವರ್ತನೆ ಹಾಗೂ ನೈತಿಕ ಸುಧಾರಣೆಗಳ ಮೂಲಕ ಸಾಮಾಜಿಕ ಬದಲಾವಣೆ ತರಲು ಗಾಂಧೀಜಿ ಯತ್ನಿಸಿದರೆ, ಕಾನೂನು ಮತ್ತು ರಾಜಕೀಯ ಕ್ರಮಗಳ ಮೂಲಕ ರಚನಾತ್ಮಕ ಬದಲಾವಣೆ ತರಬೇಕೆಂದು ಅಂಬೇಡ್ಕರ್ ಪ್ರತಿಪಾದಿಸಿದರು; ಶಿಕ್ಷಣ-ಸಂಘಟನೆ-ಹೋರಾಟದ ಮೂಲಕ ದಲಿತರು ತಮ್ಮ ಹಕ್ಕುಗಳನ್ನು ಪಡೆಯಬೇಕೆಂದು ಅವರು ನಂಬಿದ್ದರು. ದಲಿತರ ಕುರಿತಾದ ಗಾಂಧೀಜಿಯವರ ನಿಧಾನಗತಿಯ ಸುಧಾರಣಾ ಕ್ರಮಗಳನ್ನು ಅಂಬೇಡ್ಕರ್ ಟೀಕಿಸಿದರೆ, ಪ್ರತ್ಯೇಕ ಮತಕ್ಷೇತ್ರಗಳ ಕುರಿತಾದ ಅಂಬೇಡ್ಕರ್‌ರ ಬೇಡಿಕೆಯನ್ನು ಗಾಂಧೀಜಿ ವಿರೋಧಿಸಿದರು. ಈ ಭಿನ್ನಾಭಿಪ್ರಾಯಗಳ ಹೊರತಾಗಿಯೂ ಈ ಇಬ್ಬರೂ ಭಾರತೀಯ ಸಮಾಜದ ಕಲ್ಯಾಣಕ್ಕಾಗಿ ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡಿದರು. ಅವರ ಸಂಬಂಧವು ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಅಧ್ಯಾಯವಾಗಿದ್ದು, ಇದು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ರಾಜಕೀಯ ಪ್ರಾತಿನಿಧ್ಯದ ಕುರಿತಾದ ಚರ್ಚೆಗಳಿಗೆ ಇಂದಿಗೂ ಪ್ರೇರಣೆ ನೀಡುತ್ತದೆ.

ವಿವಾಹ, ವಿಚ್ಛೇದನ, ಆಸ್ತಿ ಹಕ್ಕು ಮುಂತಾದ ವಿಷಯಗಳಲ್ಲಿ 'ಹಿಂದೂ ಕೋಡ್ ಬಿಲ್' ಮಹಿಳೆಯರಿಗೆ ಪುರುಷರಷ್ಟೇ ಸಮಾನ ಹಕ್ಕುಗಳನ್ನು ನೀಡುತ್ತದೆ ಎಂದು ಪ್ರತಿಪಾದಿಸಿದ ಅಂಬೇಡ್ಕರ್, ಸಮಾಜದಲ್ಲಿ ಸಾಮಾಜಿಕ ನ್ಯಾಯವನ್ನು ಸ್ಥಾಪಿಸಲು, ಸಮಾಜವನ್ನು ಆಧುನೀಕರಣಗೊಳಿಸಲು ಹಾಗೂ ಮಹಿಳೆಯರಿಗೆ ಘನತೆ-ಸ್ವಾತಂತ್ರ್ಯವನ್ನು ನೀಡಲು ಈ ವಿಧೇಯಕವು ನೆರವಾಗುತ್ತದೆ ಎಂದು ನಂಬಿದ್ದರು. ಆದರೆ ಈ ವಿಧೇಯಕಕ್ಕೆ ತೀವ್ರ ವಿರೋಧ ವ್ಯಕ್ತವಾದಾಗ ಅಂಬೇಡ್ಕರ್ ಬೇಸರಗೊಂಡರು. ಈ ವಿಧೇಯಕವನ್ನು ವಿಳಂಬಗೊಳಿಸಿದ ಮತ್ತು ಅದರ ಪ್ರಮುಖ ಅಂಶಗಳನ್ನು ದುರ್ಬಲಗೊಳಿಸಿದ ಸರಕಾರದ ಧೋರಣೆಗೆ ಪ್ರತಿಭಟಿಸಿ 1951ರಲ್ಲಿ ಕಾನೂನು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಏಕರೂಪ ನಾಗರಿಕ ಸಂಹಿತೆಯ ಬಗ್ಗೆ ತಮ್ಮದೇ ಆದ ಸ್ಪಷ್ಟ ಅಭಿಪ್ರಾಯಗಳನ್ನು ಹೊಂದಿದ್ದ ಅಂಬೇಡ್ಕರ್, ''ಧರ್ಮಾಧಾರಿತ ವೈಯಕ್ತಿಕ ಕಾನೂನುಗಳನ್ನು ರದ್ದುಪಡಿಸಬೇಕು ಮತ್ತು ಎಲ್ಲ ನಾಗರಿಕರಿಗೂ ಒಂದೇ ರೀತಿಯ ಕಾನೂನು ಇರಬೇಕು'' ಎಂದು ವಾದಿಸಿ, ಈ ಪರಿಕಲ್ಪನೆಯನ್ನು ಬಲವಾಗಿ ಬೆಂಬಲಿಸಿದರು. ವೈಯಕ್ತಿಕ ಕಾನೂನುಗಳು ಮಹಿಳೆಯರನ್ನು ಕೀಳಾಗಿ ಕಾಣುತ್ತವೆ, ಲಿಂಗ ಅಸಮಾನತೆಯನ್ನು ಶಾಶ್ವತಗೊಳಿಸುತ್ತವೆ ಎಂದು ನಂಬಿದ್ದ ಅವರು, ವಿವಾಹ, ವಿಚ್ಛೇದನ, ಆಸ್ತಿ ಹಕ್ಕು ಮತ್ತು ದತ್ತು ಮುಂತಾದ ವಿಷಯಗಳಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡುವ ಏಕರೂಪ ನಾಗರಿಕ ಸಂಹಿತೆಯು ಲಿಂಗನ್ಯಾಯವನ್ನು ಖಾತ್ರಿಪಡಿಸುತ್ತದೆ ಎಂದು ಪ್ರತಿಪಾದಿಸಿದರು.

ಭಾರತವು ಧರ್ಮನಿರಪೇಕ್ಷ ರಾಷ್ಟ್ರವಾಗಿರಬೇಕು ಮತ್ತು ಧರ್ಮವು ಕಾನೂನು ವಿಷಯಗಳ ಮೇಲೆ ಪ್ರಭಾವ ಬೀರಬಾರದು ಎಂದು ಪ್ರತಿಪಾದಿಸಿದ ಅಂಬೇಡ್ಕರ್, ಏಕರೂಪ ನಾಗರಿಕ ಸಂಹಿತೆಯು ರಾಷ್ಟ್ರೀಯ ಏಕತೆಯನ್ನು ಉತ್ತೇಜಿಸುತ್ತದೆ, ಧಾರ್ಮಿಕ-ಸಾಂಸ್ಕೃತಿಕ ಭಿನ್ನತೆಗಳನ್ನು ಮೀರಿ ಎಲ್ಲ ಭಾರತೀಯರನ್ನೂ ಒಂದೇ ಕಾನೂನಿನ ಅಡಿಯಲ್ಲಿ ತರುತ್ತದೆ ಎಂದು ವಾದಿಸಿದರು. ಇಂಥದೊಂದು ಸಂಹಿತೆಯು ಅಪೇಕ್ಷಣೀಯವಾಗಿದ್ದರೂ ಅದನ್ನು ತಕ್ಷಣವೇ ಜಾರಿಗೊಳಿಸುವುದು ಸೂಕ್ತವಲ್ಲ ಎಂಬುದು ಅಂಬೇಡ್ಕರ್‌ರ ಅಭಿಪ್ರಾಯವಾಗಿತ್ತು. ಸಂವಿಧಾನ ರಚನೆಯ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ವ್ಯಾಪಕ ಭಿನ್ನಾಭಿಪ್ರಾಯಗಳಿದ್ದವು. ಹೀಗಾಗಿ ಅದನ್ನು ರಾಜ್ಯನೀತಿಯ ನಿರ್ದೇಶಕ ತತ್ವಗಳ ಭಾಗವಾಗಿ (ವಿಧಿ 44) ಸೇರಿಸಲಾಯಿತು. ಭವಿಷ್ಯದ ಸೂಕ್ತ ಸಮಯದಲ್ಲಿ, ಸಮಾಜದಲ್ಲಿ ಒಮ್ಮತ ಮೂಡಿದ ನಂತರ ಅದನ್ನು ಜಾರಿಗೊಳಿಸಬಹುದು ಎಂಬುದು ಅವರ ನಿಲುವಾಗಿತ್ತು.

ದಲಿತರ ಹಕ್ಕುಗಳ ಪ್ರಬಲ ದನಿಯಾಗಿದ್ದ, ಅವರ ಘನತೆ-ಸಮಾನತೆಗಾಗಿ ನಿರಂತರ ಹೋರಾಡಿದ ಅಂಬೇಡ್ಕರ್ ಅವರು ಭಾರತದಲ್ಲಿ ಜನಿಸಿದ ಒಂದು ಮಹಾಚೇತನ. ಅವರನ್ನು ನಿರಂತರ ನೆನೆಯೋಣ, ಗೌರವಿಸೋಣ.

(ಲೇಖಕರು ಉಪನ್ಯಾಸಕರು)

ಸಮಾನತೆಯ ಹರಿಕಾರ, ಆಧುನಿಕ ಬಸವಣ್ಣ

ಲಕ್ಷ್ಮೀ ಹೆಬ್ಬಾಳ್ಕರ್

ಈ ಭೂಮಿಯಲ್ಲಿ, 12ನೇ ಶತಮಾನದಲ್ಲಿ ಸಮಾನತೆಯ ಸಂದೇಶ ಸಾರಿಹೋದ ಬಸವಣ್ಣ ಹಾಗೂ 20ನೇ ಶತಮಾನದಲ್ಲಿ ಅದೇ ಸಂದೇಶವನ್ನು ಜಾರಿಗೊಳಿಸಲು ತಮ್ಮನ್ನು ತೊಡಗಿಸಿಕೊಂಡ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಈ ಇಬ್ಬರಲ್ಲೂ ನನಗೆ ಹಲವು ಸಾಮ್ಯತೆಗಳು ಕಂಡುಬರುತ್ತವೆ.

ಇಬ್ಬರ ಧ್ಯೇಯೋದ್ದೇಶಗಳು ಒಂದೇ ಆಗಿದ್ದವು. ಸಮಾಜದಲ್ಲಿ ಮೇಲು-ಕೀಳು ಎನ್ನುವ ಭಾವನೆ ಇರಬಾರದು. ಬದುಕಿನ ಹಕ್ಕು ಎಲ್ಲರಿಗೂ ಸಮಾನವಾಗಿ ಸಿಗಬೇಕು, ನೈಸರ್ಗಿಕ ಸಂಪನ್ಮೂಲಗಳ ಬಳಕೆಗೆ ಸಮಾನ ಅಧಿಕಾರವಿ ರಬೇಕು. ಎಲ್ಲ ಹಕ್ಕುಗಳೂ ಸಮಾನವಿರಬೇಕು ಎನ್ನುವ ಉದ್ದೇಶದೊಂದಿಗೆ ಅರಿವಿನ ಸಮಾಜವನ್ನು ನಿರ್ಮಿಸಿ, ಹೊಸ ಬೆಳಕನ್ನು ಕಾಣುವ ಕನಸು ಹೊತ್ತವರು ಈ ಇಬ್ಬರೂ. ಬಸವಣ್ಣ ಸಾರಿದ ಸಂದೇಶವನ್ನು ಅಕ್ಷರಶಃ ಜಾರಿಗೆ ತರಲು ಅಂಬೇಡ್ಕರ್ ತಮ್ಮ ಜೀವಿತಾವಧಿಯನ್ನು ಸಂಪೂರ್ಣವಾಗಿ ಬಳಸಿ ಕೊಂಡರು. ಸತ್ಯ, ಸಮಾನತೆ, ಸಹಿಷ್ಣುತೆ ಮಾನವಧರ್ಮದ ದೊಡ್ಡ ಆಸ್ತಿಗಳು ಎಂದು ಭಾವಿಸಿ, ಅದನ್ನು ಎಲ್ಲರಲ್ಲೂ ಕಾಣುವ ಕನಸನ್ನು ಹೊತ್ತವರು ಬಸವಣ್ಣ ಮತ್ತು ಅಂಬೇಡ್ಕರ್ ಅವರು.

ಸಮಾಜದಲ್ಲಿನ ಅಸಮಾನತೆಯನ್ನು ಕಂಡು ಅಂಬೇಡ್ಕರ್ ಅವರಿಗೆ ಬಹಳ ದೊಡ್ಡ ಮಟ್ಟದ ಅಸಮಾಧಾನವಿತ್ತು. ಆದರೆ ಅದಕ್ಕಾಗಿ ಅವರೆಂದೂ ತಾಳ್ಮೆ ಕಳೆದುಕೊಳ್ಳಲಿಲ್ಲ, ಅಹಿಂಸೆಯ ಮಾರ್ಗ ತುಳಿಯಲಿಲ್ಲ. ಅರಿವನ್ನು ಮೂಡಿಸಲು ಅತ್ಯಂತ ಸಮಾಧಾನದಿಂದಲೇ ಪ್ರಯತ್ನಿಸಿದರು. ಅದೇ ತತ್ವದ ಆಧಾರದ ಮೇಲೆಯೇ ಸಂವಿಧಾನವನ್ನು ರಚಿಸಿದರು. ಅವರು ಜೀವಿತದುದ್ದಕ್ಕೂ ಯಾರನ್ನೂ ದ್ವೇಷಿಸಲಿಲ್ಲ, ಯಾರ ಹಕ್ಕುಗಳನ್ನೂ, ಅಧಿಕಾರವನ್ನೂ ಕಸಿದುಕೊಳ್ಳಲು ಬಯಸಲಿಲ್ಲ. ಎಲ್ಲರನ್ನೂ ಸಮಾನವಾಗಿ ಕಾಣಬೇಕೆನ್ನುವುದಷ್ಟೇ ಅವರ ಬಯಕೆಯಾಗಿತ್ತು. ಮನುಷ್ಯನಾಗಿ ಹುಟ್ಟಿದಾತ ಹೇಗೆ ಬದುಕಬಹುದು ಎಂಬುದನ್ನು ತೋರಿಸುವ ಮೂಲಕ ಇಡೀ ಮಾನವ ಕುಲಕ್ಕೆ ಆದರ್ಶರಾದರು.

ತನ್ನಮಿತ್ತ



ಅಂಬೇಡ್ಕರ್ ಅವರನ್ನು ಉಲ್ಲೇಖಿಸುವಾಗ ನಾವು ಕೇವಲ 'ಸಂವಿಧಾನ ಶಿಲ್ಪಿ' ಎಂದರೆ ಸಾಕಾಗುವುದಿಲ್ಲ, 'ಮಹಾನ್ ಮಾನವತಾವಾದಿ' ಎಂದರೂ ಪೂರ್ಣವಾಗುವುದಿಲ್ಲ. ಒಬ್ಬ ವ್ಯಕ್ತಿ ಏನೆಲ್ಲ ಆಗಬಹುದು, ಸಮಾಜಕ್ಕೆ ಏನೆಲ್ಲ ಒಳಿತು ಮಾಡಬಹುದು ಎಂಬುದಕ್ಕೆ ಸಾಕ್ಷಿಯಾಗಿ ಜೀವಿಸಿದ ಅಂಬೇಡ್ಕರ್, ಕಾನೂನುತಜ್ಞರಾಗಿ, ಸಮಾಜ ಸುಧಾರಕರಾಗಿ, ಅರ್ಥಶಾಸ್ತ್ರಜ್ಞರಾಗಿ, ಪತ್ರಕರ್ತರಾಗಿ, ತತ್ವಜ್ಞಾನಿಯಾಗಿ ತಮ್ಮ ಇರುವಿಕೆಯನ್ನು ತೋರ್ಪಡಿಸಿದವರು. ಹಾಗಾಗಿಯೇ ಅವರ ಹೆಸರೇ ನಮಗೆಲ್ಲ ಸ್ಫೂರ್ತಿ, ಸಾಧನೆಗೆ ಪ್ರೇರಣೆ. ಅವರ ಬದುಕು, ತತ್ವಾದರ್ಶಗಳು ನಮ್ಮೆಲ್ಲರ ಪಾಲಿಗೆ ಸಾರ್ವಕಾಲಿಕ ಮಾರ್ಗದರ್ಶಕ. ಸಮಾನತೆಯಿಂದಲೇ ಪ್ರಗತಿ ಎನ್ನುವುದು ಅವರ ಪರಮೋಚ್ಚ ನಂಬಿಕೆಯಾಗಿತ್ತು. 1920ರ ದಶಕದಲ್ಲೇ ಎರಡೆರಡು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆದ ಮಹಾನ್ ಚೇತನ ಅವರು. ಸಮಾಜದಲ್ಲಿ ಅಸಮಾನತೆ-ಅಸ್ಪೃಶ್ಯತೆ ತಾಂಡವವಾಡುತ್ತಿದ್ದ ಅಂದಿನ ದಿನಗಳಲ್ಲಿ ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯ ಮತ್ತು ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್‌ನಿಂದ ಡಾಕ್ಟರೇಟ್ ಪದವಿ ಪಡೆದರು ಎಂದರೆ ಅವರ ಜೀವನೋತ್ಸಾಹ ಹೇಗಿತ್ತು ಎಂಬುದನ್ನು ನಾವು ಊಹಿಸಬಹುದು. ಡಾಕ್ಟರೇಟ್ ಪದವಿ ಪಡೆದು ಹಿಂದಿರುಗಿದ ಅಂಬೇಡ್ಕರ್ ಮೊದಲಿನ ಷರತ್ತಿನಂತೆ ಬರೋಡಾದ ಮಹಾರಾಜರ ಆಸ್ಥಾನದಲ್ಲಿ ಸೈನ್ಯದ ಕಾರ್ಯದರ್ಶಿಗಳಾಗಿ ಕೆಲಸಕ್ಕೆ ಸೇರಿದರು. ಆದರೆ, ಆಸ್ಥಾನಿಕ ಹಿರಿಯ ಮಂತ್ರಿಗಳು ಮಹಾರಾಜರಿಗೆ ತಿಳಿಯದಂತೆ ಇವರೊಂದಿಗೆ ಅಸ್ಪೃಶ್ಯತೆ ಆಚರಣೆ ನಡೆಸಿ ಕಿರುಕುಳ ನೀಡುತ್ತಿದ್ದರು. ಸಾಮಾನ್ಯ ಸಿಪಾಯಿ ಕೂಡ ಇವರ ಫೈಲುಗಳನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಅಂಬೇಡ್ಕರ್‌ರಿಗೆ ಆಸ್ಥಾನದಲ್ಲಿ ಉಳಿಯಲು ಜಾಗ ನೀಡಲಿಲ್ಲ ಮತ್ತು ಅವರು ಉಳಿದಿದ್ದ ಪಾರ್ಸಿ ಹೋಟೆಲ್‌ನಿಂದ ಹೊರದಬ್ಬಿದರು. ಹೀಗಾಗಿ ಅಲ್ಲಿ ಕೆಲಸ ಮಾಡದೆ ಅಂಬೇಡ್ಕರ್ ಮುಂಬೈಗೆ ಬಂದರು, ಬದುಕಿನ ಗುರಿಸಾಧನೆಗಾಗಿ ಕೆಲಸ ಮಾಡುತ್ತಲೇ ಸಾಮಾಜಿಕ ಸಮಾನತೆಗಾಗಿ ಮತ್ತು ಅಸ್ಪೃಶ್ಯತೆಯ ವಿರುದ್ಧವಾಗಿ ಹೋರಾಟ ನಡೆಸಿದರು. ಆದರೆ ತಾವು ವಿಶ್ವಾಸವಿಟ್ಟಿದ್ದ ಜನರು ಕೂಡ ಸ್ವಾರ್ಥಕ್ಕೆ ಬಲಿಯಾದಾಗ ಅಂಬೇಡ್ಕರರ ದುಃಖ ಇಮ್ಮಡಿಯಾಯಿತು. ಸಂವಿಧಾನದ ಮೂಲಕವೂ ಸಮಾನತೆಯನ್ನು ಸಾಧಿಸಲು ಯತ್ನಿಸಿದರು, ಆದರೆ ಜನರ ಮನಸ್ಥಿತಿಯಲ್ಲಿ ಅಂಥ ಬದಲಾವಣೆ ಕಾಣದಿದ್ದಾಗ ಒಂದು ರೀತಿಯಲ್ಲಿ ಅವರು ನಿರಾಶರಾಗಿದ್ದರು. ಅನಾರೋಗ್ಯದ ಕಾರಣದಿಂದಾಗಿ ತಮ್ಮ ಹೋರಾಟವನ್ನು ಮುಂದುವರಿಸಲಾಗುತ್ತಿಲ್ಲ ಎಂಬ ನೋವನ್ನೂ ತೋಡಿಕೊಂಡರು.

ಕೊನೆಗೆ, ತಮ್ಮದೇ ಸಮುದಾಯದ ಸ್ವಾರ್ಥಿಗಳ ಬಗ್ಗೆಯೂ ಬಹಿರಂಗವಾಗಿಯೇ ಅಸಮಾಧಾನವನ್ನು ಹೊರಹಾಕಿ, ''ನನ್ನ ಇದುವರೆಗಿನ ಸಾಧನೆಯ ಫಲವನ್ನು, ಶಿಕ್ಷಣ ಪಡೆದ ನನ್ನ ಸಮುದಾಯದ ಕೆಲವೇ ಮಂದಿ ಅನುಭವಿಸಿ ಮಜಾ ಮಾಡುತ್ತಿದ್ದಾರೆ. ಈ ಚಳವಳಿಯನ್ನು ಮುನ್ನಡೆಸಬಲ್ಲರು ಎಂಬುದಾಗಿ ನಾನು ನಂಬಿದ್ದವರೇ ನಾಯಕತ್ವ ಮತ್ತು ಅಧಿಕಾರಕ್ಕಾಗಿ ತಮ್ಮತಮ್ಮಲ್ಲೇ ಕಚ್ಚಾಡುತ್ತಿದ್ದಾರೆ'' ಎಂದು ಆಕ್ರೋಶಗೊಂಡಿದ್ದರು. ಹೀಗೆ ತಮ್ಮ ನಂಬಿಕೆಗೆ ಅಪಚಾರವಾದಾಗ, ಅಂತಿಮವಾಗಿ ಬೌದ್ಧಧರ್ಮವನ್ನು ಸ್ವೀಕರಿಸಲು ನಿರ್ಧರಿಸಿದರು. ''ನಾನು ಅಸ್ಪೃಶ್ಯತೆ ಆಚರಿಸುವುದಿಲ್ಲ, ಎಲ್ಲ ಮನುಷ್ಯರನ್ನೂ ಸಮಾನವಾಗಿ ಕಾಣುತ್ತೇನೆ. ಕೊಲ್ಲುವುದಿಲ್ಲ, ಕದಿಯುವುದಿಲ್ಲ, ತಪ್ಪಾದ ಲೈಂಗಿಕ ವರ್ತನೆ ತೋರುವುದಿಲ್ಲ, ಮದ್ಯ ಸೇವಿಸುವುದಿಲ್ಲ ಮತ್ತು ಸುಳ್ಳು ಹೇಳುವುದಿಲ್ಲ ಎಂಬ ಪಂಚಶೀಲ ತತ್ವಗಳನ್ನು ಅನುಸರಿಸುತ್ತೇನೆ. ಜ್ಞಾನ-ಸಹಾನುಭೂತಿ-ಕರ್ತವ್ಯ ಎಂಬ 3 ಪ್ರಮುಖ ತತ್ವಗಳನ್ನು ಆಧರಿಸಿರುವ ಬೌದ್ಧಧರ್ಮವೇ ನಿಜವಾದ ಧರ್ಮ ಎಂದು ನಂಬಿದ್ದೇನೆ. ಅಂತೆಯೇ ಹಿಂದೂ ಧರ್ಮವನ್ನು ತೊರೆದು ಬೌದ್ಧ ಧರ್ಮವನ್ನು ಅಪ್ಪುವ ಮೂಲಕ ಹೊಸಹುಟ್ಟು ಪಡೆದುಕೊಂಡಿದ್ದೇನೆ'' ಎಂದು ಪ್ರಮಾಣಗೈದರು.

ಅರ್ಥಶಾಸ್ತ್ರಜ್ಞ, ಸಮಾಜ ಸುಧಾರಕ, ಕಾನೂನುತಜ್ಞ, ನ್ಯಾಯಶಾಸ್ತ್ರಜ್ಞ, ಪತ್ರಕರ್ತ, ಸಾಹಿತಿಯಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಸಂವಿಧಾನ ಶಿಲ್ಪಿಯಾಗಿ ಅಂಬೇಡ್ಕರ್‌ರು ರಾಷ್ಟ್ರಕ್ಕೆ ನೀಡಿದ ಕೊಡುಗೆ ಅವಿಸ್ಮರಣೀಯ, ಅಮೋಘ. ಸ್ವತಂತ್ರ ಭಾರತದ ಮೊದಲ ಕಾನೂನು ಸಚಿವರಾಗಿ ನಮ್ಮೆಲ್ಲರಿಗೆ ಮೇಲ್ಪಂಕ್ತಿ ಹಾಕಿಕೊಟ್ಟ ಅಂಬೇಡ್ಕರ್‌ರು ಕೊಟ್ಟ ಭಾರತದ ಸಂವಿಧಾನವು ಇಡೀ ವಿಶ್ವದಲ್ಲೇ ಶ್ರೇಷ್ಠ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂಥ ನಾಡಿನಲ್ಲಿ ಜೀವಿಸುತ್ತಿರುವುದೇ ನಮಗೆಲ್ಲ ಹೆಮ್ಮೆಯ ಸಂಗತಿ. ಸೂರ್ಯ-ಚಂದ್ರರಿರುವರೆಗೂ ಅವರ ಬದುಕು ಮತ್ತು ಸಾಧನೆ ಈ ಭೂಮಿಯ ಮೇಲಿರುವವರಿಗೆ ಪ್ರೇರಣೆಯಾಗಬೇಕು, ಆದರ್ಶವಾಗಬೇಕು. ಇಂದಿನ ಯುವಪೀಳಿಗೆ ಅಂಬೇಡ್ಕರ್‌ರ ಆದರ್ಶವನ್ನು ಪಾಲಿಸಬೇಕು. ಇದೇ ಅವರಿಗೆ ನಾವು ನಿಜವಾಗಿ ನೀಡಬಹುದಾದ ಕೊಡುಗೆ, ಇದೇ ನನ್ನ ಆಶಯ ಕೂಡ.

(ಲೇಖಕಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಬಾಲಿವುಡ್‌ಗೆ ಮರಳಿದ ಪ್ರಿಯಾಂಕಾ



ಬಾಲಿವುಡ್ ಸಿನಿಮಾಗಳಲ್ಲಿ ನಟಿಸಿ ಪ್ರಸಿದ್ಧಿ ಪಡೆದಿದ್ದ ನಟಿ ಪ್ರಿಯಾಂಕಾ ಚೋಪ್ರಾ, ಸದ್ಯ ಅಮೆರಿಕಾದಲ್ಲಿ ನೆಲೆಸಿದ್ದು ಹಲವು ವೆಬ್ ಸೀರೀಸ್ ಗಳನ್ನು ನಿರ್ಮಿಸಿದ್ದಾರೆ. ಪ್ರಿಯಾಂಕಾ ಮತ್ತೆ ಯಾವಾಗ ಮರಳಿ ಬಾಲಿವುಡ್ ಗೆ ಬರಲಿದ್ದಾರೆ ಎಂಬ ಕುತೂಹಲವಿತ್ತು. ಹೀಗಿರುವಾಗಲೇ ಪ್ರಿಯಾಂಕಾ ಕಡೆಯಿಂದ ಸಿಹಿ ಸುದ್ದಿ ಸಿಕ್ಕಿದೆ. ಹೌದು ಪ್ರಿಯಾಂಕಾ ಚೋಪ್ರಾ, ಬಾಲಿವುಡ್ ಗೆ ಮರಳುತ್ತಿದ್ದಾರೆ. ಹೃತಿಕ್ ರೋಷನ್ ಅಭಿನಯಿಸಲಿರುವ ಕ್ರಿಶ್ 4 ಚಿತ್ರ ಇನ್ನೇನು ಆರಂಭವಾಗಲಿದೆ. ಈ ಚಿತ್ರದಲ್ಲಿ ಹೃತಿಕ್ ಗೆ ಜೋಡಿಯಾಗಿ ಪ್ರಿಯಾಂಕಾ ಅಭಿನಯಿಸಲಿದ್ದಾರೆ. ಈಗಾಗಲೇ ಕಥೆ ಕೇಳಿ ಮೆಚ್ಚಿರುವ ಪ್ರಿಯಾಂಕಾ ಚಿತ್ರದಲ್ಲಿ ನಟಿಸಲು ಸಂತಸದಿಂದಲೇ ಸಮ್ಮತಿಸಿದ್ದಾರೆ. ಕ್ರಿಶ್ ಹಾಗೂ ಕ್ರಿಶ್ 3 ಚಿತ್ರದಲ್ಲಿ ಪ್ರಿಯಾಂಕಾ ನಾಯಕಿಯಾಗಿ ಬಣ್ಣಹಚ್ಚಿದ್ದರು ಈ ಚಿತ್ರಗಳು ಭರ್ಜರಿ ಯಶಸ್ಸು ಕಂಡಿದ್ದವು. ಅಂತೆಯೇ ಈಗ ಕ್ರಿಶ್ 4 ಚಿತ್ರದಲ್ಲಿಯೂ ಪ್ರಿಯಾಂಕಾ ಮಿಂಚಲಿದ್ದಾರೆ. ವಿಶೇಷ ಎಂದರೆ ಈ ಚಿತ್ರವನ್ನು ಹೃತಿಕ್ ರೋಷನ್ ಅವರೇ ನಿರ್ದೇಶನ ಮಾಡಲಿದ್ದಾರೆ. ಥ್ರಿಲ್ಲರ್, ಫ್ಯಾಂಟಸಿ ಸ್ಟೋರಿಯ ಕ್ರಿಶ್ 4 ಅದ್ದೂರಿ ವೆಚ್ಚದ ಚಿತ್ರವಾಗಿದ್ದು, ಯಶ್ ರಾಜ್ ಫಿಲಂಸ್ ನಿರ್ಮಾಣ ಮಾಡುತ್ತಿದೆ. ಹೃತಿಕ್ ಕೂಡ ನಿರ್ಮಾಣದಲ್ಲಿ ಕೈ ಜೋಡಿಸಲಿದ್ದಾರೆ. ಇತ್ತ ಆರ್ ಆರ್ ಆರ್ ಯಶಸ್ಸಿನ ಖುಷಿಯಲ್ಲಿರುವ ನಿರ್ದೇಶಕ ರಾಜಮೌಳಿ, ಮಹೇಶ್ ಬಾಬು ಅಭಿನಯದ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಈ ಚಿತ್ರದಲ್ಲಿಯೂ ಪ್ರಿಯಾಂಕಾ ಚೋಪ್ರಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ಟಾಕೀಸ್

ಆರಾಮ

ಅಸಾಧಾರಣ ಪ್ರತಿಭೆಯ ಅನಾವರಣ

ಕಾರ್ತಿಕ್ ಕೃಷ್ಣ

‘ನೋಡಿದವರು ಏನಂತಾರೆ’ ಸಿನಿಮಾ ಎಲ್ಲಾ ವರ್ಗವನ್ನು ಮನರಂಜಿಸುವ ಸಿನಿಮಾವಲ್ಲ, ಇದನ್ನು ಊಟ ಮಾಡುತ್ತಾ, ಟ್ರಾವೆಲ್ ಮಾಡುತ್ತಾ ನೋಡುತ್ತೇನೆ ಎಂದರೆ ಖಂಡಿತಾ ನೋಡಬೇಡಿ. ಮನಸ್ಸು ಏನನ್ನೋ ಅರಸುತ್ತಿರುವಾಗ ಇದನ್ನು ನೋಡಿ, ಅದು ನೀಡುವ ಕಿಕ್ ಆಮೇಲೆ ಗೊತ್ತಾಗುತ್ತದೆ! ನವೀನ್ ಶಂಕರ್ ಎಂಬ ಅಸಾಧಾರಣ ಪ್ರತಿಭೆಯ ಅನಾವರಣ ಈ ಸಿನಿಮಾದಲ್ಲಾಗಿದೆ. ಒಂಟಿ ಬದುಕು, ಅರಸುವಿಕೆ, ಪುಸ್ತಕ, ಬರಹ, ಪಯಣ - ಇವುಗಳ ಬ್ರಾಂಡ್ ಅಂಬಾಸಿಡರ್ ಆಗಿ ನವೀನ್ ನೇಮಕಗೊಂಡಿದ್ದಾರೆ ಎಂದೆನಿಸುತ್ತದೆ. ಯಾಕೆಂದರೆ, ಇಂತಹ ಪಾತ್ರಗಳನ್ನು ಕನ್ನಡಲ್ಲಿ ಊಹಿಸಿಕೊಂಡರೆ ಮೊದಲು ನೆನಪಾಗುವುದು ಇವರೇ. ಮಿಕ್ಕವರು ಮಾಸ್ ಸಿನಿಮಾದ ಹಿಂದೆ ಬಿದ್ದರೆ, ನವೀನ್ ಕಥೆಯ ಹಿಂದೆ ಬಿದ್ದಂತಿದೆ.

ಸಿನಿಮಾ ನೋಡಿದ್ದರೆ, ನವೀನ್ ಒಂದು ನದಿಯ ದಂಡೆಯ ಮೇಲೆ ಬಿದ್ದುಕೊಂಡು ಡಬ್ಬಿಯಲ್ಲಿ ಮಲಗಿರುವ ದೃಶ್ಯ ನಿಮಗೆ ನೆನಪಿರಬಹುದು. ಸರಿಯಾಗಿ ಗಮನಿಸಿದರೆ, ಅವರ ಹೊಟ್ಟೆಯು ಮೂಳೆಗೆ ಅಂಟಿಕೊಂಡಿದ್ದು ಕಾಣಿಸುತ್ತದೆ. ಒಂದು ಪಾತ್ರಕ್ಕೆ ಈ ಮಟ್ಟದ ಬದ್ಧತೆ! ಪಾತ್ರಕ್ಕಾಗಿ ಹಾಲಿವುಡ್‌ನ ಕ್ರಿಶ್ಚಿಯನ್ ಬೇಲ್ 40 ಕೆಜಿ ಗೆ ಇಳಿದದ್ದು, ಬ್ಯಾಟ್ಮ್ಯಾನ್ ಚಿತ್ರದ ಜೋಕರ್ ಪಾತ್ರಕ್ಕಾಗಿ ಹೀತ್ ಲೆಜರ್ ತಿಂಗಳು ಗಟ್ಟಲೆ ಒಂದು ರೂಮಿನಲ್ಲಿ ಬಂಧಿಯಾಗಿದ್ದನ್ನು ಕೇಳಿದ್ದೆವು. ಈಗ ನಮ್ಮದೇ ಹುಡುಗ ಅದೇ ಮಟ್ಟದ ಬದ್ಧತೆಯನ್ನು ತೋರಿದ್ದಾರೆ, ಪಾತ್ರಕ್ಕಾಗಿ!

ನವೀನ್ ಮತ್ತಷ್ಟು ಬೆಳೆಯಬೇಕು. ಹಾಗೆಯೇ ಒಂದೇ ತರಹದ ಪಾತ್ರಗಳಿಗೆ ಒಗ್ಗಿಕೊಳ್ಳದೆ, ಅವರ ಪ್ರತಿಭೆಗೆ ತಕ್ಕಂತೆ ಮತ್ತಷ್ಟು ಪಾತ್ರಗಳು, ಕಥೆಗಳು ಅವರನ್ನು ಅರಸಿಕೊಂಡು ಬರಲಿ ಎಂದು ಆಶಿಸುತ್ತೇನೆ.

ತಪ್ಪು ಇಲ್ಲದಿದ್ದರೂ ಕಷ್ಟ ಬರಬಹುದು!

ಸುರಪಸಭೆಯಲಿ ಗಾಧಿಸುತ ವಸಿಷ್ಠ ಸ್ಪರ್ಧೆ
ಧರೆಯೊಳದರಿಂ ಹರಿಶ್ಚಂದ್ರಂಗೆ ತಪನೆ
ಬರುವುದಿಂತೆತ್ತಣಿನೊ ಬೇಡದ ಪ್ರಾರಬ್ಧ
ಕರುಮಗತಿ ಕೃತ್ರಿಮವೊ - ಮಂಕುತಿಮ್ಮ॥

ಜೀವನದಲ್ಲಿ ಹಲವಾರು ಬಾರಿ ಘಟನೆಗಳು ಆಕಸ್ಮಿಕವಾಗಿ, ಅನೀರಿಕ್ಷಿತವಾಗಿ ಹಾಗೂ ಅನಪೇಕ್ಷಿತವಾಗಿ ನಡೆಯುತ್ತವೆ. ಹರಿಶ್ಚಂದ್ರನು ಅವನ ಪಾಡಿಗೆ ಅವನು ಅವನ ಹೆಂಡತಿ ಚಂದ್ರಮತಿ ಹಾಗೂ ಮಗನೊಂದಿಗೆ ಇದ್ದರೆ, ದೇವೇಂದ್ರನ ಸಭೆಯಲ್ಲಿ ವಸಿಷ್ಠರಿಗೂ ಹಾಗೂ ವಿಶ್ವಾಮಿತ್ರರಿಗೂ ನಡೆದ ಸಂವಾದದಲ್ಲಿ ಹರಿಶ್ಚಂದ್ರನ ಹೆಸರು ಪ್ರಸ್ತಾವನೆಗೊಂಡು, ಏನೂ ತಪ್ಪು ಮಾಡದ ಹರಿಶ್ಚಂದ್ರನಿಗೆ ಕಷ್ಟ ಕಾರ್ಪಣ್ಯ ಎದುರಾಗಲಿಲ್ಲವೇ? ಅದೇ ರೀತಿ, ಕೆಲವು ಸಮಯದಲ್ಲಿ ನಮಗರಿವಿರದೆ ಇದ್ದರೂ, ತಪ್ಪು ಮಾಡದಿ ದ್ದರೂ ಸಹ ನಮ್ಮ ಪಾಲಿನ ವಿಧಿ, ಸಮಯ, ಸಂಧರ್ಭಗಳು ಕ್ರೂರವಾಗಿ ನಮ್ಮನ್ನು ಕಾಡುತ್ತವೆ. ಇದಕ್ಕೆ ಯಾವ ನರನೂ ಹೊರತಾಗಿರುವುದಿಲ್ಲ.

ಮನುಷ್ಯನ ಜೀವನ ಎಂಬುದು ಆಕಸ್ಮಿಕಗಳ, ಅನಿರೀಕ್ಷಿತತೆಯ ಹಾಗೂ ಅನಪೇಕ್ಷಿತ ಘಟನೆಗಳ ಆಗರ. ತನ್ನ ಜೀವನದಲ್ಲಿ ಮನುಷ್ಯ ಅಂದುಕೊಳ್ಳುವುದೇ ಒಂದಾದರೆ ಘಟಿಸುವುದೇ ಮತ್ತೊಂದಾಗಿರುತ್ತದೆ. ಈತನ ದೃಷ್ಟಿಯಲ್ಲಿಯ ನಿರೀಕ್ಷೆಗಳೇ ಒಂದಾದರೆ ಆತನ ಅರಿವಿಗೆ ಬಾರದೆ ಜರುಗುವುದು ಮತ್ತೊಂದಾಗಿರುತ್ತದೆ. ಯಾವುದೋ ಒಂದು ಶುಭ ಕಾರ್ಯ ಎಂದು ತೆರಳಿದವರು ಮಸಣಕ್ಕೆ ತೆರಳಿದ ಹಾಗೆ, ತಾನೇ ಬೆಳೆಸಿರುವ ಮರಗಳು ಬಿರುಗಾಳಿಗೆ ಸಿಕ್ಕಿ ಈತನ ತಲೆಯ ಮೇಲೆಯೇ ಬೀಳುವ ಹಾಗೆ, ತಾನೇ ಬೆಳೆಸಿದ ತಮ್ಮವರೇ ತನಗೆ ನೋವನಿಕ್ಕುವ ಹಾಗೆ , ಈ ಜೀವನದಲ್ಲಿ ಹಲವಾರು ಅನೀರೀಕ್ಷಿತ ಘಟನೆಗಳು ಜರುಗುತ್ತಲೇ ಇರುತ್ತವೆ. ಇಂಥಹ ಅನಪೇಕ್ಷಿತ, ಅನಿರೀಕ್ಷಿತ ಘಟನೆಗಳು ನಮ್ಮ ನಮ್ಮ ಕರುಮದ, ವಿಧಿಯ ಲೀಲೆಯ, ಸಂಧರ್ಭಾನುಸಾರದ, ಪೂರ್ವಜನ್ಮದ ಬುತ್ತಿಯೂ ಆಗಿರಬಹುದು. ಈ ಪೂರ್ವ ಜನ್ಮದ ಕರುಮದ ಬುತ್ತಿಯನ್ನು ನಾವುಣ್ಣಲಲ್ಲದೆ ಬೇರೆಯವರಿಗೆ ಉಣಿಸಲಾದೀತೆ!

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಹರಿಶ್ಚಂದ್ರ ಮಹಾರಾಜನು ತನ್ನ ಪಾಡಿಗೆ ತಾನು ತನ್ನ ಪತ್ನಿ ಚಂದ್ರಮತಿ ಹಾಗೂ ಮಗ ಲೋಹಿತಾಶ್ವನೊಂದಿಗೆ ಸತ್ಯ, ಧರ್ಮ, ನ್ಯಾಯ, ನಿಷ್ಠೆಯಿಂದ ರಾಜ್ಯಭಾರವನ್ನು ಮಾಡುತ್ತಾ ಪ್ರಜಾ ಸೇವೆಯೇ ಈಶ ಸೇವೆ ಎಂದು ಜೀವಿಸುತ್ತಲಿರುವಾಗ, ಸುರಸಭೆಯಾದ ಇಂದ್ರನ ಒಡ್ಡೋಲಗದಲ್ಲಿ ಮಹರ್ಷಿ ವಸಿಷ್ಠರಿಗೂ ಹಾಗೂ ವಿಶ್ವಾಮಿತ್ರರಿಗೂ ಮಾತಿನ ಪಂದ್ಯ ಜರುಗುತ್ತದೆ. ಆ ಸಮಯದಲ್ಲಿ ಹರಿಶ್ಚಂದ್ರನು ಸತ್ಯವಂತ ಎಂದು ಸಾಕ್ಷೀಕರಿಸಲು ವಿವಿಧ ಕಷ್ಟ ಕಾರ್ಪಣ್ಯ ಕೊಡುವೆನೆಂದು ವಿಶ್ವಾಮಿತ್ರ ಶಪಥಗೈಯ್ಯುತ್ತಾನೆ. ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಇನ್ನಿಲ್ಲದಂತೆ ಕಾಡುತ್ತಾನೆ. ಇದರಲ್ಲಿ ಹರಿಶ್ಚಂದ್ರನು ಮಾಡಿದ ತಪ್ಪಾದರೂ ಏನಿತ್ತು ? ವಸಿಷ್ಠರು ಹರಿಶ್ಚಂದ್ರ ಅವನ ಪಾಡಿಗೆ ಅವನು ಸುಮ್ಮನೆ ಇದ್ದರೂ ಸಹ ಅವನ ಪಾಲಿನ ವಿಧಿಯು ವಿಶ್ವಾಮಿತ್ರನ ರೂಪದಲ್ಲಿ ಕಾಡಿತ್ತು. ಹರಿಶ್ಚಂದ್ರನ ಪಾಲಿನ ದೈವವು ಮೌನವಾಗಿಬಿಟ್ಟಿತು. ಹೀಗೆ ನಾವುಗಳು ನಮ್ಮ ಪಾಡಿಗೆ ನಾವು ಇದ್ದರೂ, ನಾವು ಬೇರೆ ಆಲೋಚನೆಗಳನ್ನುಮಾಡದೇ ಇದ್ದರೂ ಸಹ ಕೆಲವು ಸಮಯ ಸಂಧರ್ಭಗಳಲ್ಲಿ ಆ ದೈವದ ಎಣಿಕೆಯೋ, ಸಂಧರ್ಭದ ಕವಳವಾಗಿಯೋ, ವಿಧಿಯೆಣಿಕೆಯ ಫಲವಾಗಿಯೋ, ಪೂರ್ವ ಜನ್ಮದ ಕರ್ಮವೋ ನಮಗೆ ಕಷ್ಟಕಾರ್ಪಣ್ಯಗಳನ್ನು ತಂದು ನಮ್ಮ ಜೀವನದಲ್ಲಿ ಆಡಿಸುತ್ತದೆ. ಕೆಲವು ಕಷ್ಟಗಳು, ನಮ್ಮಗಳ ತಪ್ಪುಗಳು ಇಲ್ಲದಿದ್ದರೂ ನಮ್ಮ ಬಾಳಿಗೆ ಬಂದೊದಗುತ್ತವೆ.

ಎಲ್ಲರನ್ನೂ ಯಾವಾಗಲೂ ವಂಚಿಸಲು ಸಾಧ್ಯವಿಲ್ಲ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕಾಡಿನ ದಾರಿಯಲ್ಲಿ ಒಂದು ತೋಳ ಆಹಾರ ಹುಡುಕುತ್ತಾ ನಡೆದು ಹೋಗುತ್ತಿದ್ದಾಗ ಅದಕ್ಕೆ ದಾರಿಯಲ್ಲಿ ಆಶ್ಚರ್ಯವೆನಿಸುವಂತೆ ಕುರಿ ಚರ್ಮವೊಂದು ಹರಿದು ಬಿದ್ದಿರುವುದು ಕಾಣಿಸಿತು. ಅದನ್ನು ನೋಡಿ ಅದಕ್ಕೆ ಒಂದು ಉಪಾಯ ಹೊಳೆಯಿತು. ಅದೇ ಕಾಡಿನ ಒಂದು ತುದಿಯಲ್ಲಿ, ಕುರಿಗಳ ಗುಂಪು ದಿನಾ ಮೇಯಲು ಬರುವುದನ್ನು ಅದು ನೋಡಿತ್ತು, ಆದರೆ ಕುರಿಗಳನ್ನು ಹಿಡಿದು ತಿನ್ನಲು ಅದಕ್ಕೆ ಸಾಧ್ಯವಾಗಿರಲಿಲ್ಲ. ಏಕೆಂದರೆ ಕುರಿಗಳನ್ನು ಕಾಯಲು ಬರುತ್ತಿದ್ದ ಅವುಗಳ ಯಜಮಾನ ಬಹಳ ಬಲಶಾಲಿಯಾಗಿದ್ದ. ಅವನ ಕಣ್ಣು ತಪ್ಪಿಸಿ ಕುರಿಯನ್ನು ಹಿಡಿಯುವುದು ಅದಕ್ಕೆ ಬಹಳ ಕಷ್ಟವಾಗಿತ್ತು.

ಈಗ ಈ ಕುರಿ ಚರ್ಮವನ್ನು ಹೊದ್ದುಕೊಂಡು, ಅವುಗಳ ಜೊತೆ ಸೇರಿಕೊಂಡರೆ, ತನ್ನ ಕೆಲಸ ಸುಗಮವಾಗಬಹುದೆಂದುಕೊಂಡು, ಕುರಿ ಚರ್ಮವನ್ನು ಹೊದ್ದುಕೊಂಡು, ಸಂಜೆ ಕುರಿಗಳ ಗುಂಪಿನ ಜೊತೆ ಕೂಡಿಕೊಂಡು ಊರನ್ನು ಸೇರಿಕೊಂಡಿತ್ತು. ಕುರಿಯ ಚರ್ಮವನ್ನು ತೋಳ ಹೊದ್ದುಕೊಂಡಿದ್ದರಿಂದ, ಕುರಿಗಳ ಯಜಮಾನನಿಗೆ ಇದು ತೋಳವೆಂದು ಗೊತ್ತಾಗಲಿಲ್ಲ. ತೋಳ ಬಹಳ ಸಂತೋಷದಿಂದ, ರಾತ್ರಿ ಇಡೀ ಕುರಿಗಳನ್ನು ತಿನ್ನಬಹುದೆಂಬ ಆಸೆಯಿಂದ ಕನಸು ಕಾಣುತ್ತಾ, ಕುರಿಗಳ ಗುಂಪಿನ ಜೊತೆಯಲ್ಲಿ ಹೆಜ್ಜೆ ಹಾಕುತ್ತ, ಕುರಿಗಳ ಕೊಟ್ಟಿಗೆಯನ್ನು ಸೇರಿಕೊಂಡಿತು.

ಯಜಮಾನನಿಗೆ ಸುಳಿವು ಸಿಗದಂತೆ ಒಂದೆರಡು ದಿನ ಪ್ರತಿ ರಾತ್ರಿ ಒಂದೊಂದೇ ಕುರಿಯನ್ನೇ ಹೊರಗೆ ಎಳೆದುಕೊಂಡು ಹೋಗಿ ತಿನ್ನತೊಡಗಿತು. ಇದರ ಆಟ ಹೆಚ್ಚು ದಿನ ನಡೆಯಲಿಲ್ಲ. ಒಂದು ದಿನ ರಾತ್ರಿ ಯಜಮಾನನ ಮನೆಗೆ ಸ್ವಲ್ಪ ಜನ ನೆಂಟರು ಬಂದರು. ಅವರನ್ನು ಸತ್ಕರಿಸಲು ಊಟಕ್ಕೆ ಕುರಿ ಮಾಂಸದ ಅಡಿಗೆ ಮಾಡಲು ನಿರ್ಧರಿಸಿದ. ಕುರಿಗಳ ಕೊಟ್ಟಿಗೆಗೆ ಬಂದು ಯಾವ ಕುರಿಯನ್ನು ಕಡಿಯಲಿ ಎಂದು ಹುಡುಕತೊಡಗಿದ.

ಕತ್ತಲೆಯಲ್ಲಿ ಕೊಟ್ಟಿಗೆಗೆ ಬಂದ ಯಜಮಾನನಿಗೆ, ದಷ್ಟ ಪುಷ್ಟವಾಗಿದ್ದ, ತೋಳ, ಚೆನ್ನಾಗಿ ಕೊಬ್ಬಿದ ಕುರಿಯಂತೆ ಕಾಣಿಸಿತು. ರುಚಿಕರ ಭೋಜನಕ್ಕೆ ಇದು ಯೋಗ್ಯವಾಗಿದೆ ಎಂದುಕೊಂಡು, ಕತ್ತಿಯಿಂದ ಒಂದೇ ಏಟಿಗೆ ಹೊಡೆದು ಅದರ ದೇಹದಿಂದ ತಲೆಯನ್ನು ತುಂಡು ಮಾಡಿದ. ಮೋಸದಿಂದ ಕುರಿಗಳನ್ನು ತಿನ್ನಲೆಂದು ಬಂದ ತೋಳ ತಾನೇ ಬಲಿಯಾಯಿತು.

ನಮಗೆ ಸಹಾಯ ಮಾಡುವ ನೆಪದಲ್ಲಿ ಅನೇಕರು ನಮ್ಮ ಜೀವನದಲ್ಲಿ ಈ ತೋಳದ ರೂಪದಲ್ಲೇ ಸೇರಿಕೊಳ್ಳುತ್ತಾರೆ. ಸದಾ ನಮಗೆ ಸಹಾನುಭೂತಿ ತೋರಿಸುತ್ತಾ, ನಮ್ಮ ಒಳಿತಿಗಾಗಿ ಅವರು ಶ್ರಮಿಸುತ್ತಿದ್ದಾರೆ ಎನ್ನುವ ರೀತಿ ನಟಿಸುತ್ತಿರುತ್ತಾರೆ. ಇಂತಹವರ ಲಕ್ಷಣಗಳು ಸರಾಸರಿ ಒಂದೇ, ನಮಗೆ ಯಾವ ರೀತಿಯ ಹಣ ಸಹಾಯವನ್ನೂ ಮಾಡುವುದಿಲ್ಲ, ಬರಿ ಬಾಯುಪಚಾರದ ಮಾತುಗಳು, ನಿಜವಾದ ಕಷ್ಟ ಎದುರಾದಾಗ ಇವರು ಅಚಾನಕ್ಕಾಗಿ ಮಾಯವಾಗಿರುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಸುಳ್ಳಿನ ಮೇಲೆ ಸುಳ್ಳನ್ನು ಪೋಣಿಸುತ್ತಿರುತ್ತಾರೆ. ನಮ್ಮ ಮನಸ್ಸು ಕೂಡ ಇಂತಹವರ ಬಗ್ಗೆ ನಮಗೆ ಎಚ್ಚರಿಕೆ ಕೊಡುತ್ತಲೇ ಇರುತ್ತದೆ. ಅದನ್ನು ನಿರ್ಲಕ್ಷಿಸಿದರೆ ಇವರಿಂದ ಒಂದಲ್ಲ ಒಂದು ದಿನ ನಮಗೆ ಆಪತ್ತು ಕಟ್ಟಿಟ್ಟ ಬುತ್ತಿ. ಬದುಕಿನಲ್ಲಿ ‘‘ದಿಢೀರ್ ಸ್ವಂತ’’ ಅಂತ ಯಾವುದೂ ಇರುವುದಿಲ್ಲ. ಯಾರಾದರೂ ಅತ್ಯಂತ ಕಡಿಮೆ ಸಮಯದಲ್ಲಿ ನಮಗೆ ಬಹಳ ಹತ್ತಿರವಾಗಿದ್ದಾರೆ ಎಂದರೆ ನಾವು ಸ್ವಲ್ಪ ಜಾಗರೂಕರಾಗಿರಬೇಕು. ಅತಿಯಾದ ಒಳ್ಳೆತನ, ಅತಿ ವಿನಯ ಇಂತಹ ನಡವಳಿಕೆಗಳು ನಮ್ಮ ಮೈ ಮರೆಸದೆ ಅಂತಹವರ ಬಗ್ಗೆ ನಾವು ಎಚ್ಚರದಿಂದ ಇರಬೇಕು. ಅನಗತ್ಯವಾಗಿ ನಮಗೆ ಯಾರಾದರೂ ಸಹಾಯ ಮಾಡುತ್ತಿದ್ದಾರೆ ಎಂದರೆ ಕಣ್ಮುಚ್ಚಿ ಅದನ್ನು ಸ್ವೀಕರಿಸುವ ಬದಲು, ದೂರ ಸರಿದು ಬಿಡುವುದು ವಾಸಿ. ಏಕೆಂದರೆ ಅವರ ಸಹಾಯದ ಹತ್ತರಷ್ಟು ಬೆಲೆಯನ್ನು ನಾವು ನಂತರ ಅದಕ್ಕೆ ತೆರಬೇಕಾಗುತ್ತದೆ. ಅದರ ಹಿಂದಿನ ಉದ್ದೇಶ ಬೇರೆಯೇ ಇರುತ್ತದೆ. ನಾವು ಸ್ಥಿತಿತಪ್ರಜ್ಞರಾಗಿದ್ದಾಗ ಇಂತಹವರನ್ನು ಅಲ್ಲಲ್ಲೇ ನಮ್ಮ ಜೀವನದಿಂದ ದೂರವಿರಿಸಿ ಅನಗತ್ಯವಾಗಿ ಮೋಸ ಹೋಗುವುದನ್ನು ತಪ್ಪಿಸಿಕೊಳ್ಳಬಹುದು.

ವೀರಚಂದ್ರಹಾಸನಿಗೆ ಸಾಥ್ ನೀಡಿದ ಕಿಚ್ಚ

ಕೆ.ಜಿ.ಎಫ್, ಸಲಾರ್, ಭೈರತಿ ರಣಗಲ್, ಉಗ್ರಂ ನಂಥಹ ಸೂಪರ್ ಹಿಟ್ ಚಿತ್ರಗಳಿಗೆ ಸಂಗೀತ ಸಂಯೋಜಿ ಸೈ ಎನಿಕೊಂಡಿರುವ ರವಿ ಬಸ್ರೂರು ನಿರ್ದೇಶಕರಾಗಿಯೂ ಗುರುತಿಸಿಕೊಂಡಿದ್ದಾರೆ . ಈಗ ವೀರ ಚಂದ್ರಹಾಸ ಚಿತ್ರದ ಮೂಲಕ ದಕ್ಷಿಣ ಕನ್ನಡ ಭಾಗದ ಸಂಸ್ಕೃತಿಯ ಪ್ರತೀಕವಾದ ಯಕ್ಷಗಾನ ಕಲೆಯ ಹಿರಿಮೆಯನ್ನು ಜಗತ್ತಿಗೆ ಹೇಳಲು ಹೊರಟಿದ್ದಾರೆ. ಈ ಚಿತ್ರದ ಶೀರ್ಷಿಕೆ ಗೀತೆ ಬಿಡುಗಡೆಯಾಗಿದೆ. ಕಿಚ್ಚ ಸುದೀಪ್ ಟೈಟಲ್ ಸಾಂಗ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಇದರ ಜತೆಗೆ ಚಿತ್ರತಂಡ ಮೇಕಿಂಗ್ ವಿಡಿಯೊವನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಯಕ್ಷಗಾನ ಕಲಾವಿದರಾಗಿ ಕಾಣಿಸಿಕೊಂಡಿದ್ದು ಗಮನಸೆಳೆಯುತ್ತಿದ್ದಾರೆ. ಎಸ್. ಎಸ್ ರಾಜಕುಮಾರ್ ನಿರ್ಮಾಣದ ಈ ಚಿತ್ರವನ್ನು ಹೊಂಬಾಳೆ ಫಿಲಂಸ್ ಅರ್ಪಿಸುತ್ತಿದೆ. ಈ ಚಿತ್ರದ ಮೂಲಕ ಚಿತ್ರರಂಗದ ಇತಿಹಾಸ ದಲ್ಲೇ ಮೊದಲ ಬಾರಿಗೆ, ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾದ ಯಕ್ಷ ಗಾನವನ್ನು ಬೆಳ್ಳಿ ಪರದೆಯಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದೆ. ನಾಗರಾಜ್ ನೈಕಂಬ್ಳಿ, ಶಿಥಿಲ್ ಶೆಟ್ಟಿ ಸೇರಿದಂತೆ ಹಲವರು ತಾರಾಗಣ ದಲ್ಲಿದ್ದಾರೆ. ಸುಮಾರು ಆರು ನೂರು ಯಕ್ಷಗಾನ ಕಲಾವಿದರು ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದೇ ವಾರ ವೀರ ಚಂದ್ರಹಾಸ ರಾಜ್ಯಾದ್ಯಂತ ತೆರೆಗೆ ಬರಲಿದೆ.

ಟಕೀಲಾಗೆ ಶರಣ್ ದನಿ

ಟಕೀಲಾ ಶೀರ್ಷಿಕೆಯಲ್ಲಿಯೇ ಗಮನಸೆಳೆದಿದೆ. ಈ ಚಿತ್ರದ ಶೀರ್ಷಿಕೆಗೆ ಶರಣ್ ದನಿಯಾಗಿದ್ದು, ಆ ಮೂಲಕ ಚಿತ್ರಕ್ಕೆ ಬಲತುಂಬಿದ್ದಾರೆ. ನಾಗೇಂದ್ರ ಪ್ರಸಾದ್ ಸಾಹಿತ್ಯದ ಗೀತೆಯನ್ನು ಶರಣ್ ಮಧುರವಾಗಿ ಹಾಡಿ ದ್ದಾರೆ. ಕೆ.ಪ್ರವೀಣ್ ನಾಯಕ್. ಕಥೆ, ಚಿತ್ರಕಥೆ, ಸಂಭಾ ಷಣೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರದಲ್ಲಿ ವಿಭಿನ್ನವಾದ ಪ್ರೇಮಕಥೆಯಿದೆ. ಧರ್ಮ ಕೀರ್ತಿರಾಜ್ ನಾಯಕನಾಗಿ ನಟಿಸಿದ್ದು, ನಿಖಿತಾ ಸ್ವಾಮಿ ನಾಯಕಿ ಯಾಗಿ ಬಣ್ಣಹಚ್ಚಿದ್ದಾರೆ. ನಾಗೇಂದ್ರ ಅರಸ್, ಕೋಟೆ ಪ್ರಭಾಕರ್, ಸುಮನ್ ಶರ್ಮ, ಅರುಣ್ ಮುಂತಾ ದವರು ತಾರಾಗಣದಲ್ಲಿದ್ದಾರೆ. ಸಿದ್ಧಿವಿನಾಯಕ ಫಿಲಂಸ್ ಬ್ಯಾನರ್ ನಲ್ಲಿ ಮರಡಿಹಳ್ಳಿ ನಾಗಚಂದ್ರ, ಚಿತ್ರ ನಿರ್ಮಾ ಣಕ್ಕೆ ಬಂಡವಾಳ ಹೂಡಿದ್ದಾರೆ. ಪಿ.ಕೆ.ಹೆಚ್.ದಾಸ್ ಛಾಯಾಗ್ರಹಣ, ಟಾಪ್‌ಸ್ಟಾರ್ ರೇಣು ನಿರ್ದೇಶನ ಈ ಚಿತ್ರಕ್ಕಿದೆ.

ಪ್ರವಾಸ ಹೊರಟ 45 ತಂಡ

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ನಿರ್ದೇಶನದ 45 ಆರಂಭದಿಂದಲೂ ಕುತೂಹಲ ಮೂಡಿಸಿದೆ. ಚಿತ್ರ ಟೀಸರ್ ಅಂತು ಅದ್ದೂರಿಯಾಗಿ ಮೂಡಿಬಂದಿದೆ. ಹ್ಯಾಟ್ರಿಕ್ ಹೀರೊ ಶಿವರಾಜಕುಮಾರ್ ಹಾಗೂ ಉಪೇಂದ್ರ ಈ ಚಿತ್ರದಲ್ಲಿ ಮತ್ತೆ ಒಟ್ಟಿಗೆ ನಟಿಸಿರುವುದು ಸಿನಿಮಾದ ನಿರೀಕ್ಷೆ ಹೆಚ್ಚಲು ಪ್ರಮುಖ ಕಾರಣವಾಗಿದೆ. ಯುಗಾದಿ ಹಬ್ಬದಂದು ರಿಲೀಸ್ ಆದ ಟೀಸರ್ ಸಿನಿಪ್ರಿಯರನ್ನು ಸೆಳೆದಿದೆ. ಟೀಸರ್ ಗೆ ದೊರಕಿರುವ ಮೆಚ್ಚುಗೆಗೆ ಚಿತ್ರತಂಡ ಸಂತಸಗೊಂಡಿದೆ. ಹಾಗಾಗಿ ಕರುನಾಡ ಚಕ್ರವರ್ತಿ ಶಿವರಾಜಕುಮಾರ್, ರಿಯಲ್ ಸ್ಟಾರ್ ಉಪೇಂದ್ರ, ರಾಜ್ ಬಿ ಶೆಟ್ಟಿ, ನಿರ್ದೇಶಕ ಅರ್ಜುನ್ ಜನ್ಯ ಹಾಗೂ ನಿರ್ಮಾಪ ರಮೇಶ್ ರೆಡ್ಡಿ ಪಕ್ಕದ ರಾಜ್ಯಗಳಿಗೆ ಪ್ರವಾಸ ಕೈಗೊಂಡಿದ್ದಾರೆ. ಎಂ.ರಮೇಶ್ ರೆಡ್ಡಿ ತಮ್ಮ ಸೂರಜ್ ಪ್ರೊಡಕ್ಷನ್ ಬ್ಯಾನರ್ ನಲ್ಲಿ ಅದ್ದೂರಿಯಾಗಿ ನಿರ್ಮಿಸಿದ್ದಾರೆ. ಮುಂಬೈ, ಚೆನ್ನೈ, ಹೈದರಾಬಾದ್‌ಗೆ ಚಿತ್ರತಂಡ ಪ್ರವಾಸ ತೆರಳಿದೆ.

ವಸ್ತು ಸ್ಥಿತಿಗಳನ್ನು ಅವಿದ್ದಂತೆ ಸ್ವೀಕರಿಸುವುದು

ಕೃಷ್ಣ ಹೇಳುತ್ತಾನೆ: ಜ್ಞಾನ ಮತ್ತು ವಿಜ್ಞಾನ (ಜ್ಞಾನ -ವಿಜ್ಞಾನ -ತೃಪ್ತ -ಆತ್ಮ) ದಿಂದ ತೃಪ್ತನಾದ ಅಚಲವಾಗಿರುವ ಇಂದ್ರಿಯ ನಿಗ್ರಹ ಮಾಡಿರುವ ಮಣ್ಣಿನ ಮುದ್ದೆ, ಕಲ್ಲು ಮತ್ತು ಬಂಗಾರವನ್ನು ಒಂದೇ ಎಂದು ಪರಿಗಣಿಸುವ ಯೋಗಿಯು ಸಿದ್ಧಪುರುಷನಾಗಿರುತ್ತಾನೆ (6.8). ಜಾಗೃತಿ, ಕುತೂಹಲ, ಜ್ಞಾನ ಮತ್ತು ಅನುಭವ ಈ ಶಬ್ದಗಳನ್ನು ಅರ್ಥ ಮಾಡಿಕೊಂಡರೆ ಕೃಷ್ಣ ಹೇಳಿದ್ದನ್ನು ಗ್ರಹಿಸಲು ಸಾಧ್ಯವಾಗುತ್ತದೆ.

ಜ್ಞಾನ ಎಂದರೆ ಆತ್ಮದ ಬಗ್ಗೆ ಇರುವ ಜಾಗೃತಿ ಮತ್ತು ವ್ಯಕ್ತಿ ಇದನ್ನು ಪಡೆದಾಗ ತೃಪ್ತನಾಗಿರುತ್ತಾನೆ. ವಿಜ್ಞಾನವೆಂದರೆ ವಸ್ತು ಹಾಗೂ ಜನರ ಬಗ್ಗೆ ಇರುವ ಕುತೂಹಲ. ಈ ಎಲ್ಲಾ ಕುತೂಹಲಗಳು ಹಾಗೂ ಅವುಗಳಿಗಿರುವ ಉತ್ತರಗಳ ಸಂಗ್ರಹವೇ ಜ್ಞಾನ. ಇದು ಗತಕಾಲದಾಗಿರುತ್ತದೆ ಮತ್ತು ಪುಸ್ತಕಗಳಲ್ಲಿ ಲಭ್ಯವಿರುತ್ತದೆ. ನಮ್ಮ ಆಂತರಿಕ ಪ್ರಯಾಣದ ಪ್ರಾರಂಭದಲ್ಲಿ ಕುತೂಹಲವು ನಮಗೆ ಸಹಕಾರಿಯಾಗಿರುತ್ತದೆ. ಆದರೆ ಅದಕ್ಕೆ ಪರಿಮಿತಿಗಳಿವೆ. ಅನಿಶ್ಚಿತ ತತ್ವಗಳು ಹಾಗೂ ಕಣಗಳು ಮತ್ತು ತರಂಗಗಳ ಬಗೆಗಿನ ದ್ವಂದ್ವಗಳ ಪರಿಮಿತಿಯನ್ನು ವಿಜ್ಞಾನ ಒಪ್ಪ ಬೇಕಾಗುತ್ತದೆ.

ಮತ್ತೊಂದು ರೀತಿಯಲ್ಲಿ ನಮ್ಮ ಅಸ್ತಿತ್ವವು ಸದಾ ವಿಕಾಸಗೊಳ್ಳುತ್ತಿರುತ್ತದೆ. ಕುತೂಹಲವು ಉತ್ತರಗಳನ್ನು ಹುಡುಕುತ್ತದೆ. ಆದರೆ ಅಸ್ತಿತ್ವವು ಪರಿಸ್ಥಿತಿ ಮತ್ತು ಅನುಭವಗಳಿಗೆ ಸ್ಪಂದಿಸುತ್ತದೆ.

ಅವು ನಮ್ಮಲ್ಲಿ ಪ್ರತಿಯೊ ಬ್ಬರಿಗೂ ಶ್ರೇಷ್ಠವಾಗಿರುತ್ತವೆ ಹಾಗೂ ಅವು ಗಳನ್ನು ಹಂಚಿಕೊಳ್ಳುವ ಪ್ರಮೇಯವೇ ಇಲ್ಲ. ಜ್ಞಾನದಲ್ಲಿ ತೃಪ್ತಿ ಎಂದರೆ ಎಲ್ಲ ಪ್ರಶ್ನೆಗಳಿಗೂ ಉತ್ತರ ಸಿಕ್ಕಿದೆ ಎಂಬ ಅರ್ಥವಲ್ಲ. ಬದಲಾಗಿ ವ್ಯಕ್ತಿಯ ಕುತೂಹಲ ತಗ್ಗಿದೆ ಎಂದು ಇದರ ಅರ್ಥ. ಇದು ಸಾಕ್ಷಿಯಾಗಿದ್ದರ ಸ್ಥಿತಿ ಸಾಕ್ಷಿ ಅಥವಾ ದೃಷ್ಟ. ಮೂಲತಃ ಇದು ವಸ್ತುಗಳು, ಜನರು, ಪರಿಸ್ಥಿತಿಗಳನ್ನು ಅವು ಇದ್ದ ಹಾಗೆ ಸ್ವೀಕರಿಸುವುದು. ಇಲ್ಲಿ ನ್ಯಾಯ ನಿರ್ಣಯವಾಗಲಿ, ನಿರೀಕ್ಷೆಗಳಾಗಲಿ ಇರುವುದಿಲ್ಲ. ಇದು ಆಯ್ಕೆ ರಹಿತ ಜಾಗೃತಿ ಆಗಿರುತ್ತದೆ.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಕೃಷ್ಣ ಅಚಲಸ್ಥಿತಿ ಹಾಗೂ ಇಂದ್ರಿಯಗಳ ನಿಗ್ರಹದ ಬಗ್ಗೆ ಹೇಳಿದ್ದಾನೆ. ಯಾರಾದರೂ ನಮ್ಮನ್ನು ಹೊಗಳಿದರೆ ನಾವು ಅದಕ್ಕೆ ಪಾತ್ರರಾಗಿದ್ದೇವೆ ಎಂದು ತಿಳಿಯುತ್ತೇವೆ ಆದರೆ ಅವರು ತೆಗಳಿದರೆ ನಮಗೆ ಕೋಪ ಬರುತ್ತದೆ. ಹೊಗಳಿಕೆ ಒಂದು ಮಧುರ ವಿಷ ಹಾಗೂ ಮೋಸ ಎಂದು ತಿಳಿದು ನಾವು ಸುಲಭವಾಗಿ ಹೊಗಳಿಕೆ ಮತ್ತು ತೆಗಳಿಕೆಗಳ ದ್ವಂದ್ವ ಗಳಿಗೆ ಅತೀತವಾಗಿರುವ ನಮ್ಮ ಪ್ರಯಾಣವನ್ನು ಪ್ರಾರಂಭಿಸಬಹುದು. ಹೊಗಳಿಕೆ, ತೆಗಳಿಕೆ, ಬಂಗಾರ, ಮಣ್ಣಿನ ಮುದ್ದೆ ಹಾಗೂ ಕಲ್ಲು ಎಲ್ಲವನ್ನು ಒಂದೇ ಎಂದು ತಿಳಿದಾಗ ನಾವು ಸಮಭಾವ ಹೊಂದಿ ಸ್ಥಿರವಾಗಿರುತ್ತೇವೆ.

ಪದಬಂಧ

ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಒಂದು ಸ್ಥಾನದಿಂದ ಅಲ್ಲಾಡಿಸು (4)
3. ರಾಣಿ ವಾಸ (4)
5. ಕಾವ್ಯವನ್ನು ರಾಗಬದ್ಧವಾಗಿ ಹಾಡುವವರು (3)
6. ಬ್ರಹ್ಮನಿಗೆ ಮತ್ತೊಂದು ಹೆಸರು (3)
8. ಪೀಡಿಸುವಿಕೆ ಅಥವಾ ಒತ್ತಾಯ (3)
12. ನೀರು ಒಸರುವ ಜಾಗ (2)
14. ಅಸಡ್ಡೆ ಮಾಡು ಎನ್ನುವ ಅರ್ಥ (5)
16. ಬೇಡವಾದ ವಸ್ತು (2)
18. ತೊರೆದ ಅಥವಾ ಬಿಡಲ್ಪಟ್ಟ (3)
20. ಎಂದೂ ಮುಗಿಯದ ಎಂದರ್ಥದ ಒಂದು ಸಂವತ್ಸರ (3)
22. ರಕ್ಷಣೆಗಾಗಿರುವ ಉಕ್ಕಿನ ಅಂಗಿ (3)
24. ಮನಸ್ಸಿನ ಗೊಂದಲ (4)
25. ರಹಸ್ಯ ಅಥವಾ ಗುಟ್ಟು (4)

ಮೇಲಿಂದ ಕೆಳಕ್ಕೆ

1. ಬಾವಿಯೊಳಗಿನ ಮಂಡೂಕ (2)
2. ಬುದ್ಧನ ಮತ್ತೊಂದು ಹೆಸರು (3)
3. ಸಹಿ ಅಥವಾ ರುಜು (3)
4. ವಿರಾಮವಿದ್ದಾಗ ಕಾಣಿಸಿದ ಧೂಳು (2)
7. ಹಿಡಿದುದು ಅಥವಾ ಆಧಾರವಾದುದು (3)
9. ದಿಕ್ಕು ಅಥವಾ ಅವಸ್ಥೆ (2)
10. ವಂಚಕ ಅಥವಾ ಕಪಟ (3)
11. ಮತ್ತೊಬ್ಬ ಪುತ್ರಿ (3)
13. ಕಂದು ಬಣ್ಣದ ಹಸು ಮೇಲೇರಿ ಬಂದಿದೆ (3)
15. ದವಸ ಧಾನ್ಯಗಳ ಸಮೃದ್ಧಿ (3)
17. ಎರಡಕ್ಷರದ ಮಾಲೆ (2)
19. ನೂಲುವ ಒಂದು ಸಾಧನ (3)
20. ಪ್ರಮಾಣದ ಮಿತಿ (3)
21. ಒಡನಾಟ ಅಥವಾ ಜೊತೆ (2)
23. ಕಾಪಾಡು ಅಥವಾ ಸಂರಕ್ಷಿಸು (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಕದಲಿಸು 3. ಅಂತಃಪುರ 5. ಗಮಕಿ 6. ವಿಧಾತ 8. ತಗಾದೆ 12. ಸೆಲೆ 14. ಕಡೆಗಣಿಸು 16. ಕಸ 18. ರಹಿತ 20. ಅಕ್ಷಯ 22. ಕವಚ 24. ಗಲಿಬಿಲಿ 25.

ಮೇಲಿಂದ ಕೆಳಕ್ಕೆ
1. ಕಪ್ಪೆ 2. ಸುಗತ 3. ಅಂಕಿತ 4. ರಜ 7. ಧಾರಕ 9. ದೆಸೆ 10. ಕುಹಕ 11. ಮಗಳು 13. ಲೆಪಿಕ 15. ಸುಭಿಕ್ಷ 17. ಸರ 19. ತಕಲಿ 20. ಅಳತೆ 21. ಸಂಗ 23. ಪೊರೆ

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್	06	04	02	08
ಡೆಲ್ಲಿ	05	04	01	08
ಬೆಂಗಳೂರು	06	04	02	08
ಲಖನೌ	06	04	02	08
ಕೋಲ್ಕತ್ತಾ	06	03	03	06
ಪಂಜಾಬ್	05	03	02	06
ಮುಂಬೈ	06	02	04	04
ರಾಜಸ್ಥಾನ್	06	02	04	04
ಹೈದರಾಬಾದ್	06	02	04	04
ಚೆನ್ನೈ	06	01	05	02

ಇಂದಿನ ಪಂದ್ಯ

7.30 PM

ಲಖನೌ ಸೂಪರ್ ಜಯಂಟ್ಸ್ vs ಚೆನ್ನೈ ಸೂಪರ್ ಕಿಂಗ್ಸ್

ಏಕನಾ ಕ್ರೀಡಾಂಗಣ ಲಖನೌ

ಕೊಹ್ಲಿ 100ನೇ ಅರ್ಧ ಶತಕ

ಜೈಪುರ: ರಾಜಸ್ಥಾನ ರಾಯಲ್ಸ್ ತಂಡದ ವಿರುದ್ಧ ಅಜೇಯ 62 ರನ್ ಬಾರಿಸುವ ಮೂಲಕ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಟಿ-20 ಕ್ರಿಕೆಟ್‌ನಲ್ಲಿ 100ನೇ ಅರ್ಧ ಶತಕ ಸಿಡಿಸಿ ದ್ದಾರೆ. ಈ ಮೂಲಕ ತಮ್ಮ ದಾಖಲೆಗಳನ್ನು ಹೊಸ ಎತ್ತರಕ್ಕೆ ಒಯ್ದಿ ದ್ದಾರೆ. ಜೈಪುರದಲ್ಲಿ ತಮ್ಮ ಅಭಿಮಾನಿಗಳ ನಿರೀಕ್ಷೆಗೆ ತಕ್ಕಂತೆ ಆಡಿದ ಕೊಹ್ಲಿಯ ಟಿ20 ಕ್ರಿಕೆಟ್ ಇತಿಹಾಸದಲ್ಲಿ 108 ಅರ್ಧಶತಕ ಗಳನ್ನು ಹೊಂದಿರುವ ಡೇವಿಡ್ ವಾರ್ನರ್ ನಂತರ ಅತಿ ಹೆಚ್ಚು ಅರ್ಧ ಶತಕ ಬಾರಿಸಿದ 2ನೇ ಬ್ಯಾಟ್ಸ್‌ಮನ್ ಎನಿಸಿದರು.

ಸ್ಕೋರ್ ಬೋರ್ಡ್

ರಾಜಸ್ಥಾನ್ ರಾಯಲ್ಸ್ 173/4 (20 ಓವರ್)

ರಾಜಸ್ಥಾನ್ ರಾಯಲ್ಸ್		ರನ್	ಎಸೆತ
ಜೈಸ್ವಾಲ್	ಬೌಲರ್ ▸▸ ಎಲ್ಬಿಡಬ್ಲ್ಯು ▸▸ ಹ್ಯಾಝಲ್‌ವುಡ್	75	47
ಸಂಜು	ಬೌಲರ್ ▸▸ ಕೃನಾಲ್ ಪಾಂಡ್ಯ ▸▸ ಜಿತೇಶ್	15	19
ಪರಾಗ್	ಬೌಲರ್ ▸▸ ದಯಾಳ್, ಕ್ಯಾಚ್ ▸▸ ಕೊಹ್ಲಿ	30	22
ಜುರೆಲ್	ನಾಟೌಟ್	35	23
ಹೆಟ್ಮೆಯರ್	ಬೌಲರ್ ▸▸ ಭುವನೇಶ್ವರ್, ಕ್ಯಾಚ್ ▸▸ ಪಡಿಕ್ಕಲ್	9	08
ರಾಣಾ	ನಾಟೌಟ್	04	01

ಬೆಂಗಳೂರು

ಓವರ್	ರನ್	ವಿಕೆಟ್	
ಭುವನೇಶ್ವರ್	4	32	1
ದಯಾಳ್	4	36	1
ಹ್ಯಾಝಲ್‌ವುಡ್	3	26	1
ಸುಯೇಶ್	4	39	0
ಪಾಂಡ್ಯ	4	29	1
ಲಿವಿಂಗ್‌ಸ್ಟನ್	1	8	0

ರಾಜಸ್ಥಾನ್

	ಓವರ್	ರನ್	ವಿಕೆಟ್
ಆರ್ಚರ್	4	36	0
ದೇಶಪಾಂಡೆ	2	21	0
ಸಂದೀಪ್	2.3	29	0
ತೀಕ್ಷಣ	2	21	0
ಕಾರ್ತಿಕೇಯ	3	25	1
ಹಸರಂಗ	3	33	0
ರಿಯಾನ್ ಪರಾಗ್	1	10	0

ರಾಯಲ್ ಚಾಲೆಂಜರ್ಸ್ ಬೆಂಗಳೂರು 175/1 (17.3 ಓವರ್)

ರಾಯಲ್ ಚಾಲೆಂಜರ್ಸ್ ಬೆಂಗಳೂರು		ರನ್	ಎಸೆತ
ಸಾಲ್ಟ್	ಬೌಲರ್ ▸▸ ಕಾರ್ತಿಕೇಯ, ಕ್ಯಾಚ್ ▸▸ ಜೈಸ್ವಾಲ್	65	33
ಕೊಹ್ಲಿ	▸▸ ನಾಟೌಟ್★	62	45
ಪಡಿಕ್ಕಲ್	▸▸ ನಾಟೌಟ್★	40	28

ರಾಜಸ್ಥಾನ್ ರಾಯಲ್ಸ್ ವಿರುದ್ಧ ಆರ್‌ಸಿಬಿಗೆ 9 ವಿಕೆಟ್ ಜಯ, ಮತ್ತೆ 3ನೇ ಸ್ಥಾನಕ್ಕೆ ಲಗ್ಗೆ

ಸಾಲ್ಟ್-ಕೊಹ್ಲಿ ಜೋಡಾಟ ಕೆಂಪೇರಿದ ಪಿಂಕ್ ಸಿಟಿ

ಜೈಪುರ: ಫಿಲ್ ಸಾಲ್ಟ್ (65) ಹಾಗೂ ವಿರಾಟ್ ಕೊಹ್ಲಿ (62★) ಅವರ ಅರ್ಧಶತಕಗಳ ಬಲದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು 2025ರ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ 28ನೇ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಗೆಲುವು ಪಡೆದಿದೆ. ಆ ಮೂಲಕ ಟೂರ್ನಿಯಲ್ಲಿ ನಾಲ್ಕನೇ ಗೆಲುವು ಪಡೆದ ರಜತ್ ಪಾಟಿದಾರ್ ನಾಯಕತ್ವದ ಆರ್‌ಸಿಬಿ, ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಲಗ್ಗೆ ಇಟ್ಟಿದೆ. ಈ ಪಂದ್ಯದಲ್ಲಿ ಸೋಲು ಅನುಭವಿಸಿದ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ, ಅಂಕಪಟ್ಟಿಯಲ್ಲಿ 7ನೇ ಸ್ಥಾನದಲ್ಲಿಯೇ ಉಳಿದಿದೆ.

ಭಾನುವಾರ ಇಲ್ಲಿನ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ರಾಜಸ್ಥಾನ್ ರಾಯಲ್ಸ್ ನೀಡಿದ್ದ 174 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಆರ್‌ಸಿಬಿ, ಆರಂಭಿಕ ಆಟಗಾರರ ಅತ್ಯುತ್ತಮ ಪ್ರದರ್ಶನದ ನೆರವಿನಿಂದ 17.3 ಓವರ್‌ಗಳಿಗೆ ಒಂದು ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿ ಭರ್ಜರಿ ಗೆಲುವು ಪಡೆಯಿತು. 196ರ ಸ್ಟ್ರೈಕ್ ರೇಟ್‌ನಲ್ಲಿ ಬ್ಯಾಟ್ ಮಾಡಿದ ಫಿಲ್ ಸಾಲ್ಟ್ ಕೇವಲ 33 ಎಸೆತಗಳಲ್ಲಿ 6 ಸಿಕ್ಸರ್ ಹಾಗೂ 5 ಬೌಂಡರಿಗಳೊಂದಿಗೆ 65 ರನ್‌ಗಳನ್ನು ಸಿಡಿಸಿ ಆರ್‌ಸಿಬಿ ಗೆಲುವಿನಲ್ಲಿ ಪ್ರಧಾನ ಪಾತ್ರ ವಹಿಸಿ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಫಿಲ್ ಸಾಲ್ಟ್-ವಿರಾಟ್ ಕೊಹ್ಲಿ ಜುಗಲ್‌ಬಂದಿ: ಆರ್‌ಸಿಬಿ ಪರ ಇನಿಂಗ್ಸ್ ಆರಂಭಿಸಿದ ಫಿಲ್ ಸಾಲ್ಟ್ ಹಾಗೂ ವಿರಾಟ್ ಕೊಹ್ಲಿ ಸ್ಫೋಟಕ ಬ್ಯಾಟ್ ಮಾಡಿದರು. ಇವರು ಪವರ್‌ಪ್ಲೇನಲ್ಲಿ 65 ರನ್‌ಗಳನ್ನು ಕಲೆ ಹಾಕುವ ಜೊತೆಗೆ ಮುರಿಯದ ಮೊದಲನೇ ವಿಕೆಟ್‌ಗೆ 92 ರನ್‌ಗಳನ್ನು ಸಿಡಿಸಿ ಭರ್ಜರಿ ಆರಂಭವನ್ನು ತಂದುಕೊಟ್ಟರು. ಫಿಲ್ ಸಾಲ್ಟ್ ವಿಕೆಟ್ ಒಪ್ಪಿಸಿದ ಬಳಿಕ ಸ್ಫೋಟಕ ಬ್ಯಾಟಿಂಗ್ ಮುಂದುವರಿಸಿದ ವಿರಾಟ್ ಕೊಹ್ಲಿ, 45 ಎಸೆತಗಳಲ್ಲಿ 2 ಸಿಕ್ಸರ್ ಹಾಗೂ 4 ಬೌಂಡರಿ ಗಳೊಂದಿಗೆ ಅಜೇಯ 62 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ವಿರಾಟ್ ಕೊಹ್ಲಿ ಜೊತೆ ಎರಡನೇ ವಿಕೆಟ್‌ಗೆ 83 ರನ್‌ಗಳನ್ನು ಕಲೆ ಹಾಕಿದ ಕನ್ನಡಿಗ ದೇವದತ್ ಪಡಿಕ್ಕಲ್, 28 ಎಸೆತಗಳಲ್ಲಿ ಅಜೇಯ 40 ರನ್ ಗಳಿಸಿ ತಂಡಕ್ಕೆ ಆಸರೆಯಾದರು.



173 ರನ್‌ಗಳನ್ನು ಕಲೆ ಹಾಕಿದ್ದ ಆರ್‌ಆರ್: ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ್ ರಾಯಲ್ಸ್ ತಂಡ, ಯಶಸ್ವಿ ಜೈಸ್ವಾಲ್ (75 ರನ್) ಅವರ ಅರ್ಧಶತಕದ ಬಲದಿಂದ ತನ್ನ ಪಾಲಿನ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 173 ರನ್‌ಗಳನ್ನು ಕಲೆ ಹಾಕಿತು. ಜೈಸ್ವಾಲ್ ಬಿಟ್ಟರೆ ಮಧ್ಯಮ ಕ್ರಮಾಂಕದಲ್ಲಿ ರಿಯಾನ್ ಪರಾಗ್ (30 ರನ್) ಹಾಗೂ ಧ್ರುವ್ ಜುರೆಲ್ (30) ಉತ್ತಮ ಪ್ರದರ್ಶನ ತೋರಿದರು. ಆದರೆ, ಇನ್ನುಳಿದ ಬ್ಯಾಟ್ಸ್‌ಮನ್‌ಗಳು ವೈಫಲ್ಯ ಅನುಭವಿಸಿದ ಕಾರಣ ಆರ್‌ಆರ್ ಮೊತ್ತ 173ಕ್ಕೆ ಸೀಮಿತವಾಯಿತು.

ಮಿಂಚಿದ ಯಶಸ್ವಿ ಜೈಸ್ವಾಲ್: ಕಳೆದ ಪಂದ್ಯಗಳಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದ ಯಶಸ್ವಿ ಜೈಸ್ವಾಲ್, ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಅರ್ಧಶತಕ ಸಿಡಿಸಿ ಫಾರ್ಮ್‌ಗೆ ಮರಳಿದರು. ಸಂಜು ಸ್ಯಾಮ್ಸನ್ ಜೊತೆ ಇನಿಂಗ್ಸ್ ಆರಂಭಿಸಿದ ಯಶಸ್ವಿ ಜೈಸ್ವಾಲ್ ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತು ಬ್ಯಾಟ್ ಬೀಸಿದರು. ಸಂಜು 15 ರನ್ ಗಳಿಸಿ ವಿಕೆಟ್ ಒಪ್ಪಿಸಿದರೂ ಮತ್ತೊಂದು ಬದಿಯಲ್ಲಿ ಬ್ಯಾಟ್ ಬೀಸಿದ ಜೈಸ್ವಾಲ್, 47 ಎಸೆತಗಳಲ್ಲಿ 75 ರನ್‌ಗಳನ್ನು ಸಿಡಿಸಿದರು. ಆ ಮೂಲಕ ರಾಜಸ್ಥಾನ್ ರಾಯಲ್ಸ್ ಮೊತ್ತವನ್ನು 120ರ ಗಡಿ ದಾಟಿಸಿ ವಿಕೆಟ್ ಒಪ್ಪಿಸಿದರು. ಆದರೆ, ಮಧ್ಯಮ ಕ್ರಮಾಂಕದಲ್ಲಿ ರಿಯಾನ್ ಪರಾಗ್ (30 ರನ್) ಹಾಗೂ ಧ್ರುವ್ ಜುರೆಲ್ (35) ಮಾತ್ರ ಉತ್ತಮ ಪ್ರದರ್ಶನ ತೋರಿದರು. ಆದರೆ, ಇವರು ದೊಡ್ಡ ಮೊತ್ತ ದಾಖಲಿಸಲು ಆರ್‌ಸಿಬಿ ಬೌಲರ್‌ಗಳು ಅವಕಾಶ ಮಾಡಿಕೊಡಲಿಲ್ಲ. ಅದರಲ್ಲಿಯೂ ವಿಶೇಷವಾಗಿ ಆರ್‌ಸಿಬಿ ಪರ ಕೃಣಾಲ್ ಪಾಂಡ್ಯ 4 ಓವರ್‌ಗಳಿಗೆ 29 ರನ್ ನೀಡಿ ಒಂದು ವಿಕೆಟ್ ಕಿತ್ತರು. ಜಾಶ್ ಹೇಝಲ್‌ವುಡ್ 26 ರನ್ ನೀಡಿ ಒಂದು ವಿಕೆಟ್ ಪಡೆದರು.

▸▸ ಪಂದ್ಯ ಶ್ರೇಷ್ಠ ಪ್ರಶಸ್ತಿ: ಫಿಲ್ ಸಾಲ್ಟ್



ಒಂದೇ ಶತಕದಲ್ಲಿ ಹಲವು ರೆಕಾರ್ಡ್ಸ್ ಮುರಿದ ಅಭಿಷೇಕ್

ಸಿಡಿಲ ಶತಕದಲ್ಲಿ ದಾಖಲೆಗಳ ಅಭಿಷೇಕ

ಹೈದರಾಬಾದ್: ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂಜಾಬ್ ಕಿಂಗ್ಸ್ ಹಾಗೂ ಸನ್‌ರೈಸರ್ಸ್ ಹೈದರಾಬಾದ್ ತಂಡಗಳ ನಡುವಿನ ಹಣಾಹಣಿ ವೀಕೆಂಡ್‌ನಲ್ಲಿ ಕ್ರಿಕೆಟ್ ಅಭಿಮಾನಿಗಳ ಕಣ್ಣಿಗೆ ಹಬ್ಬವಾಗಿತ್ತು. ಅತ್ತ ಹೈದರಾಬಾದ್ ಗೆಲುವಿನ ದಾಖಲೆ ಒಂದು ಕಡೆಯಾದರೆ ಅಭಿಷೇಕ್ ಶರ್ಮಾ ಸಿಡಿಲಬ್ಬರದ ಬ್ಯಾಟಿಂಗ್ ಅಭಿಮಾನಿಗಳನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿತ್ತು. ಸನ್‌ರೈಸರ್ಸ್ ಪರ ಐಪಿಎಲ್‌ನಲ್ಲಿ ಚೊಚ್ಚಲ ಶತಕ ಸಿಡಿಸಿದ ಅಭಿಷೇಕ್ ಶರ್ಮಾ ತಂಡದವನ್ನು ಗೆಲುವಿನತ್ತ ಕೊಂಡೊಯ್ದರಲ್ಲದೇ ಹಲವು ದಾಖಲೆಗಳನ್ನ ನುಚ್ಚುನೂರು ಮಾಡಿದರು. ಶರ್ಮಾ ಅವರ ಈ ಸ್ಫೋಟಕ ಶತಕದಿಂದ ಪಂಜಾಬ್ ಕಿಂಗ್ಸ್ ಅತಿ ಹೆಚ್ಚು ರನ್ ಚೇಸ್ ಮಾಡಿ ಗೆದ್ದ 2ನೇ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಅಭಿಷೇಕ್ ಇನ್ನಿಂಗ್ಸ್‌ವೊಂದರಲ್ಲಿ ಅತಿ ಹೆಚ್ಚು ವೈಯಕ್ತಿಕ ರನ್ ಗಳಿಸಿದ ಟಾಪ್-3ನೇ ಆಟಗಾರನಾಗಿ ಹೊರಹೊಮ್ಮಿದರು. ಜೊತೆಗೆ ಹೈದರಾಬಾದ್ ತಂಡದ ಪರ ಈ ಸಾಧನೆ ಮಾಡಿದ ಏಕೈಕ ಆಟಗಾರ ಎನಿಸಿಕೊಂಡರು. ಜೊತೆಗೆ ಐಪಿಎಲ್ ಒಂದೇ ಇನ್ನಿಂಗ್ಸ್‌ನಲ್ಲಿ ಅತಿ ಹೆಚ್ಚು ರನ್ ಬಾರಿಸಿದ ಅಗ್ರ-5 ಆಟಗಾರರ ಪಟ್ಟಿಯಲ್ಲೂ ಸ್ಥಾನ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಅಭಿಷೇಕ್ ಹೇಳಿದ್ದೇನು?

ಇದು ತುಂಬಾ ವಿಶೇಷವಾದ ದಿನ. ತಂಡದ ಗೆಲುವಿನಲ್ಲಿ ಕಾಣಿಕೆ ನೀಡಿದ್ದು ಖುಷಿ ನೀಡಿದೆ. ಮಾರ್ಗದರ್ಶಕ ಯುವರಾಜ್ ಸಿಂಗ್ ಅವರೊಂದಿಗೆ ಸತತ ಸಂಪರ್ಕದಲ್ಲಿದ್ದೆ. ಇನ್ನು ಟೀಮ್ ಇಂಡಿಯಾದ ಸೂಪರ್ ಸ್ಟಾರ್ ಸೂರ್ಯಕುಮಾರ್ ಯಾದವ್ ಅವರೂ ಹಲವು ಸಲಹೆಗಳನ್ನು ನೀಡಿದ್ದರು.

ವೈಯಕ್ತಿಕ ಗರಿಷ್ಠ ರನ್- ಅಗ್ರ ಐವರು ಬ್ಯಾಟರ್ಸ್

ವರ್ಷ	ಆಟಗಾರ	ರನ್	ಎಸೆತ
2013	ಕ್ರಿಸ್ ಗೇಲ್	175	66
2008	ಮೆಕಲಂ	158	73
2025	ಅಭಿಷೇಕ್	141	55
2022	ಡಿಕಾಕ್	140	70
2015	ಎಬಿಡಿ	133	59

ಮಿಂಚಿನ ಶತಕ- ಅಗ್ರ ಐವರು

ವರ್ಷ	ಆಟಗಾರ	ರನ್	ಎಸೆತ
2013	ಕ್ರಿಸ್ ಗೇಲ್	100	30
2010	ಯೂಸುಫ್	100	37
2013	ಮಿಲ್ಲರ್	100	38
2025	ಹೆಡ್	100	39
2015	ಅಭಿಷೇಕ್	100	40

ಅತಿ ಹೆಚ್ಚು ರನ್ ಚೇಸ್ ಮಾಡಿ ಗೆದ್ದ ಐದು ತಂಡ

ತಂಡ	ಮೊತ್ತ	ಎದುರಾಳಿ
ಪಂಜಾಬ್	262/2	ಕೆಕೆಆರ್ ವಿರುದ್ಧ
ಹೈದರಬಾದ್	247/2	ಪಂಜಾಬ್ ವಿರುದ್ಧ
ರಾಜಸ್ಥಾನ್	226/6	ಪಂಜಾಬ್ ವಿರುದ್ಧ
ರಾಜಸ್ಥಾನ್	224/8	ಕೆಕೆಆರ್ ವಿರುದ್ಧ
ಮುಂಬೈ	219/6	ಸಿಎಸ್‌ಕೆ ವಿರುದ್ಧ

ಡೆಲ್ಲಿ ಗೆಲುವಿನ ಓಟಕ್ಕೆ ಮುಂಬೈ ಬ್ರೇಕ್

ಸ್ಕೋರ್ ಬೋರ್ಡ್

ಮುಂಬೈ ಇಂಡಿಯನ್ಸ್ 205/5 (20 ಓವರ್)

ಮುಂಬೈ ಇಂಡಿಯನ್ಸ್		ರನ್	ಎಸೆತ
ರೋಹಿತ್	ಬೌಲರ್ ▸▸ ವಿಪ್ರಜ್ ▸▸ ಎಲ್ಬಿಡಬ್ಲ್ಯು	18	12
ರಿಕಲ್ಟನ್	ಬೌಲರ್ ▸▸ ಕುಲ್ದೀಪ್ ▸▸ ಬೌಲ್ಡ್	41	25
ಯಾದವ್	ಬೌಲರ್ ▸▸ ಕುಲ್ದೀಪ್, ಕ್ಯಾಚ್ ▸▸ ಸ್ಟಾರ್ಕ್	40	28
ತಿಲಕ್	ಬೌಲರ್ ▸▸ ಮುಕೇಶ, ಕ್ಯಾಚ್ ▸▸ ಪೊರೆಲ್	59	33
ಪಾಂಡ್ಯ	ಬೌಲರ್ ▸▸ ವಿಪ್ರಜ್, ಕ್ಯಾಚ್ ▸▸ ಸ್ಟಬ್ಸ್	2	04
ನಮನ್‌ಧೀರ್	ನಾಟೌಟ್	38	17
ವಿಲ್ ಜ್ಯಾಕ್ಸ್	ನಾಟೌಟ್	01	01
ಇತರ		6	

ಡೆಲ್ಲಿ

	ಓವರ್	ರನ್	ವಿಕೆಟ್
ಮಿಚೆಲ್ ಸ್ಟಾರ್ಕ್	3	43	0
ಮುಕೇಶ	4	38	1
ವಿಪ್ರಜ್ ನಿಗಮ್	4	41	2
ಕುಲ್ದೀಪ್	4	23	2
ಅಕ್ಷರ್ ಪಟೇಲ್	2	19	0
ಮೋಹಿತ್ ಶರ್ಮಾ	3	40	0

ಮುಂಬೈ

	ಓವರ್	ರನ್	ವಿಕೆಟ್
ಚಾಹರ್	3	24	1
ಬೋಲ್ಟ್	2	21	0
ಬೂಮ್ರಾ	4	44	1
ಮಿಚಲ್	4	43	2
ಹಾರ್ದಿಕ್ ಪಾಂಡ್ಯ	2	21	0
ಕರಣ್‌ಶರ್ಮಾ	4	36	3

ಡೆಲ್ಲಿ ಕ್ಯಾಪಿಟಲ್ಸ್ 193/10 (19 ಓವರ್)

ಡೆಲ್ಲಿ ಕ್ಯಾಪಿಟಲ್ಸ್		ರನ್	ಎಸೆತ
ಮೆಕ್‌ಗುರ್ಕ್	ಬೌಲರ್ ▸▸ ದೀಪಕ್, ಕ್ಯಾಚ್ ▸▸ ವಿಲ್‌ಜಾಕ್ಸ್	0	01
ಪೊರೆಲ್	ಬೌಲರ್ ▸▸ ಕರಣ್, ಕ್ಯಾಚ್ ▸▸ ನಮನ್‌ಧೀರ್	33	25
ಕರುಣ್ ನಾಯರ್	ಬೌಲ್ಡ್ ▸▸ ಬೌಲರ್ ▸▸ ಮಿಚಲ್	89	40
ಕೆ.ಎಲ್ ರಾಹುಲ್	ಬೌಲರ್, ಕ್ಯಾಚ್ ▸▸ ಕರಣ್ ಶರ್ಮಾ	15	13
ಅಕ್ಷರ್ ಪಟೇಲ್	ಬೌಲರ್ ▸▸ ಬುಮ್ರಾ ಕ್ಯಾಚ್ ▸▸ ಯಾದವ	09	6
ಟ್ರಿಸ್ಟಾನ್ ಸ್ಟಬ್ಸ್	ಬೌಲರ್ ▸▸ ಶರ್ಮಾ ಕ್ಯಾಚ್ ▸▸ ನಮನ್‌ಧೀರ್	01	4
ಅಶುತೋಷ್	▸▸ ರನೌಟ್★	17	14
ವಿಪ್ರಜ್	ಬೌಲರ್ ▸▸ ಶರ್ಮಾ ಕ್ಯಾಚ್ ▸▸ ರಿಕಲ್ಟನ್	14	8
ಸ್ಟಾರ್ಕ್	▸▸ ನಾಟೌಟ್★	01	1
ಕುಲ್ದೀಪ್	▸▸ ರನೌಟ್★	01	1
ಮೋಹಿತ್	▸▸ ರನೌಟ್★	00	1
ಇತರ		13	

ದೆಹಲಿ: ಡೆಲ್ಲಿ ಕ್ಯಾಪಿಟಲ್ಸ್ ಅಜೇಯ ಓಟಕ್ಕೆ ಬ್ರೇಕ್ ಹಾಕಿದ ಮಾಜಿ ಚಾಂಪಿಯನ್ಸ್ ಮುಂಬಯಿ ಇಂಡಿಯನ್ಸ್ ಕೊನೆಗೂ ಗೆಲುವಿನ ಹಳಿಗೆ ಮರಳಿದ್ದಾರೆ. ರಾಷ್ಟ್ರ ರಾಜಧಾನಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ 29 ನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ನೀಡಿದ 206 ರನ್‌ಗಳ ಗುರಿ ಬೆಂಬತ್ತಿದ ಡೆಲ್ಲಿ ಕ್ಯಾಪಿಟಲ್ಸ್ 193 ರನ್‌ಗಳಿಗೆ ಆಲೌಟ್ ಆಗುವ ಮೂಲಕ 12 ರನ್‌ಗಳ ಸೋಲು ಕಂಡಿದೆ.

ಈ ಆವೃತ್ತಿಯಲ್ಲಿ ಮೊದಲ ಪಂದ್ಯ ಆಡುವ ಅವಕಾಶ ಪಡೆದ ಕರುಣ್ ನಾಯರ್ (89 ರನ್) ಸ್ಫೋಟಕ ಅರ್ಧಶತಕದ ಸಿಡಿಸಿದರೂ ಕರಣ್ ಶರ್ಮಾ (36ಕ್ಕೆ 3) ಅವರ ಸ್ಪಿನ್ ಮೋಡಿಗೆ ಸಿಲುಕಿದ ಡೆಲ್ಲಿ ತಂಡ ಸೋಲೊಪ್ಪಿಕೊಳ್ಳಬೇಕಾಯಿತು. 19ನೇ ಓವರ್‌ವರೆಗೂ ಗೆಲ್ಲುವ ನೆಚ್ಚಿನ ತಂಡವಾಗಿದ್ದ ಡೆಲ್ಲಿ ಕ್ಯಾಪಿಟಲ್ಸ್ ಕೊನೆಯ ಓವರ್‌ನಲ್ಲಿ ಘಟಿಸಿದ ಮೂರು ರನ್ ಔಟ್‌ಗಳಿಂದಾಗಿ ಅನಿರೀಕ್ಷಿತವಾಗಿ ಸೋಲು ಒಪ್ಪಿಕೊಳ್ಳಬೇಕಾಯಿತು. ಈ ಮೂಲಕ ಹಾರ್ದಿಕ್ ಪಾಂಡ್ಯ ಬಳಗ ಈ ಐಪಿಎಲ್ ಟೂರ್ನಿಯ ಎರಡನೇ ಗೆಲುವು ಸಾಧಿಸಿದೆ.

ಮುಂಬೈ ಉತ್ತಮ ಆರಂಭ: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ ನಿಗದಿತ 20 ಓವರ್ ಗಳಲ್ಲಿ 5 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿತು. ರೋಹಿತ್ ಶರ್ಮಾ ಮತ್ತು ರಿಯಾನ್ ರಿಕಲ್ಟನ್ ತಂಡಕ್ಕೆ ಉತ್ತಮ ಆರಂಭ ನೀಡಿದರು. ಇವರಿಬ್ಬರ ನಡುವೆ ಮೊದಲ ವಿಕೆಟ್‌ಗೆ 47 ರನ್‌ಗಳ ಜೊತೆಯಾಟ ನೀಡಿದರು. ರೋಹಿತ್ 12 ಎಸೆತಗಳಲ್ಲಿ 18 ರನ್ ಗಳಿಸಿ ಔಟಾಗುವ ಮೂಲಕ ಮತ್ತೆ ನಿರಾಶೆ ಮೂಡಿಸಿದರು. ಆದರೆ ರಿಯಾನ್ ರಿಕಲ್ಟನ್ 25 ಎಸೆತಗಳಲ್ಲಿ 41 ರನ್ ಗಳಿಸಿ ಔಟಾದರು. ಸೂರ್ಯಕುಮಾರ್ ಯಾದವ್ 28 ಎಸೆತಗಳಲ್ಲಿ 40 ರನ್ ಗಳಿಸಿದರು. ತಿಲಕ್ ವರ್ಮಾ 33 ಎಸೆತಗಳಲ್ಲಿ 6 ಬೌಂಡರಿ 3 ಸಿಕ್ಸರ್‌ಗಳ ನೆರವಿನಿಂದ 59 ರನ್ ಗಳಿಸಿದರೆ, ಕೊನೆಯಲ್ಲಿ ಅಬ್ಬರಿಸಿದ ನಮನ್ ಧೀರ್ 17 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸ್ ಸಹಿತ ಅಜೇಯ 38 ರನ್ ಗಳಿಸಿದರು. ಕಳೆದ ಪಂದ್ಯದಲ್ಲಿ ಸೂಪರ್ ಇನ್ನಿಂಗ್ಸ್ ಆಡಿದ್ದ ಹಾರ್ದಿಕ್ ಪಾಂಡ್ಯ ಈ ಪಂದ್ಯದಲ್ಲಿ ನಿರಾಸೆ ಮೂಡಿಸಿದರು. ಅವರು ಕೇವಲ 2 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು.

ಮಿಂಚಿದ ಕನ್ನಡಿಗ ಕರುಣ್

ದೇಶಿಯ ಟೂರ್ನಿಯಲ್ಲಿ ಅತ್ಯಧಿಕ ರನ್ ಗಳಿಸಿದರೂ ಈ ಬಾರಿಯ ಐಪಿಎಲ್ ಆವೃತ್ತಿಯಲ್ಲಿ ಆಡುವ ಅವಕಾಶ ಪಡೆಯದ ಕನ್ನಡಿಗ ಕರುಣ್ ನಾಯರ್ ದಿಲ್ಲಿಯಲ್ಲಿ ನಡೆದ ಪಂದ್ಯದಲ್ಲಿ ಮೊದಲ ಬಾರಿಗೆ ಆಡುವ ಅವಕಾಶ ಪಡೆದರು. ಸಿಕ್ಕಿದ ಅವಕಾಶವನ್ನು ಎರಡೂ ಕೈಗಳಿಂದ ಬಾಚಿಕೊಂಡ ಕರುಣ್ ನಾಯರ್ ತನ್ನ ಬ್ಯಾಟಿಂಗ್ ಪರಾಕ್ರಮವನ್ನು ಸಾಬೀತು ಮಾಡಿದರು. ಮುಂಬಯಿ ತಂಡದ ಎಲ್ಲಾ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದ ಕರುಣ್, ಐದು ಸಿಕ್ಸ್, 12 ಬೌಂಡರಿ ಸಹಿತ 40 ಎಸೆತಗಳಲ್ಲಿ 89 ರನ್ ಗಳಿಸಿದರು.

ಡೆಲ್ಲಿ ಕ್ಯಾಪಿಟಲ್ಸ್ ಬೌಲರ್‌ಗಳ ಪೈಕಿ ವಿಪ್ರಾಜ್ ನಿಗಮ್ ಮತ್ತು ಕುಲದೀಪ್ ಯಾದವ್ ತಲಾ 2 ವಿಕೆಟ್ ಪಡೆದರು. ಮುಖೇಶ್ ಕುಮಾರ್ ಒಂದು ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು.

ಮುಂಬೈ ಇಂಡಿಯನ್ಸ್ ನೀಡಿದ 206 ರನ್ ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಡೆಲ್ಲಿ ಕ್ಯಾಪಿಟಲ್ಸ್ ಆರಂಭಿಕ ಜೇಕ್ ಫ್ರೇಸರ್ ಮೆಕ್, ಚಹರ್ ಬೌಲಿಂಗ್‌ನಲ್ಲಿ ಕ್ಯಾಚ್ ನೀಡಿ, ಯಾವುದೇ ರನ್ ಗಳಿಸದೆ ಶೂನ್ಯಕ್ಕೆ ಔಟಾದರು. ಬಳಿಕ ಅಭಿಷೇಕ್ ಪೊರೆಲ್ 33, ಕರುಣ್ ನಾಯರ್ 89 ರನ್ ಗಳಿಸಿದರೆ, ಕೆಎಲ್ ರಾಹುಲ್ ಕೇವಲ 15 ರನ್ ಗಳಿಸಿ ಕ್ಯಾಚ್ ನೀಡಿ ನಿರ್ಗಮಿಸಿದರು. ಅಕ್ಷರ್ ಪಟೇಲ್ 9 ರನ್ ಗಳಿಸಿ ಬುಮ್ರಾ ಬೌಲಿಂಗ್ ನಲ್ಲಿ ಔಟಾದರು. ಅಶುತೋಷ್ ಶರ್ಮಾ 17, ವಿಪ್ರಾಜ್ ನಿಗಮ್ 14 ರನ್ ಗಳಿಸಿ ಔಟಾದರೆ ಮಿಚೆಲ್ ಸ್ಟಾರ್ಕ್ ಕೇವಲ 1 ರನ್ ಗಳಿಸಿ ಪೆವಿಲಿಯನ್‌ಗೆ ನಿರ್ಗಮಿಸಿದರು.

ಇತರೆ ಸುದ್ದಿ

ಡೋಪಿಂಗ್: ಮನುಗೆ 4 ವರ್ಷ ನಿಷೇಧ



ದೆಹಲಿ: ಜಾವೆಲಿನ್ ಥ್ರೊ ಸ್ಪರ್ಧಿ, ಕನ್ನಡಿಗ ಡಿ.ಪಿ. ಮನು ಅವರು ಉದ್ದೀಪನ ಮದ್ದುಸೇವನೆ ಮಾಡಿರು ವುದು ದೃಢವಾಗಿದೆ. ಈ ತಪ್ಪಿಗಾಗಿ ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ ಘಟಕ (ನಾಡಾ) ಮನುಗೆ 2028 ರವರೆಗೆ ನಿಷೇಧ ವಿಧಿಸಿದೆ. ನಿಷೇಧಿತ ಮಿಥೈಲ್ ಸ್ಟೊಸ್ಟೆರಾನ್ ಅಂಶ ಪರೀಕ್ಷೆಯಲ್ಲಿ ಪಾಸಿಟಿವ್ ಬಂದಿದೆ ಎಂದು ನಾಡಾ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಹಾಸನ ಜಿಲ್ಲೆಯ 25 ವರ್ಷದ ಡಿ.ಪಿ ಮನು ಜಾವೆಲಿನ್ ಥ್ರೋದಲ್ಲಿ ಭಾರತದ ಭರವಸೆಯಾಗಿ ಮೂಡಿಬಂದಿದ್ದರು. ಇದೀಗ 4 ವರ್ಷದ ನಿಷೇಧ ಶಿಕ್ಷೆ ಅವರ ಜಾವೆ ಲಿನ್ ಭವಿಷ್ಯವನ್ನೇ ಮಂಕಾಗಿಸಿದೆ. 2024 ರಿಂದಲೇ ಅವರ ನಿಷೇಧ ಶಿಕ್ಷೆ ಜಾರಿಯಾಗಲಿದೆ. 2023ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮನು ಬೆಳ್ಳಿ ಪದಕ ಗೆದ್ದಿದ್ದರು. ಬುಡಾಪೆಸ್ಟ್ ವಿಶ್ವ ಚಾಂಪಿ ಯನ್‌ಶಿಪ್‌ನಲ್ಲಿ ಆರನೇ ಸ್ಥಾನ ಪಡೆದಿದ್ದರು. ನಾಡಾದ ಡೋಪಿಂಗ್ ವಿರೋಧಿ ನಿಯಮಗಳ 2.1 ಮತ್ತು 2.2 ನೇ ವಿಧಿಗಳ ಅಡಿಯಲ್ಲಿ ಮನು ರಕ್ತದ ಮಾದರಿಯಲ್ಲಿ ನಿಷೇಧಿತ ವಸ್ತು ಇರುವುದು ಕಂಡುಬಂದಿದೆ.

ಭುವಿ 300 ಟಿ20 ಪಂದ್ಯಗಳ ಸರದಾರ

ಜೈಪುರ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮಧ್ಯಮ ವೇಗದ ಬೌಲರ್ ಭುವನೇಶ್ವರ್ ಕುಮಾರ್ ಇದೀಗ ಹೊಸ ಸಾಧನೆ ಬರೆದಿದ್ದಾರೆ. ರಾಜಸ್ಥಾನ ರಾಯಲ್ಸ್ ವಿರುದ್ಧ ಭಾನುವಾರ ಕಣಕ್ಕಿಳಿಯುವ ಮೂಲಕ ಚುಟುಕು ಕ್ರಿಕೆಟ್ ಮಾದರಿಯಲ್ಲಿ 300 ಪಂದ್ಯಗಳನ್ನಾಡಿದ ಮೊದಲ ಭಾರತೀಯ ಬೌಲರ್ ಎಂಬ ಗೌರವಕ್ಕೆ ಅವರು ಪಾತ್ರರಾಗಿದ್ದಾರೆ. ಈ ಪಟ್ಟಿಯಲ್ಲಿ ಟೀಂ ಇಂಡಿಯಾ ಆಲ್ ರೌಂಡರ್ ಆಗಿರುವ ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯ ಅವರು ನಂತರದ ಸ್ಥಾನದಲ್ಲಿ ಇದ್ದಾರೆ.

ಹಾಲಿ-ಮಾಜಿ ವಿಕೆಟ್ ಕೀಪರ್‌ಗಳ ಸೆಣಸಾಟ | ಧೋನಿ ಪಡೆಗೆ ಪುಟಿದೇಳುವ ಹಂಬಲ, ಪಂತ್‌ಗೆ ಪ್ರತಿಷ್ಠೆಯ ಪ್ರಶ್ನೆ

ಲಖನೌ ಸೂಪರ್‌ಗೆ ಚೆನ್ನೈ ಸೂಪರ್ ಸವಾಲು

ಲಖನೌ: ಸತತ ಐದು ಪಂದ್ಯಗಳನ್ನು ಸೋತು 2025ರ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಘಾತಕ್ಕೆ ಒಳಗಾಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡ, ಸೋಮವಾರ (ಏಪ್ರಿಲ್ 14) ನಡೆಯಲಿರುವ 30ನೇ ಪಂದ್ಯದಲ್ಲಿ ಬಲಿಷ್ಠ ಲಖನೌ ಸೂಪರ್ ಜಯಂಟ್ಸ್ ವಿರುದ್ಧ ಕಾದಾಟ ನಡೆಸಲು ಸಜ್ಜಾಗುತ್ತಿದೆ. ಈ ಮಹತ್ವದ ಪಂದ್ಯಕ್ಕೆ ಇಲ್ಲಿನ ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ವೇದಿಕೆ ಸಿದ್ಧವಾಗಿದೆ. ಎಂಎಸ್ ಧೋನಿ ನಾಯಕತ್ವದ ಸಿಎಸ್‌ಕೆ ತನ್ನ ಕೊನೆಯ ಪಂದ್ಯದಲ್ಲಿ ತವರು ಅಭಿಮಾನಿಗಳ ಎದುರು ಕೋಲ್ಕತಾ ನೈಟ್ ರೈಡರ್ಸ್ ವಿರುದ್ಧ 8 ವಿಕೆಟ್‌ಗಳಿಂದ ಸೋಲು ಅನುಭವಿಸಿತ್ತು. ಆದರೆ, ರಿಷಭ್ ಪಂತ್ ನಾಯಕತ್ವದ ಎಲ್‌ಎಸ್‌ಜಿ, ತನ್ನ ಕೊನೆಯ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತ್ತು.

ಲಖನೌ ಸೂಪರ್ ಜಯಂಟ್ಸ್ ತಂಡ ಇಲ್ಲಿಯವರೆಗೂ ಆಡಿದ 6 ಪಂದ್ಯಗಳಲ್ಲಿ 4ರಲ್ಲಿ ಗೆಲುವು ಪಡೆದಿದ್ದು, ಇನ್ನುಳಿದ ಎರಡರಲ್ಲಿ ಸೋಲು ಅನುಭವಿಸಿದೆ. ಒಟ್ಟು 8 ಅಂಕಗಳೊಂದಿಗೆ ಎಲ್‌ಎಸ್‌ಜಿ ಟೂರ್ನಿಯ ಪಾಯಿಂಟ್ಸ್ ಟೇಬಲ್‌ನಲ್ಲಿ ಮೂರನೇ ಸ್ಥಾನದಲ್ಲಿದೆ. ಲಖನೌ ಪರ ನಿಕೋಲಸ್ ಪೂರನ್, ಏಡೆನ್ ಮಾರ್ಕ್ರಮ್ ಹಾಗೂ ಮಿಚೆಲ್ ಮಾರ್ಷ್ ಭರ್ಜರಿ ಫಾರ್ಮ್‌ನಲ್ಲಿದ್ದಾರೆ. ಇದು ಲಖನೌ ಪಾಲಿಗೆ ಪ್ಲಸ್ ಪಾಯಿಂಟ್ ಆಗಿದೆ. ಬೌಲಿಂಗ್‌ನಲ್ಲಿ ಶಾರ್ದುಲ್ ಠಾಕೂರ್, ದಿಗ್ವೇಶ್ ರಾಠಿ ಹಾಗೂ ರವಿ ಬಿಷ್ಣೋಯ್ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ.

ಲಖನೌ

- ಮಾರ್ಕ್ರಮ್
- ಮಾರ್ಷ್
- ಪೂರನ್
- ರಿಷಭ್ ಪಂತ್ ▸▸ ನಾಯಕ, ಕೀಪರ್
- ಮಿಲ್ಲರ್
- ಸಮದ್
- ಶಾರ್ದುಲ್
- ಆಕಾಶದೀಪ್
- ದಿಗ್ವೇಶ್ ರಾಠಿ
- ಆವೇಶ್ ಖಾನ್
- ಬಿಷ್ಣೋಯ್

ಮುಖಾಮುಖಿ

ಲಖನೌ ಸೂಪರ್ ಜಯಂಟ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಒಟ್ಟು 5 ಪಂದ್ಯಗಳಲ್ಲಿ ಕಾದಾಟ ನಡೆಸಿವೆ. ಇದರಲ್ಲಿ ಲಖನೌ ತಂಡ ಮೂರು ಪಂದ್ಯಗಳಲ್ಲಿ ಗೆಲುವು ಪಡೆದಿದ್ದರೆ, ಚೆನ್ನೈ ತಂಡ ಕೇವಲ ಒಂದು ಪಂದ್ಯವನ್ನು ಮಾತ್ರ ಗೆದ್ದಿದೆ. ಇನ್ನುಳಿದ ಒಂದು ಪಂದ್ಯ ಫಲಿತಾಂಶವಿಲ್ಲದೆ ಅಂತ್ಯವಾಗಿದೆ. 2024ರ ಐಪಿಎಲ್ ಟೂರ್ನಿಯಲ್ಲಿ ಕೊನೆಯ ಬಾರಿ ಉಭಯ ತಂಡಗಳು ಕಾದಾಟ ನಡೆಸಿದ್ದವು. ಈ ಪಂದ್ಯವನ್ನು ಎಲ್‌ಎಸ್‌ಜಿ ಗೆದ್ದುಕೊಂಡಿತ್ತು.

ಚೆನ್ನೈ ಸೂಪರ್ ಕಿಂಗ್ಸ್ ತಂಡ ಪ್ರಸಕ್ತ ಟೂರ್ನಿಯಲ್ಲಿ ಹೀನಾಯ ಪ್ರದರ್ಶನವನ್ನು ತೋರುತ್ತಿದೆ. ಆರಂಭಿಕ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಗೆಲುವು ಪಡೆದ ಬಳಿಕ ನಂತರ ಸತತ ಐದು ಪಂದ್ಯಗಳಲ್ಲಿ ತಂಡ ಸೋಲು ಅನುಭವಿಸಿದೆ. ಋತುರಾಜ್ ಗಾಯಕ್ವಾಡ್ ಗಾಯದ ಕಾರಣ ಟೂರ್ನಿಯಿಂದ ಹೊರ ನಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ಎಂಎಸ್ ಧೋನಿ ಕಳೆದ ಪಂದ್ಯದ ಮೂಲಕ ಸಿಎಸ್‌ಕೆ ನಾಯಕತ್ವಕ್ಕೆ ಮರಳಿದ್ದಾರೆ. ಆದರೂ ಪ್ರಸಕ್ತ ಟೂರ್ನಿಯಲ್ಲಿ ಸಿಎಸ್‌ಕೆ ತಂಡದ ಹಣೆಬರಹ ಇನ್ನೂ ಬದಲಾಗಲಿಲ್ಲ. ಹಾಗಾಗಿ ಕಳೆದ ಪಂದ್ಯದಲ್ಲಿ ಕೆಕೆಆರ್ ವಿರುದ್ಧ ಹೀನಾಯವಾಗಿ ಸೋಲು ಅನುಭವಿಸಿತ್ತು.

ಚೆನ್ನೈ

- ರಚಿನ್
- ಕಾನ್ವೆ
- ತ್ರಿಪಾಠಿ
- ವಿ.ಶಂಕರ್
- ಧೋನಿ ▸▸ ನಾಯಕ, ಕೀಪರ್
- ದುಬೆ
- ಜಡೇಜಾ
- ಅಶ್ವಿನ್
- ನೂರ್ ಅಹ್ಮದ್
- ಕಾಂಬೋಜ್
- ಖಲೀಲ್

ಪಿಚ್ ರಿಪೋರ್ಟ್

ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಲಖನೌ ಸೂಪರ್ ಜಯಂಟ್ಸ್ ನಡುವಣ ಪಂದ್ಯ ನಡೆಯುವ ಏಕನಾ ಕ್ರೀಡಾಂಗಣದ ಪಿಚ್ ಬ್ಯಾಟ್ಸ್‌ಮನ್‌ಗಳ ಸ್ನೇಹಿಯಾಗಿದೆ. ಈ ಅಂಗಣದಲ್ಲಿ ಚೇಸಿಂಗ್ ಸುಲಭವಾಗಿದೆ. ಈ ಕಾರಣದಲ್ಲಿ ಟಾಸ್ ಗೆದ್ದ ತಂಡದ ನಾಯಕ ಚೇಸಿಂಗ್ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆ ಇದೆ. ಪ್ರಥಮ ಇನಿಂಗ್ಸ್‌ನಲ್ಲಿ 220ಕ್ಕೂ ಅಧಿಕ ಮೊತ್ತವನ್ನು ಕಲೆ ಹಾಕಿದರೆ ಉತ್ತಮ.

ರಿಷಭ್ ಪಂತ್ ನಾಯಕತ್ವದ ಲಖನೌ ಸೂಪರ್ ಜಯಂಟ್ಸ್ ತಂಡ ಪ್ರಸಕ್ತ ಟೂರ್ನಿಯಲ್ಲಿ ಉತ್ತಮ ಪ್ರದರ್ಶನವನ್ನು ತೋರುತ್ತಿದೆ. ಬ್ಯಾಟಿಂಗ್‌ನಲ್ಲಿ ನಿಕೋಲಸ್ ಪೂರನ್, ಏಡನ್ ಮಾರ್ಕ್ರಮ್ ಹಾಗೂ ಮಿಚೆಲ್ ಮಾರ್ಷ್ ಅದ್ಭುತ ಫಾರ್ಮ್‌ನಲ್ಲಿದ್ದಾರೆ.

ಪಂತ್ ಇನ್ನೂ ಫಾರ್ಮ್ ಕಂಡುಕೊಳ್ಳದಿರುವುದೊಂದೇ ತಂಡಕ್ಕಿರುವ ಚಿಂತೆ. ಸಿಎಸ್‌ಕೆ ತಂಡ ಬ್ಯಾಟಿಂಗ್‌ನಲ್ಲಿ ಸತತವಾಗಿ ವೈಫಲ್ಯ ಅನುಭವಿಸುತ್ತಿದೆ. ಚೆನ್ನೈ ಮೈ ಕೊಡವಿ ಎದ್ದೇಳದಿದ್ದರೆ ಪಂದ್ಯ ಏಕಪಕ್ಷೀಯವಾಗುವ ಸಾಧ್ಯತೆ ಇದೆ.